Budget Estimates for 1979-80

Demands for Grants

Demand No. 1, 2, 3 and 33 (Debate Continued)

MR SPEAKER.--We shall now go to the next item on the agenda, namely, further discussion and voting of Demands for Grants for the year 1979-80.

† ವೈ. ರಾಮಕೃಷ್ಣ (ಆನೇಕಲ್)-- ಸನ್ಮಾನ್ಯ ಅಧ್ಯಕ್ಷರೇ ಮೊನ್ನೆದಿವಸ ರೈತರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ರೈತರು ಬೆಳೆಯುತಕ್ಕಂಥ ರಾಗಿ, ಜೋಳ, ಬಾಜ್ರ ಇವೇ ಮುಂತಾದುವುಗಳ ಕಡೆಗೆ ಸರ್ಕಾರದವರ ಗಮನ ಹೋಗಲಿಲ್ಲವೆಂದು ಹೇಳುವುದಕ್ಕೆ ವ್ಯಥೆಪಡುತ್ತೇನೆ. ಸ್ವಾಮಿ ನಮ್ಮ ಕರ್ನಾಟಕ ರಾಜ್ಯದಲ್ಲಿ ರಾಗಿಯನ್ನು ಬೆಳೆದಿರುವ ಬಡ ರೈತರ ಗೋಳು ಬಹಳ ಶೋಚನೀಯವಾಗಿದೆ. ತಾವುಕೂಡ ಕಣ್ಣಾರೆ ಕಂಡಿದ್ದೀರಿ. ತಾವು ತಮ್ಮ ಕ್ಷೇತ್ರಕ್ಕೆ ಹೋದಾಗ ರಾಗಿಯ ದರ ಕೆಳಮಟ್ಟಕ್ಕೆ ಇಳಿದಿದೆಯೆಂದು ತಿಳಿದಿರುತ್ತದೆ. ರೈತನು ಒಂದು ಪಲ್ಲ ರಾಗಿಯನ್ನು ಬೆಳೆಯಬೇಕಾದರೆ ೧೦೦ ರೂಪಾಯಿಗಳಷ್ಟು ಖರ್ಚುಮಾಡಿರುತ್ತಾರೆ. ಮಾರಾಟವಾಗುತ್ತಿರುವುದು ಒಂದು ಪಲ್ಲಕ್ಕೆ ೭೦-೮೦ ಮ್ಯಾಕ್ಸಿಮಮ್ ಎಂದರೆ ೪೦ ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ನವೆಂಬರ್ ಡಿಸೆಂಬರ್ ತಿಂಗಳಲ್ಲಿ ತಮ್ಮ ಕ್ಷೇತ್ರದಲ್ಲಿ ಭಾಷಣ ಮಾಡುತ್ತಾ ರಾಗಿ ಜೋಳವನ್ನು ಬೆಳೆದಂಥ ರೈತರಿಗೆ ಒಳ್ಳೆಯ ಬೆಲೆಯನ್ನು ಕೊಡುತ್ತೇವೆಂದು ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಿ. ಇಷ್ಟು ಹೊತ್ತಿಗೆ ಕೇಂದ್ರ ಸರ್ಕಾರದವರು ಕೃಷಿ ಕಾರ್ಪೊರೇಷನ್ ಇಲಾಖೆಯವರು ಅವರು ಸಪೋರ್ಟ್ ಪ್ರೈಸ್ ೮೫ ರೂಪಾಯಿ ಬೆಲೆಯನ್ನು ನಿಗದಿ ಮಾಡಿ. ಸಾಗಾಣಿಕೆ ವೆಚ್ಚ ಇದನ್ನು ಸೇರಿಸಿ ೯೧ ರೂಪಾಯಿಗೆ ನಿಗದಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರದವರು ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೊಂಡುಕೊಳ್ಳಲು ಹೋಗುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಸರ್ಕಾರಿ ಅಧಿಕಾರಿಗಳ ಮನೋದೋರಣೆಯೇ ಕಾರಣವೆಂದು ವಿಧಿ ಇಲ್ಲದೆ ಹೇಳಬೇಕಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಗ್ರಾಮಾಂತರಪ್ರದೇಶದಲ್ಲಿರತಕ್ಕಂಥ ಬಡಜನರು ತಾವುಬೆಳೆದಂಥ ರಾಗಿಯನ್ನು ಮಾರಿ ತಮ್ಮ ನಿತ್ಯಜೀವನದ ವಸ್ತುಗಳನ್ನು ಕೊಂಡುಕೊಳ್ಳಬೇಕಾಗಿರುತ್ತದೆ. ಅಂಥ ಪರಿಸ್ಥಿತಿಯಲ್ಲಿ ತಾವು ಬಹುಶಃ ಅವರಿಗೆ ೯೧ ರೂಪಾಯಿಗಳ ಬೆಲೆಯನ್ನು ಕೊಟ್ಟಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತೆಂದು ತಾವು ಊಹಿಸಬಹುದು. ತಾವು ಕೂಡ ಆ ರೀತಿಯಾದ ಕಾರ್ಯಕ್ರಮವನ್ನು ಜಾಗ್ರತೆಯಾಗಿ ತೆಗೆದುಕೊಳ್ಳಲಿಲ್ಲ. ರೈತರು ಎಲ್ಲ ಆಹಾರ ಧಾನ್ಯಗಳನ್ನು ಮಾರಿದಮೇಲೆ ಅಂತಿಮವಾಗಿ ಒಂದು ನಿರ್ಣಯವನ್ನು ತೆಗೆದುಕೊಂಡಿರಿ. ರಾಗಿ, ಜೋಳವನ್ನು ೯೧ ರೂಪಾಯಿಗೆ ಕೊಡತಕ್ಕಂಥ ನಿರ್ಣಯವನ್ನು ಇಂಡಿಯಾ ಸರ್ಕಾರದವರು ಕೊಡುತ್ತೇವೆಂದು ಹೇಳಿದಮೇಲೆ ತಾವು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿದಿರಿ. ಈ ಮಧ್ಯೆ ಏನಾಯಿತು ಎಂದರೆ ಬಡತನದ ದಿಸೆಯಲ್ಲಿರತಕ್ಕಂಥ ರೈತ ತಾನು ಬೆಳೆದಂಥ ರಾಗಿ ಜೋಳವನ್ನು ಬಹಳ ಕನಿಷ್ಟವಾದ ಬೆಲೆಗೆ ಮಾರಬೇಕಾಯಿತು. ಇದನ್ನು ಮಧ್ಯವರ್ತಿಗಳು ಸದವಕಾಶವನ್ನು ಉಪಯೋಗಿಸಿಕೊಂಡು ೬೦-೭೦ ರೂಪಾಯಿಗಳಿಗೆ ಖರೀದಿ ಮಾಡಿಕೊಂಡು ಅದನ್ನೇ ನಿಮ್ಮ ಕಾರ್ಪೊರೇಷನ್‌ಗೆ ೯೦ ರೂಪಾಯಿನಂತೆ ಮಾರಾಟ ಮಾಡಿರುತ್ತಾರೆ. ಈ ರೀತಿ ಬೆಳೆದಂಥ ರೈತನಿಗೂ ಲಾಭವಾಗಲಿಲ್ಲ, ಸರ್ಕಾರಕ್ಕೂ ಲಾಭವಾಗಲಿಲ್ಲ. ಮಧ್ಯವರ್ತಿಗಳಿಗೆ ಲಾಭವಾಯಿತು. ಆದ್ದರಿಂದ ಇನ್ನು ಮುಂದೆ ಇಂಥದ್ದಕ್ಕೆ ಅವಕಾಶ ಕೊಡಬಾರದೆಂದು ಹೇಳಬಯಸುತ್ತೇನೆ. ಫುಡ್ ಕಾರ್ಪೊರೇಷನ್ ತಾವು ಒಂದು ಆಜ್ಞೆಯನ್ನು ಹೊರಡಿಸಿ ರೈತರಿಗೆ ನೆರವಾಗಬೇಕಿತ್ತೆಂದು ಬಹಳ ನೊಂದ ಮನಸ್ಸಿನಿಂದ ತಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ನನಗೆ ತಿಳಿದಿರುವಂತೆ ದೆಹಲಿಯಲ್ಲಿ ನಡೆದಂಥ ಫುಡ್ ಡೈರೆಕ್ಟರ್‌ರವರ ಕಾನ್‌ಫರೆನ್ಸ್‌ಗೆ ನಮ್ಮ ಸ್ಟೇಟ್ ಫುಡ್ ಡೈರೆಕ್ಟರೂ ಕೂಡ ಹೋಗಿದ್ದರೂ ಎಂದು ಗೊತ್ತಿರುತ್ತದೆ. ಅವರು ಒಂದು ಸ್ಟೇಟ್‌ಮೆಂಟ್ ಮಾಡಿರುತ್ತಾರೆ. ರಾಗಿಯಾಗಲಿ ಜೋಳವಾಗಲಿ ಯಾವ ಕೋರ್ಸ್

ಗ್ರೈನ್ಸ್ ಬೆಲೆಯೂ ಕೂಡ ೧೦೦ ರೂಪಾಯಿಗಳಿಗಿಂತ ಕೆಳಗೆ ಹೋಗಿಲ್ಲ, ಮತ್ತು ಯಾರೂ ಮಾರಾಟ ಮಾಡಲಿಕ್ಕೆ ಮುಂದೆ ಬಂದಿಲ್ಲವೆಂದು ಹೇಳಿದ್ದಾರೆ. ಬಹುಶಃ ಅವರು ವಾಸ್ತವಾಂಶವನ್ನು ಅರಿತು ಹೇಳಲಿಲ್ಲವೆಂದು ನಾನು ತಿಳಿಯುತ್ತೇನೆ. ಮುಂದೆ ಈ ರೀತಿ ಆಗದ ಹಾಗೆ ತಾವು ನೋಡಿಕೊಳ್ಳುತ್ತೀರೆಂದು ನಾನು ಭಾವಿಸುತ್ತೇನೆ. ಈವೊತ್ತು ಪಂಜಾಬು, ಹರಿಯಾಣ ಇಂಥ ಕಡೆಗಳಲ್ಲಿ ಸಪೋರ್ಟ್ ಪ್ರೈಸ್ ಸಿಕ್ಕದ ರೈತ ಏನು ಮಾಡುತ್ತಿದ್ದಾನೆ ಎನ್ನುವುದು ತಮಗೂ ತಿಳಿದಿರುತ್ತದೆ. ತಮಗೆ ಗೊತ್ತಿರಬಹುದು ಕೋಳಿ ಕಸ ಎಂದು ಏನು ಹೇಳುತ್ತಾರೆ. ಅದನ್ನು ಕ್ವಿಂಟಾಲ್‌ಗೆ ೧೫೦ ರೂಪಾಯಿನಂತೆ ಮಾರಾಟ ಮಾಡುತ್ತಾರೆ. ಒಂದು ಗೋಣಿ ಚೀಲದಲ್ಲಿ ಕೋಳಿಕಸ ಎಂದರೆ ಮೂರನೆ ಒಂದು ಭಾಗ ಕೋಳಿಕಸ ಇದ್ದರೆ, ಅದರಲ್ಲಿ ಮೂರನೆ ಎರಡುಭಾಗ ಬತ್ತದ ಒಟ್ಟು ಇರುತ್ತದೆ. ಇದಕ್ಕೆ ಇಷ್ಟೊಂದು ಬೆಲೆ ಇರಬೇಕಾದರೆ ರೈತ ಬೆಳೆದಂಥ ರಾಗಿಗೆ ೫೦–೬೦ ರೂಪಾಯಿಗಳ ಬೆಲೆಯನ್ನು ಕೊಟ್ಟರೆ ಆತನು ಯಾವರೀತಿ ಮುಂದೆ ಬರುತ್ತಾನೆ ಎನ್ನುವುದನ್ನು ದಯವಿಟ್ಟು ತಾವು ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ರೈತರು ಕೊಡಬೇಕಾದ ಹಲವಾರು ಸಾಲಗಳನ್ನು ಸರ್ಕಾರದವರು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಎಂಥ ಸಾಲಗಳನ್ನು ವಜಾ ಮಾಡಬೇಕು ಎಂಬುದನ್ನು ನಾನು ಹೇಳುತ್ತೇನೆ. ತಾವು ಬಾವಿ ತೆಗೆಯುವುದಕ್ಕೆ ಸಾಲ ಕೊಡುತ್ತೀರಿ. ಅವನು ಬಾವಿ ತೆಗೆದಾಗ ಆ ಬಾವಿಯಲ್ಲಿ ನೀರ ಬೀಳದಿದ್ದರೆ ಅದು ಅವನ ತಪ್ಪಲ್ಲ. ಅಂಥ ಸಾಲವನ್ನು ತಾವು ವಸೂಲು ಮಾಡಬಾರದು, ವಜಾ ಮಾಡಬೇಕು. ಎರಡನೆಯದಾಗಿ ತಾವು ಬೀಜವನ್ನು ರೈತರಿಗೆ ಕೊಡುತ್ತೀರಿ. ತಾವು ಕೊಟ್ಟ ಬೀಜ ಹುಟ್ಟದೇ ಇದ್ದಾಗ ಬೆಳೆ ವಿಫಲವಾದಾಗ ದಯವಿಟ್ಟು ಅಂಥ ಸಾಲವನ್ನು ವಜಾ ಮಾಡಬೇಕು. ಅತಿವೃಷ್ಟಿ ಮತ್ತು ಅನಾವೃಷ್ಟಿಗಳಿಗೆ ಬೆಳೆ ಸಿಕ್ಕಿದಾಗ ಅಂಥ ಸಂದರ್ಭದಲ್ಲಿ ಕೂಡ ಸಾಲವನ್ನು ಮನ್ನಾ ಮಾಡಬೇಕು. ಜಮೀನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಬುಲ್ಡೋಜರ್ ತೆಗೆದುಕೊಂಡು ಹೋಗಿ ಭೂಮಿ ಸಮ ಮಾಡಿದಾಗ ಆ ಭೂಮಿಯಲ್ಲಿ ಬಂಡೆಗಳು ಸಿಕ್ಕಿದರೆ ಅಥವಾ ವ್ಯವಸಾಯ ಮಾಡಲಿಕ್ಕೆ ಯೋಗ್ಯವಲ್ಲದೇ ಇದ್ದರೆ ಅಂಥ ಸಾಲವನ್ನು ಮನ್ನಾ ಮಾಡುವುದಕ್ಕೆ ಶಿಫಾರಸು ಮಾಡಬೇಕು. ಮತ್ತು ಕೃಷಿ ಕಾರ್ಮಿಕರಿಗೆ ತಾವು ಸರ್ಕಾರದವರು ಎಷ್ಟು ಸಹಾಯ ಮಾಡಬಹುದೋ ಅಷ್ಟನ್ನೂ ಮಾಡಬೇಕು. ಮಲೆನಾಡಿನಲ್ಲಿರುವ ಕೃಷಿ ಕಾರ್ಮಿಕರು ಪ್ರತಿ ನಿತ್ಯ ಓಡಾಡಬೇಕಾದರೆ ಅವರ ಹತ್ತಿರ ಹಣ ಇರುವುದಿಲ್ಲ. ಅದಕ್ಕೋಸ್ಕರ ಅವರಿಗೆ ಬಸ್ ಪಾಸ್‌ಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಯಾರಿಗೆ ಜಮೀನಿರುವುದಿಲ್ಲ, ಯಾರು ಅತ್ಯಂತ ಬಡವರಾಗಿರುತ್ತಾರೆ, ಯಾರು ಬಹಳ ಕಷ್ಟದಿಂದ ಸಂಸಾರವನ್ನು ನಿರ್ವಹಿಸಿಕೊಂಡು ಹೋಗುತ್ತಿರುತ್ತಾರೆ ಅಂಥವರು ಕೂಲಿ ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುವಂತೆ ಬಸ್ ಪಾಸ್‌ಗಳನ್ನು ಕೊಡಿಸಿ. ಇನ್ನು ನೀರಿನ ದರದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ವಿಚಾರ ಹೇಳಬೇಕಾದರೆ ಗಂಟೆಗಂಟಲೇ ಆಗುತ್ತದೆ. ಆದರೆ ನಾನು ಈಗ ಅದನ್ನೆಲಾ ಹೇಳದೇ ಎರಡೇ ಎರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ. ೧೯೪೭ನೇ ಇಸವಿಯಿಂದ ಹೊಸದಾಗಿ ಯಾರೂ ಕೆರೆಗಳನ್ನು ಕಟ್ಟಿಸಿಲ್ಲ. ಗಂಗರಸರು ಆಳುತ್ತಿದ್ದ ಕಾಲದಲ್ಲಿ ಕೆರೆಗಳನ್ನು ಕಟ್ಟಿರುವುದು. ಈ ಕೆರೆಗಳಿಂದ ಕೆಲವು ಸಣ್ಣ ರೈತರು ವ್ಯವಸಾಯ ಮಾಡುತ್ತಿರುತ್ತಾರೆ. ಆ ಕಾಲದಲ್ಲಿ ಕಟ್ಟಿಸಿರುವ ಕೆರೆಗಳಿಂದ ನೀರನ್ನು ಉಪಯೋಗಿಸಿಕೊಂಡರೆ ಅದಕ್ಕೆ ವಾಟರ್ ರೇಟ್ ಕೇಳುವುದು ಯಾವ ನ್ಯಾಯ ? ಯಾವ ಧರ್ಮ ? ಹೊಸದಾಗಿ ಪ್ರಾಜೆಕ್ಟ್‌ಗಳನ್ನು ಮಾಡಿದರೆ ಸಾಲ ಮಾಡಿದ್ದೇವೆ ಬಡ್ಡಿ ಕಟ್ಟಬೇಕು ಆದ್ದರಿಂದ ನೀವು ಸ್ವಲ್ಪ ಹಣ ಕೊಡಿ ಎಂದು ವ್ಯವಸಾಯಗಾರರನ್ನು ಕೇಳಿದರೆ ಅದರಲ್ಲಿ ನ್ಯಾಯ ಇದೆ. ಆದರೆ ಇಲ್ಲಿ ಏನೂ ಮಾಡದೇ ೩೦ ವರ್ಷದ ಹಿಂದೆ ಕಟ್ಟಿಸಿರುವ ಕೆರೆಗಳಿಗೆ ವಾಟರ್ ರೇಟ್ ಕೇಳಿದರೆ ಅದು ಎಷ್ಟು ಸಮಂಜಸ ಎಂಬುದನ್ನು ಯೋಚನೆ ಮಾಡಬೇಕು. ಒಂದು ವೇಳೆ ಕೆರೆಯಲ್ಲಿ ನೀರಿದ್ದು ಅದನ್ನು ವ್ಯವಸಾಯಕ್ಕೆ ಬಳಸಿಕೊಂಡಾಗ ವಾಟರ್ ರೇಟನ್ನು ಕೇಳಿದರೆ ಕೊಡುವುದು ನ್ಯಾಯ. ಕೆಲವು ಕಡೆಗಳಲ್ಲಿ ನೀರಿಲ್ಲದಿದ್ದರೂ ಕೂಡ ವಾಟರ್ ರೇಟನ್ನು ಕೇಳುತ್ತಾರೆ. ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ೧೯೭೪–೭೫ರಲ್ಲಿ ಬಹುತೇಕ ಕೆರೆಗಳು ಒಣಗಿಹೋಯಿತು. ಭೀಮನಸಮುದ್ರದಲ್ಲಿ ನೀರಿತ್ತೆ ? ಅದಕ್ಕೂ ಕೂಡ ರೆವಿನ್ಯೂ ಅಧಿಕಾರಿಗಳು ವಾಟರ್ ರೇಟ್ ಹಾಕಿದ್ದಾರೆ. ಈ ರೀತಿ ರೈತರಿಗೆ ಕಷ್ಟ ಕೊಡುವುದಕ್ಕೆ ಹೋಗಬೇಡಿ. ಅದೇ ರೀತಿ ಮಲೆನಾಡಿನಲ್ಲಿ ತಮಗೆ ಗೊತ್ತಿದೆ. ಅಲ್ಲಿ ಸಾಮಾನ್ಯವಾಗಿ ಕೆರೆ ನೀರನ್ನು ಉಪ

ಯೋಗಿಸಿ ಯಾರೂ ವ್ಯವಸಾಯ ಮಾಡುವುದಿಲ್ಲ. ಒಂದು ವೇಳೆ ಮಳೆ ಕಾಲಕ್ಕೆ ಸರಿಯಾಗಿ ಬರದಿದ್ದರೆ ಆಗ ಮಾತ್ರ ಸ್ವಲ್ಪ ಮಟ್ಟಿಗೆ ಕೆರೆ ನೀರನ್ನು ಬಳಸಬಹುದು. ಅಂಥ ಕಡೆ ಕೂಡ ವಾಟರ್ ರೇಟ್ ಹಾಕುತ್ತೀರಿ. ವಾಟರ್ ರೇಟ್ ಹಾಕಿದರೂ ಎಷ್ಟು ನಾಮಿನಲ್ ಆಗಿ ಹಾಕಬೇಕೋ ಅಷ್ಟನ್ನು ಹಾಕಿ. ಇಲ್ಲದೇ ಹೋದರೆ ವ್ಯವಸಾಯಗಾರರಿಗೆ ಬಹಳ ತೊಂದರೆಯಾಗುತ್ತದೆ. ಈ ರೀತಿ ನೀವು ಎಲ್ಲ ಕಡೆಯಿಂದಲೂ ತೆರಿಗೆಗಳನ್ನು ಹಾಕುತ್ತಾ ಹೋದರೆ ರೈತ ವ್ಯವಸಾಯವನ್ನು ಬಿಡತಕ್ಕ ಪರಿಸ್ಥಿತಿ ಬಂದೀತು ! ಈ ಭಯದಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನು ವಿದ್ಯುಚ್ಛಕ್ತಿ ದರದ ಬಗ್ಗೆ ಹೇಳುವುದಾದರೆ ಕರ್ನಾಟಕದ ರೈತರು ಇಂದರಿಂದ ಬಹಳ ನೋವನ್ನು ಅನುಭವಿಸುತ್ತಿದ್ದಾರೆ ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರಕ್ಕೆ ಹೋಗಿ ನೋಡಿದರೆ ಬಹಳ ಸಂತೋಷವಾಗುತ್ತದೆ. ಅಲ್ಲಿ ರೈತರಿಗೆ ಬಹಳ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ೨,೬೭.೦೦೦ ಪಂಪ್ ಸೆಟ್ಟುಗಳಿಂದ ನೀರನ್ನು ಎತ್ತುತ್ತಿದ್ದಾರೆ. ಇಲ್ಲಿ ರೈತರು ಕೊಡತಕ್ಕ ರೇಟ್ ಒಂದು ಯೂನಿಟ್ಟಿಗೆ ೨೫ ಪೈಸೆಯಂತೆ. ಇದರ ಜೊತೆಗೆ ಮೀಟರ್ ಛಾರ್ಜು, ಬಾಡಿಗೆ, ಎಲ್ಲಾ ಸೇರಿದರೆ ಒಟ್ಟು ೪೬೦/- ರೂಪಾಯಿ; ತಿಂಗಳಿಗೆ ಆಗುತ್ತದೆ. ಉತ್ತರ ಪ್ರದೇಶದಲ್ಲಿ ಒಂದು ಹೆಚ್. ಪಿ ಗೆ ೧೫ ರೂಪಾಯಿ ಕೊಟ್ಟರೆ ಅವನು ಎಷ್ಟು ಬೇಕಾದರೂ ಉಪಯೋಗಿಸಿಕೊಳ್ಳಬಹುದು ೫ ಹೆಚ್. ಪಿ. ಗೆ ೭೫ ರೂಪಾಯಿ ಮಾತ್ರ ಆಗುತ್ತದೆ. ಈಗ ಇನ್ನೂ ಕಡಿಮೆ ಮಾಡಿದ್ದಾರೆ. ಬಹುಶಃ ಕರ್ನಾಟಕದ ಒಬ್ಬ ರೈತ ಒಂದು ತಿಂಗಳಿಗೆ ಎಷ್ಟು ಹಣ ಕೊಡಬೇಕೋ ಅದನ್ನು ಉತ್ತರ ಪ್ರದೇಶದ ರೈತ ಒಂದು ವರ್ಷಕ್ಕೆ ಕೊಡುತ್ತಾನೆ. ಮಾನ್ಯ ಮಂತ್ರಿಗಳು ಆ ರಾಜ್ಯಗಳಿಂದ ವಿವರವನ್ನು ತರಿಸಿಕೊಂಡು ನೋಡಿ. ಮಹಾರಾಷ್ಟ್ರದಲ್ಲಿ ಇದೇ ರೀತಿ ಇದೆ ; ತಮಿಳುನಾಡಿನಲ್ಲಿ ೧೫ ಪೈಸೆ ಒಂದು ಯೂನಿಟಿಗೆ ತೆಗೆದುಕೊಳ್ಳುತ್ತಾರೆ, ಆದರೆ ನಮ್ಮಲ್ಲಿ ಒಂದು ಯೂನಿಟ್ಟಿಗೆ ೨೫ ಪೈಸೆ ಎಂದರೂ ಟ್ಯಾಕ್ಸ್ ಎಲ್ಲಾ ಸೇರಿಸಿದರೆ ೨೭ ಪೈಸೆಗೆ ಬರುತ್ತದೆ. ಆದರೆ ಉತ್ತರ ಪ್ರದೇಶದಲ್ಲಿ ರೈತ ಬೆಳೆದ ಕಾಳಿಗೆ ಎಷ್ಟು ಬೆಲೆ ಇದೆಯೋ ಕರ್ನಾಟಕದಲ್ಲಿ ರೈತ ಬೆಳೆದ ಕಾಳಿಗೂ ಅಷ್ಟೇ ಬೆಲೆ, ಆದರೆ ಈ ರೈತ ಬೇರೆ ರಾಜ್ಯದ ರೈತನಿಗಿಂತ ಹೆಚ್ಚು ಖರ್ಚು ಮಾಡಿರುತ್ತಾನೆ. ಆ ಬೆಲೆ ಜಾಸ್ತಿಯಾಯಿತು, ಈ ಬೆಲೆ ಜಾಸ್ತಿಯಾಯಿತು ಎಂದು ಹೇಳಿ ಆ ಹೊರೆಯನ್ನೆಲ್ಲಾ ರೈತರ ಮೇಲೆ ಹೊರಿಸುತ್ತಿದ್ದಾರೆ, ಇದನ್ನು ಕೇಳಿದಾಗ ಸರ್ಕಾರದವರು ಒಂದು ಷೆಲ್ಟರ್ ತೆಗೆದುಕೊಳ್ಳುತ್ತೀರಿ. ಅದೇನೆಂದರೆ ಟೆಕ್ನಿಕಲ್ ಬೋರ್ಡ್ ಅಭಿಪ್ರಾಯ ಕೊಟ್ಟಿದೆ, ಅದರ ಪ್ರಕಾರ ಮಾಡಿದ್ದೇವೆ ಎಂದು. ಟೆಕ್ನಿಕಲ್ ಬೋರ್ಡ್‌ನಿಂದ ಟೆಕ್ನಿಕಲ್ ವಿಷಯಗಳಿಗೆ ಮಾತ್ರ ಸಲಹೆ ತೆಗೆದುಕೊಳ್ಳಿ. ಎಲ್ಲದಕ್ಕೂ ಟೆಕ್ನಿಕಲ್ ಬೋರ್ಡ್‌ನಿಂದ ಸಲಹೆ ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ರೈತರಿಗೆ ರಿಲೀಫ್ ಕೊಡುವ ವಿಚಾರದಲ್ಲಿ ತಾವು ಮುಂದೆ ಬರಬೇಕು ಎಂದು ನಾನು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಕಬ್ಬಿನ ಬೆಲೆ ಕೂಡ ಅಷ್ಟೆ. ಕಬ್ಬಿನ ಬೆಲೆ ಕುಸಿದಾಗಲೂ ಕೂಡ ಆ ಜಮೀನಿನ ಮೇಲೆ ಹಾಕಿರತಕ್ಕ ಕಂದಾಯ, ನೀರಿನ ದರ ಗೊಬ್ಬರದ ಖರ್ಚು ಎಲ್ಲಾ ಸೇರಿಸಿದರೆ ರೈತನಿಗೆ ಏನೇನೂ ಅನುಕೂಲವಾಗಿಲ್ಲ, ಆದರಿಂದ ಕಬ್ಬು ಬೆಳೆಯುವ ರೈತರ ವಿಷಯದಲ್ಲಿ ಯಾವ ರೀತಿ ಪರಿಹಾರ ನೀಡಬೇಕೋ ಅದನ್ನು ಮಾಡುವುದಕ್ಕೆ ಯೋಚನೆ ಮಾಡಿ ಎಂದು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ಒಂದೆರಡು ಮೂರು ವರ್ಷದಿಂದ ಒಂದು ವಿಚಿತ್ರವಾದ ವರ್ತನೆ ರೈತರ ಮೇಲೆ ನಡೆಯುತ್ತಿದೆ. ಇದು ತಮ್ಮ ಖಾತೆಗೆ ಸಂಬಂಧಪಟ್ಟದ್ದಲ್ಲ ಎಂದು ಮಾನ್ಯ ಕೃಷಿ ಮಂತ್ರಿಗಳು ಹೇಳಬಾರದು. ಇದನ್ನು ತಾವು ಮಾನವೀಯ ದೃಷ್ಟಿಯಿಂದ ನೋಡಬೇಕು. ರೈತರಿಗೆ ಸಾಲಗಳನ್ನು ಕೊಟ್ಟರು. ಅದನ್ನು ರೈತ ಮರುಪಾವತಿ ಮಾಡದೇ ಇದ್ದ ಕಾಲದಲ್ಲಿ ನಮ್ಮ ತಾಲ್ಲೂಕಿನಲ್ಲಿ ನಡೆದ ಪರಿಸ್ಥಿತಿ ಹೇಳಬೇಕಾದರೆ ರೈತನ ಮನೆಗೆ ನುಗ್ಗಿ ಅವನ ಪಂಪ್ ಸೆಟ್ಟುಗಳನ್ನು ಕಿತ್ತುಕೊಂಡು ಬಂದಿದ್ದಾರೆ. ಈ ರೀತಿಯ ವರ್ತನೆ ದೇಶದಲ್ಲಿ ಎಲ್ಲೂ ನಡೆದಿರುವುದಿಲ್ಲ. ಅಂಥ ಕೆಲಸ ಎಮರ್ಜೆನ್ಸಿಯಲ್ಲಿ.........

ಶ್ರೀ ಕೆ. ಹೆಚ್. ರಂಗನಾಥ್ :—ರೈತ ಸಾಲ ಮರುಪಾವತಿ ಮಾಡದೇ ಇದ್ದಾಗ ಅವನ ಹತ್ತಿರ ಹೋಗಿ ಪಂಪ್‌ಸೆಟ್ ವಗೈರೆ ವ್ಯವಸಾಯಕ್ಕೆ ಬೇಕಾದ ಸಾಮಾನುಗಳನ್ನು ತರಬಾರದು ಎಂದು ಒಂದು ಸರ್ಕಾರಿ ಆಜ್ಞೆಯೇ ಸ್ಪಷ್ಟವಾಗಿದೆ. ೧೯೭೫–೭೬ರಲ್ಲೇ ಆಗಿದೆ. ಯಾರಾದರೂ ಅಧಿಕಾರಿಗಳು ಆಜ್ಞಾ

ತೂರ್ಯರ್ದಿಂದ ಈ ರೀತಿ ಕೆಲಸಗಳನ್ನು ಮಾಡಿದ್ದರೆ ಅದಕ್ಕೆ ಅವರೇ ಹೊಣೆಗಾರರು. ಸಾಲದ ವಸೂಲಿ ಗೋಸ್ಕರ ಪಂಪ್‌ಸೆಟ್ ವಗೈರೆ ಸಾಮಾನುಗಳನ್ನು ರೈತರಿಂದ ತರಬಾರದು ಎಂದು ಸ್ಪಷ್ಟವಾಗಿ ಸರ್ಕಾರೀ ಆಜ್ಞೆ ಇದೆ.

ಶ್ರೀ ಭೀಮಣ್ಣ ಖಂಡ್ರೆ :—ಮಾನ್ಯ ಮಂತ್ರಿಗಳು ಆ ರೀತಿ ಪಂಪ್‌ಸೆಟ್ಟುಗಳನ್ನು ಸಾಲದ ವಸೂಲಿ ಗೋಸ್ಕರ ರೈತರಿಂದ ತರಬಾರದು ಎಂಬ ಬಗ್ಗೆ ಸರ್ಕಾರೀ ಆಜ್ಞೆ ಇದೆ ಎಂದು ಹೇಳಿದರು. ನಾನು ಈ ರೀತಿ ಪಂಪ್‌ಸೆಟ್ಟು ಮುಂತಾದುವನ್ನು ರೈತರಿಂದ ತಂದಂಥ ನೂರಾರು ಉದಾಹರಣೆಗಳನ್ನು ಬೇಕಾದರೆ ಕೊಡುತ್ತೇನೆ. ಅದಕ್ಕೆ ದಾಖಲೆಗಳನ್ನೂ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ವೈ. ರಾಮಕೃಷ್ಣ :—ನೀವು ಆಜ್ಞೆ ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಆ ರೀತಿ ರೈತ ರಿಂದ ತರಬಾರದು ಎಂಬ ಆಜ್ಞೆಯನ್ನು ತಾವು ಮಾಡಿರಬಹುದು. ಆದರೆ ಅದನ್ನು ಜಾರಿಗೆ ಕೊಡತಕ್ಕದ್ದು ಬಹಳ ಮುಖ್ಯ. ನಾನು ಅನೇಕ ಸಾರಿ ಹೇಳಿದ್ದೇನೆ,

ಶ್ರೀ ಕೆ. ಹೆಚ್. ರಂಗನಾಥ್ :—ನಾನು ಅಧಿಕಾರಿಗಳು ತಪ್ಪು ಮಾಡಿಲ್ಲ ಎಂದು ಹೇಳುವುದಿಲ್ಲ ಒಂದು ವೇಳೆ ಆ ರೀತಿ ಮಾಡಿದ್ದರೆ ಅವರೇ ಅದಕ್ಕೆ ಹೊಣೆಗಾರರು ಸರ್ಕಾರದ ನೀತಿ ಅದಲ್ಲ.

ಶ್ರೀ ವೈ. ರಾಮಕೃಷ್ಣ :—Arrears of land revenue ಎಂದಕೂಡಲೇ ನಮ್ಮ ರೈತರ ಕೈ ಕಾಲು ಎಲ್ಲಾ ಬಿದ್ದು ಹೋಗುತ್ತದೆ. ಕಳೆದ ಬಜೆಟ್ ಅಧಿವೇಶನದಲ್ಲಿ ಮಾತನಾಡುವಾಗ ನಮ್ಮ ಸಹೋದ್ಯೋಗಿಗಳು ವ್ಯವಸಾಯಗಾರರ ಸಂಘಟನೆ ಮಾಡುತ್ತೇವೆ ಎಂದು ಹೇಳಿದ್ದರು. ಯಾವ ರೀತಿ ಸಂಘಟನೆ ಮಾಡಿದ್ದಾರೋ ಏನೋ ಅದೆಲ್ಲಾ ನನಗೆ ಗೊತ್ತಿಲ್ಲ. ಸಂಘಟನೆಯಿಂದ ತಮಿಳುನಾಡಿನಲ್ಲಿ ಏನಾಗುತ್ತಿದೆ ಎಂಬುದು ತಮಗೆ ಗೊತ್ತಿದೆ. ಅಂಥ ಚಳುವಳಿಗೆ ಇಲ್ಲೂ ಕರೆ ಕೊಡಬೇಕಾದ ಪರಿಸ್ಥಿತಿ ಬಂದೀತು ಎಂದು ಎಚ್ಚರಿಸುತ್ತಿದ್ದೇನೆ. ಯಾವುದೇ ಬಾಕಿ ವಸೂಲು ಮಾಡುವಾಗ ವ್ಯವಸಾಯಕ್ಕೆ ಸಂಬಂಧಪಟ್ಟ ಉತ್ಪಾದನಾ ವಸ್ತುಗಳನ್ನು ರೈತರಿಂದ ಬಲವಂತವಾಗಿ ತರಬಾರದು ಎಂಬುದನ್ನು ತಿಳಿದುಕೊಳ್ಳುವ ಶಕ್ತಿ ನಿಮ್ಮ ಅಧಿಕಾರಿಗಳಿಗೆ ಇಲ್ಲವೇ ? ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ, ತಾವು ಕೂಡಲೇ ಸೂಚನೆ ಕೊಟ್ಟು ರೈತರ ಪಂಪ್‌ಸೆಟ್ಟುಗಳಿಗೆ ಕೈ ಹಾಕಿದ ಪಕ್ಷದಲ್ಲಿ ಉಗ್ರ ವಾದ ಶಿಕ್ಷೆಗೆ ಒಳಗಾಗಬೇಕಾಗುತ್ತದೆ ಎಂಬುದಾಗಿ ಅಧಿಕಾರಿಗಳಿಗೆ ತಿಳಿಸಬೇಕು. ವ್ಯವಸಾಯ ಇಲಾಖೆ ಯಲ್ಲಿ ಹುದ್ದೆಗಳ ಸಂಖ್ಯೆ ಜಾಸ್ತಿಯಾಗುತ್ತಿದೆ.

ವ್ಯವಸಾಯ ಇಲಾಖೆಯಲ್ಲಿ ಒಬ್ಬರು ಡೈರೆಕ್ಟರ್ ಇದ್ದರು. ಈಗ ೨ ಅಥವಾ ೩ ಜನರು ಅಡಿಷನಲ್ ಡೈರೆಕ್ಟರ್ ಇದ್ದಾರೆ. ೧೨ ಜನ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ನೂರಾರು ಜನ ಅಸಿಸ್ಟೆಂಟ್ ಡೈರೆಕ್ಟರ್‌ರನ್ನು ಮಾಡಿದ್ದೀರಿ. ಅಧಿಕಾರಿಗಳ ಸಂಖ್ಯೆ ಬಹಳ ಜಾಸ್ತಿಯಾಗಿದೆ. ಏತಕ್ಕೆಂದರೆ ತಮ್ಮ ಇಲಾಖೆಯಿಂದ ರೈತರಿಗೆ ಒದಗಿಸಬೇಕಾಗಿದ್ದಂತಹ ಬೀಜಗಳ ಹಂಚಿಕೆ ಕ್ರಮವನ್ನು ಕಿತ್ತುಹಾಕಿದ್ದೀರಿ. ಇದೇ ರೀತಿ ಗೊಬ್ಬರ, ಸೀಡ್ಸ್, ಇನ್‌ಸೆಕ್ಟಿಸೈಡ್ಸ್, ಕೆಮಿಕಲ್ಸ್ ಇವುಗಳೆಲ್ಲವನ್ನೂ ಇಲಾಖೆಯಿಂದ ಹಂಚು ವುದು ಕಿತ್ತುಹಾಕಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಟ್ಟುಬಿಟ್ಟಿದ್ದೀರಿ; ಈ ರೀತಿ ಕೊಟ್ಟುಬಿಟ್ಟಿರುವುದರಿಂದ ಇಲಾಖೆಗೆ ಏನು ಕೆಲಸ ಇದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಕೈಯಲ್ಲಿ ಮಾಡ ತಕ್ಕಂತಹ ಕೆಲಸ ಏನೂ ಇಲ್ಲ. ಬರೀ ಬೋಧನೆ ಮಾಡಿಕೊಂಡು ಟಿ. ಎ. ಡಿ. ಎ. ತೆಗೆದುಕೊಂಡಿ ರುವಂತಹ ನಿಮ್ಮ ಇಲಾಖೆಯಲ್ಲಿ ಎಷ್ಟು ಜನ ಡೈರೆಕ್ಟರ್‌ಬೇಕು, ಎಷ್ಟು ಜನ ಜಾಯಿಂಟ್ ಡೈರೆಕ್ಟರ್ ಬೇಕು, ಎಷ್ಟು ಜನ ಅಸಿಸ್ಟೆಂಟ್ ಡೈರೆಕ್ಟರ್ ಬೇಕೆಂಬುದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು. ಅವರು ಏನು ಮಾಡ ಬೇಕಿದ್ದಾರೆ ? ಆದ್ದರಿಂದ ಇದಕ್ಕೋಸ್ಕರ ಇರತಕ್ಕಂತಹ ಸಿಬ್ಬಂದಿಯನ್ನು ಕಡಿಮೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು.

೩–೩೦ ಪಿ. ಎಂ.

ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರದಲ್ಲಿ ಹೆಚ್ಚು ಮಾತನಾಡುವುದಕ್ಕೆ ಸಮಯ ಇಲ್ಲ. ಅಲ್ಲಿಯ ನೌಕರರು ಏನೊಂದು ಮೆಮೊರಾಂಡಂನ್ನು ಕೊಟ್ಟಿದ್ದಾರೋ ಅದನ್ನು ತಾವು ದಯಮಾಡಿ ಪರಿಶೀಲನೆ ಮಾಡಬೇಕು. ಎಷ್ಟು ಲೋಪದೋಷ ನಡೆದಿದೆ ? ಅದನ್ನು ಯಾವ ರೀತಿ ಸರಿಪಡಿಸಬೇಕೆಂಬುದನ್ನು ತಾವು ಆಲೋಚನೆ ಮಾಡಬೇಕು. ದಾವಣಗೆರೆ ಷುಗರ್ ಫ್ಯಾಕ್ಟರಿಗೆ ೩೩ ಲಕ್ಷ ರೂಪಾಯಿಗಳನ್ನು ಷೇರ್ಸನ್ನು ಕೊಟ್ಟಿದ್ದೀರಿ. ಮೈಸೂರು ಟೊಬ್ಯಾಕೊ ಕಂಪನಿಗೆ ೧೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕರ್ನಾಟಕ ಸೀಡ್ಸ್ ಕಾರ್ಪೊರೇಷನ್‌ಗೆ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆಗ್ರೋ ಪ್ರೋಟೀನ್‌ಗೆ ೧೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಕಾಂಪ್ರೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ೧೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹುಲಕೋಟಿ ಮಿಲ್ಸ್, ಗದಗ್ ಇವರಿಗೆ ೧೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ, ಒಟ್ಟಿನಲ್ಲಿ ೨ ಕೋಟಿ ರೂಪಾಯಿಗೂ ಮೀರಿದ ಹಣವನ್ನು ಕೊಟ್ಟಿದ್ದೀರಿ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ್ನು ಸ್ಥಾಪನೆ ಮಾಡಿರತಕ್ಕಂತಹ ಉದ್ದೇಶ ಏನು ? ಇವರು ಈ ಮೇಲ್ಕಂಡವರಿಗೆಲ್ಲಾ ಸಾಲವನ್ನು ಕೊಡತಕ್ಕಂಥದ್ದು ಏನಾದರೂ ಇದರಲ್ಲಿ ಇದೆಯೇನು ? ಆ ರೀತಿ ಏನಾದರೂ ಪ್ರಾವಿಜನ್ ಮಾಡಿಕೊಂಡಿದ್ದೀರಾ ? ಸಾಲವನ್ನು ಕೊಡಬೇಕಾದರೆ ಅದಕ್ಕಾಗಿ ಫೈನಾನ್ಸ್ ಕಾರ್ಪೊರೇಷನ್ ಇದೆ. ಜೊತೆಗೆ ನ್ಯಾಷನಲೈಸ್ಡ್ ಬ್ಯಾಂಕ್ಸ್ ಇವೆ. ಈ ಕಾರ್ಪೊರೇಷನ್‌ನ್ನು ಸ್ಥಾಪನೆ ಮಾಡಿದ ಉದ್ದೇಶವಾದರು ಏನೆಂದರೆ, ರೈತರಿಗೆ ಅನುಕೂಲವಾಗುವಂತಹ ಉಪಕರಣಗಳನ್ನು ಸರಬರಾಜು ಮಾಡಬೇಕು ರೈತರಿಗೆ ಸುಲಭ ದರದಲ್ಲಿ ಗೊಬ್ಬರ, ಬೀಜ ಮತ್ತಿತರೇ ಉಪಕರಣಗಳನ್ನು ಸರಬರಾಜು ಮಾಡಬೇಕೆಂದು ದೃಷ್ಟಿಯನ್ನು ಇಟ್ಟುಕೊಂಡು ಈ ಕಾರ್ಪೊರೇಷನ್‌ನ್ನು ಪ್ರಾರಂಭ ಮಾಡುವುದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದು. ನೀವು ಆ ಯೋಜನೆಯನ್ನೇ ಮರೆತಿದ್ದೀರಿ. ಕೋಟ್ಯಾಂತರ ರೂಪಾಯಿಗಳನ್ನು ನೀವು ಸಕ್ಕರೆ ಕಂಪನಿಗಳಿಗೆ Textile Mill ಗಳಿಗೂ ಸಾಲವಾಗಿ ಕೊಟ್ಟಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್ :—ಸಾಲವಾಗಿ ಕೊಟ್ಟಿಲ್ಲ. ಶೇರು ಹಣವಾಗಿ ಕೊಟ್ಟಿದ್ದೇವೆ.

ಶ್ರೀ ವೈ. ರಾಮಕೃಷ್ಣ :—ಆದರಿಂದ ನಿಮಗೆ ಎಷ್ಟು ಡಿವಿಡೆಂಟ್ ಬಂದಿದೆ ? ಯಾರೊ ಒಬ್ಬರಿಂದ ಸುಮಾರು ೩೭,೫೩೦ ರೂಪಾಯಿಗಳನ್ನು ಬಿಟ್ಟರೆ ಉಳಿದ ಯಾರೊಬ್ಬರಿಂದಲೂ ಒಂದು ಪೈಸೆ ಬಂದಿಲ್ಲ. ಇದನ್ನು ತಾವು ಆಲೋಚನೆ ಮಾಡಬೇಕು ಮ್ಯಾನೇಜ್‌ಮೆಂಟ್ ಕಮಿಟಿಯವರು ಸಭೆಯಮುಂದಿಟ್ಟು ಪಾಸ್ ಮಾಡಿಕೊಂಡು ಬಿಟ್ಟು ಅದನ್ನು ಸರ್ಕಾರಕ್ಕೆ ಕಳುಹಿಸಿದರೆ ಅವರು ಪಾಸ್ ಮಾಡಿಕೊಡುವುದಕ್ಕೆ ನೀವು ಏಕೆ ಮನ್ನಣೆ ಕೊಟ್ಟಿರಿ ? ಈ ಸಾಲಗಳಿಗೆ ನೀವು ಇವತ್ತು ಒಂದು ಕೋಟಿ ೬೦ ಲಕ್ಷ ರೂಪಾಯಿಗಳನ್ನು ಬರಿ ಬಡ್ಡಿಯನ್ನು ಕೊಡುತಿದ್ದೀರಿ. ನಿಮಗೆ ಡಿವಿಡೆಂಡ್ ಏನೂ ಬರುತಿಲ್ಲ. ಇಂತಹ ಕೆಲಸಗಳನ್ನು ವ್ಯವಸಾಯ ಇಲಾಖೆ ಮಾಡಬೇಕೇ ಹೊರತು ಕಾರ್ಪೊರೇಷನ್‌ಗೆ ಇಂತಹ ಕೆಲಸಗಳನ್ನು ವಹಿಸಿಕೊಡಬಾರದು It is the question of rendering service ರೈತನಿಗೆ ಎಕ್ಸ್‌ಟೆನ್ಸನ್ ಸರ್ವೀಸಸ್ ವ್ಯವಸ್ಥೆ ಚೆನ್ನಾಗಿದೆಯೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ರೀತಿಯ ವ್ಯವಸ್ಥೆ ತಮಿಳುನಾಡಿನಲ್ಲೂ ಇಲ್ಲ. ಮಹಾರಾಷ್ಟ್ರದಲ್ಲೂ ಇಲ್ಲ. ಆಂಧ್ರದಲ್ಲಿ ಪ್ರಾರಂಭ ಮಾಡಿದರು, ಅವರು ನಿರ್ವಹಿಸದಿದ್ದುದಕ್ಕೆ ಆಗದೆ ಪುನಃ ಇಲಾಖೆಯವರು ವಾಪಸ್ಸು ತೆಗೆದುಕೊಂಡುಬಿಟ್ಟರು. ರೈತನ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾದುದು ಈ ಇಲಾಖೆಯ ಕರ್ತವ್ಯ, ಆಗ್ರೋ ಬೇಸ್ಡ್ ಇಂಡಸ್ಟ್ರೀಸ್‌ನ್ನು ಯಾವುದೋ ಒಂದು ಕಂಪನಿಯ ಆಕ್ಟ್ ಕೆಳಗಡೆ ತೆಗೆದುಕೊಂಡು ಬಂದು ಬರೀ ಲಾಭ ನಷ್ಟವನ್ನು ವಿಚಾರ ಮಾಡುವುದಲ್ಲ. ರೈತನ ಅನುಕೂಲಕ್ಕಾಗಿ ಕೆಲಸ ಮಾಡಬೇಕು. ಆದ್ದರಿಂದ ಈ ವಿಷಯದಲ್ಲಿ Rethinking is absolutely necessary on these items. ಆಮೇಲೆ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಜನರನ್ನು ಅಪಾಯಿಂಟ್ ಮಾಡಿಕೊಂಡಿರುವುದು ? ಯಾವುದಾದರೂ ಒಂದು ರೀತಿ ನಿಯಮವನ್ನು ಇಟ್ಟುಕೊಂಡಿದ್ದಾರೆಯೇ ? ಬೆಳಗ್ಗೆ ೩ ಜನ, ಮಧ್ಯಾಹ್ನ ೩ ಜನ ಸಾಯಂಕಾಲ ೩ ಜನರಂತೆ ಅಪಾಯಿಂಟ್ ಮಾಡಿಕೊಳ್ಳುತ್ತಿದ್ದಾರೆ.

SRI K. H. RANGANATH :—All Chairmen appointments are political appointments ಇಲ್ಲೂ ಅಷ್ಟೆ, ಕೇಂದ್ರ ಸರ್ಕಾರದಲ್ಲೂ ಅಷ್ಟೇ. ಈ ಸಂಸ್ಥೆ ಹುಟ್ಟಿದ್ದು ನಿಮ್ಮ ಕಾಲದಲ್ಲಿ ೧೯೬೭ನೇ ಇಸವಿಯಲ್ಲಿ ಆವಾಗಿನಿಂದಲೂ ಖಾಸಗಿಯವರೇ ಅಧ್ಯಕ್ಷರಾಗಿದ್ದಾರೆ. ಆ ರೀತಿ ನಡೆದುಕೊಂಡು ಬಂದಿದೆ.

ಶ್ರೀ ಎಸ್. ಆರ್ ಬೊಮ್ಮಾಯಿ :—ಕಾಂಗ್ರೆಸ್ ಕಾಲದಲ್ಲಿ ಎಂಬುದಾಗಿ ಹೇಳಿ. ಏಕೆಂದರೆ ಆಗ ನಾವು ನೀವು ಬೇರೆ ಪಕ್ಷದಲ್ಲಿದ್ದೆವು.

ಶ್ರೀ ವೈ ರಾಮಕೃಷ್ಣ :—ನಾನು ಹೇಳಿದ್ದು ಅಧ್ಯಕ್ಷರ ಅಪಾಯಿಂಟ್ ಮೆಂಟ್ ಅಲ್ಲ. ಅಲ್ಲಿಗೆ ಬೇಕಾದಂತಹ ಸಿಬ್ಬಂದಿಯ ನೇಮಕದ ಬಗ್ಗೆ. ತಾವು ಬೇಕಾದರೆ ನೋಡಿ ೩೦೦ಕ್ಕೂ ಹೆಚ್ಚು ಜನರನ್ನು ಅವಶ್ಯಕತೆಗಿಂತ ಹೆಚ್ಚಾಗಿ ಅಪಾಯಿಂಟ್ ಮಾಡಿದ್ದಾರೆ. ಆ ರೀತಿ ಅಪಾಯಿಂಟ್ ಮಾಡಿಕೊಂಡು ಅವರನ್ನು ರೆಗ್ಯೂಲರೈಸ್ ಕೂಡ ಮಾಡಿದ್ದಾರೆ. ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟವನ್ನು ಅನುಭವಿಸಬೇಕಾಗಿದೆ. ಈ ರೀತಿ ನಾನು ಹೇಳಿದೆನೆಂದು ಅವರನ್ನು ಮನೆಗೆ ಕಳುಹಿಸಿಬಿಡಬೇಡಿ. ಬೇರೆ ಎಲ್ಲಾದರೂ ಕೆಲಸ ಕೊಡಿ.

ಕರ್ನಾಟಕ ಸೀಡ್ಸ್ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ, ಇದು ಬಹಳ ಮುಖ್ಯವಾದುದು, ತಮಗೆ ಗೊತ್ತಿರಬಹುದು. ಸರ್ಕಾರದ ಷೇರ್ ಕ್ಯಾಪಿಟಲ್ ೫೦ ಲಕ್ಷ ರೂಪಾಯಿಗಳಾಗಿದ್ದರೆ ನಷ್ಟ ಹೊಂದಿರತಕ್ಕಂತಹವೇ ೩೨ ಲಕ್ಷ ರೂಪಾಯಿಗಳು. ಇನ್ನೂ ೧೨ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ನಷ್ಟ ಹೊಂದಿದೆ. ಇದಕ್ಕೆ ಕಾರಣ ಏನು ? ೩೨ ಲಕ್ಷ ರೂಪಾಯಿಗಳ ನಷ್ಟ ಹೊಂದಿರಬೇಕಾದರೆ ಬೋಜಾರ್” ಎಂಬುದನ್ನು ೩೨ ಲಕ್ಷ ರೂಪಾಯಿಗಳ ವ್ಯವಹಾರ ಮಾಡಿದ್ದಾರೆ. ಅದು ಯಾರಿಗೂ ಬೇಡವಾದದ್ದನ್ನು ತೆಗೆದುಕೊಂಡು ಇಟ್ಟುಕೊಂಡಿದ್ದಾರೆ. ಈ ರೀತಿ ಸಾರ್ವಜನಿಕರ ಹಣವನ್ನು ವ್ಯಯ ಮಾಡುವುದು ನ್ಯಾಯವಲ್ಲ. ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ತಿಳಿಸಬೇಕು. ಮತ್ತೆ ಪ್ರೊಡಕ್ಷನ್ ಆಫ್ ವರಲಕ್ಷ್ಮಿ ಸೀಡ್ಸ್ ಬಗ್ಗೆ ಹೇಳುವುದಾದರೆ, ಇದರಲ್ಲೂ ಒಂದು ಕೋಟಿ ರೂಪಾಯಿಗೂ ಮೀರಿ ನಷ್ಟವಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಹತ್ತಿಯನ್ನು ಬೆಳೆಯತಕ್ಕಂಥ ಜಮೀನು ಎಷ್ಟಿದೆ ? ಅಷ್ಟಕ್ಕೆ ಮಾತ್ರ ಬೀಜಗಳನ್ನು ಸರಬರಾಜು ಮಾಡಬೇಕು. ಸರ್ಕಾರ ಯಾವುದೋ ರಾಜಕೀಯ ಒತ್ತಡಕ್ಕೆ ಮಣಿದು ಬೀಜಗಳನ್ನು ಕೊಂಡು ಕೊಂಡರು. ಈಗ ಆ ಬೀಜವನ್ನು ೬೫ ಪೈಸೆಗೆ ಒಂದು ಕೇಜಿ ಬೀಜವನ್ನು ಮಾರುತ್ತಿದ್ದಾರೆ. ೧೨೦ ರೂಪಾಯಿಗಳನ್ನು ಒಂದು ಕೇಜಿಗೆ ಕೊಟ್ಟು ತೆಗೆದುಕೊಂಡಿದ್ದರು. ಈಗ ಅದನ್ನು ಕೇವಲ ೬೫ ಪೈಸೆಗೆ ಮಾರುತ್ತಿದ್ದಾರೆ. ಇದಕ್ಕೆ ಯಾರು ಹೊಣೆ ? ಯಾರು ಜವಾಬ್ದಾರರು, ಯಾರಿಗೆ ಜವಾಬ್ದಾರಿಯನ್ನು ಕೊಟ್ಟಿದ್ದೀರಿ ? ಎಂಬುದನ್ನು ತಾವು ದಯಮಾಡಿ ಆಲೋಚನೆ ಮಾಡಬೇಕು. ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದಾರೆ.

ಯೂನಿವರ್ಸಿಟಿಯನ್ನು ಪ್ರಾರಂಭ ಮಾಡಿದ್ದೀರಿ. ನಮ್ಮ ರೈತರಿಗೆ ಕಷ್ಟ ಬಂದಾಗ ಬೀಜ ಸರಬರಾಜು ಮಾಡುವುದು. ಅವನ ಬೆಳೆಗೆ ರೋಗ ಬಂದಾಗ ಅದನ್ನು ತಡೆಗಟ್ಟುವುದು ಇದನ್ನು ಅಲ್ಲಿರುವ ಅಧಿಕಾರಿಗಳು ಮಾಡಬೇಕಾದ ಕೆಲಸ. ಇದರ ಬಗ್ಗೆ ಯೂನಿವರ್ಸಿಟಿಯವರು ೪೦ ಕ್ವಿಂಟಾಲ್ ಬತ್ತ ಬೆಳೆಯಬಹುದು. ೧೨ ಕ್ವಿಂಟಾಲ್ ರಾಗಿಯನ್ನು ಬೆಳೆಯಬಹುದು? ಇದಕ್ಕೆ ನೀವು ಏನು ಮಾಡಿದ್ದೀರೆಂದರೆ ಇಡೀ ರಾಜ್ಯದಲ್ಲಿ ೪೫ ಅಗ್ರಿಕಲ್ಚರಲ್ ಫಾರಂಗಳನ್ನು ಮಾಡಿದ್ದೀರಿ. ಅದಕ್ಕಾಗಿ ೧,೨೧,೦೦,೦೦೦ ರೂಪಾಯಿಗಳನ್ನು ಕೊಟ್ಟಿದ್ದೀರಿ. ನಮಗೆ ಅವರಿಂದ ಬಂದ ಹುಟ್ಟುವಳಿ ಎಷ್ಟೆಂದರೆ ಸುಮಾರು ೫೦ ಲಕ್ಷ ರೂಪಾಯಿಗಳು ಕೂಡ ಬಂದಿಲ್ಲ. ಹಳ್ಳಿಯಲ್ಲಿ ರೈತರು ಕಷ್ಟ ಪಟ್ಟು ಬೆಳೆಸಬೇಕು. ಇಲ್ಲಿ ಸರ್ಕಾರಿ ನೀರು, ಸರ್ಕಾರದ ಹಣ, ಸರ್ಕಾರದ ಗೊಬ್ಬರ ಸರ್ಕಾರದ ಸಿಬ್ಬಂದಿ ಇಷ್ಟನ್ನೆಲ್ಲಾ ಇಟ್ಟುಕೊಂಡು ೧ ಕೋಟಿ ೨೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೪೫ ಲಕ್ಷ ರೂಪಾಯಿಗಳ ಹುಟ್ಟುವಳಿಯನ್ನು ತೆಗೆಯು

ಬೇಕಾದರೆ ನಿಮ್ಮ ಅಧಿಕಾರಿಗಳು ಏಕೆ ಇರಬೇಕು. ಅವರೆಲ್ಲರನ್ನು ನಮ್ಮ ರೈತರ ಹತ್ತಿರ ಕಳುಹಿಸಿ ಅವರಿಂದ ತರಬೇತಿಯನ್ನು ಏಕೆ ಕೊಡಿಸಬಾರದು ? ಇದನ್ನು ತಾವು ಆಲೋಚನೆ ಮಾಡಬೇಕು. ಈವೊತ್ತಿನ ದಿವಸ ಫಾರಂಗಳಲ್ಲಿ ಬೆಳೆಯುವಂಥಾ ಸೀಡ್ಸ್ ಏನು ಇದೆ ಕಾಯಿ ಬೀಜ ಹೆಣ್ಣು ಗಂಡು ಇವುಗಳ ಉತ್ಪತ್ತಿಯೂ ಕೂಡ ಕಡಿಮೆಯಾಗಿದೆ. ನಾವು ಮೊದಲು ಇವುಗಳನ್ನು ಬೇರೆ ರಾಜ್ಯಗಳಿಗೆ ಕಳುಹಿಸುತ್ತಾ ಇದ್ದೆವು, ಈವೊತ್ತಿನ ದಿವಸ ಅವುಗಳನ್ನು ಬೇರೆ ರಾಜ್ಯದಿಂದ ನಾವು ತರಿಸಿಕೊಳ್ಳುವ ಪರಿಸ್ಥಿತಿ ಬಂದಿದೆ. ಆದುದರಿಂದ ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಿ ಇದರ ಮೇಲೆ ಸರಿಯಾದ ಒಂದು ಹತೋಟಿ ಇಟ್ಟುಕೊಂಡು ಈ ಬೀಜಗಳನ್ನು ಎಲ್ಲರಿಗೂ ಸಿಗುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ವಿಶೇಷವಾಗಿ ತಾಲ್ಲೂಕ್ ಲೆವೆಲ್‌ಗಳಲ್ಲಿ ಅನೇಕ ಫಾರಂಗಳನ್ನು ಈವೊತ್ತು ಮಾಡಿದ್ದೀರಿ ಇದರ ಬಗ್ಗೆ ನಾನು ಹೇಳುವುದೇನೆಂದರೆ ಸ್ವಶಕ್ತಿಯಿಂದಲೇ ಇವು ತನ್ನದೇ ಆದಂಥಾ ಒಂದು ಬಡ್ಜೆಟ್‌ಅನ್ನು ಉಪಯೋಗಿಸಿಕೊಂಡು ಪ್ರತಿಯೊಂದು ಫಾರಂಗಳೂ ಚೆನ್ನಾಗಿ ನಡೆಸುವಂಥಾ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಇದರಲ್ಲಿ ಪ್ರತಿಯೊಬ್ಬ ಕೆಲಸಗಾರನಿಗೂ ಕೂಡ ವರ್ಕ್‌ಲೋಡ್ ಮತ್ತು ಡಿಸ್ಟ್ರಿಬ್ಯೂಷನ್ ಸರಿಯಾಗಿ ಇರುವಂತೆ ಮಾಡಬೇಕು. ಇನ್ನು ತಮ್ಮ ಇಲಾಖೆಯಲ್ಲಿ ಓವರ್ ಸ್ಟಾಫ್ ಇದೆ. ಅದರಿಂದ ಏನಾಗಿದೆ ಎಂದರೆ ಇದರಲ್ಲಿ ಆದಾಯ ಇಲ್ಲದಿದ್ದರೂ ಕೂಡ ಶೋಕಿ ಮಾಡುವವರು ಜಾಸ್ತಿ. ಇದನ್ನು ಒಂದುರೀತಿಯಲ್ಲಿ ಶೋಕಿ ಡಿಪಾರ್ಟ್‌ಮೆಂಟ್ ಅಂತ ಹೇಳಬಹುದು. ಆದುದರಿಂದ ಆರೀತಿಯಾಗಿ ತಮ್ಮ ಇಲಾಖೆ ಶೋಕಿ ಡಿಪಾರ್ಟ್‌ಮೆಂಟ್ ಆಗಲಿಕ್ಕೆ ಬಿಡಬಾರದೆಂದು ಹೇಳುತ್ತೇನೆ.

ಇನ್ನು ರೈತನಿಗೇ ಆಗಲಿ, ಬಡವನಿಗೇ ಆಗಲಿ ಬೇಕಾದಂಥ ಬೀಜಗಳು, ಸಸಿಗಳು ಮತ್ತು ಮರಗಳು ಇನ್ನು ಏನೇನು ಬೇಕಾಗಿವೆ ಈ ಬಗ್ಗೆ ಒಂದು ಯೋಜನೆ ಹಾಕಿ ಅವನಿಗೆ ಇವೆಲ್ಲಾ ಸಿಕ್ಕುವಂತಹ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಷಯ ಏನೆಂದರೆ ಮನೆಗಳು ಅದು ಗ್ರಾಮಾಂತರದಲ್ಲಿಯೇ ಇರಲಿ ಅಥವಾ ಪಟ್ಟಣಗಳಲಿಯೇ ಇರಲಿ ಅವರ ಮನೆಯ ಮುಂದೆ ಎರಡು ತೆಂಗಿನ ಗಿಡ, ನುಗ್ಗೆಸೊಪ್ಪಿನ ಗಿಡ, ಪರಂಗಿ ಹಣ್ಣಿನ ಮರ ತರಕಾರಿ ಇವುಗಳನ್ನು ಬೆಳೆಯುವಂಥಾ ಒಂದು ಕಾರ್ಯಕ್ರಮ ಹಾಕಿಕೊಂಡು ಅವರಿಗೆ ತೋಟಗಾರಿಕೆ ಇಲಾಖೆಯಿಂದ ಈ ಬೀಜಗಳನ್ನು ಸಪ್ಲೈ ಮಾಡುವ ಹಾಗೆ ಮಾಡಬೇಕು ಎಂದು ಹೇಳುತ್ತೇನೆ. ಮತ್ತು ಇಂತಹ ಬೀಜಗಳನ್ನು ಸಂತೆಗಳಲ್ಲಿ ಮಾರಾಟ ಮಾಡುವಂಥಾ ಒಂದು ವ್ಯವಸ್ಥೆ ಮಾಡಬೇಕು. ಇದು ಸಾಹುಕಾರರ ಒಂದು ಸ್ವತ್ತಾಗಬಾರದು. ಇದುವರೆಗೂ ಕೂಡ ಇದು ಒಂದು ಸಾಹುಕಾರರ ಸ್ವತ್ತಾಗಿತ್ತು. ಹೇಗೆಂದರೆ ಯಾರಾದರೂ ನೂರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದರೆ ಅಂಥಾವರು ತೆಂಗಿನಗಿಡ, ಮಾವು ಮತ್ತು ಗೇರುಬೀಜ ಇಂಥಾವನ್ನೆಲ್ಲಾ ಹಾಕಿ ಅದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದರು. ಇದರ ಪ್ರಯೋಜನ ನಿಜವಾಗಿ ಯಾರಿಗೆ ಬೇಕೋ, ಯಾವನು ಬಡ ರೈತ ಇದ್ದಾನೋ ಅವನಿಗೆ ತಲುಪುತ್ತಾ ಇರಲಿಲ್ಲಾ. ಆದುದರಿಂದ ಈ ಬೀಜಗಳನ್ನು ಸಂತೆಯಲ್ಲಿ ಮಾರುವ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಇದರ ಬಗ್ಗೆ ಇನ್ನೊಂದು ವಿಚಾರ ಹೇಳಬೇಕಾದರೆ ಮಾನ್ಯ ಮಂತ್ರಿಗಳ ಮನೆ ಮುಂದೆ ಹುಲ್ಲು ಬೆಳೆಸಿರುವ ಲೆಕ್ಕಾಚಾರವನ್ನು ತೆಗೆದುಕೊಂಡು ನೋಡಿದರೆ ಮಾನ್ಯ ಮಂತ್ರಿಗಳ ಸಂಬಳ ೬ ಲಕ್ಷ ೨೫ ಸಾವಿರ ರೂಪಾಯಿ ಆದರೆ ಅವರ ಮನೆ ಮುಂದೆ ಹುಲ್ಲು ಬೆಳೆಸಿರುವುದಕ್ಕೆ ೭ ಲಕ್ಷ ರೂಪಾಯಿ ಖರ್ಚಾಗಿದೆ. ಅಂದರೆ ಮೂಗಿಗಿಂತ ಮೂಗುತಿಯೇ ಭಾರ ಅಂದ ಹಾಗಾಯಿತು ಇದನ್ನು ಯಾರಾದರೂ ಕೂಡ ಸೋಷಲಿಸ್ಟ್ ಪ್ಯಾಟ್ರನ್ ಆಫ್ ಸೊಸೈಟಿ ಅಂತಾಗಲಿ ಅಥವಾ ೨೦ ಅಂಶದ ಕಾರ್ಯಕ್ರಮ ಎಂದು ಹೇಳುತ್ತಾರೆಯೇ ?

ಇನ್ನು ಮೈಸೂರು–ಬೆಂಗಳೂರು ಹೈವೇನಲ್ಲಿ ದಾರಿಯಲ್ಲಿ ಹೋದಾಗ ನೋಡಿದರೆ ಬಹಳ ಸಂಕಟವಾಗುತ್ತದೆ. ಮತ್ತು ಅಲ್ಲಿ ಇರುವಂಥಾ ತೆಂಗಿನ ಮರಗಳನ್ನು ನೋಡಿದರೆ ನಿಮ್ಮ ಇಲಾಖೆ ಜೀವಂತವಾಗಿದೆಯೇ ಎನುವುದು ಸಂದೇಹವಾಗಿದೆ. ಏತಕ್ಕೆಂದರೆ ಅಲ್ಲಿ ಇರತಕ್ಕಂಥಾ ತೆಂಗಿನ ಮರಗಳಿಗೆ ೧೫ ವರ್ಷದಿಂದ ಖಾಯಿಲೆಯಾಗಿ ಆ ತೆಂಗಿನ ಮರದಲ್ಲಿ ಕಾಯಿನೇ ಬಿಡುತ್ತಾ ಇಲ್ಲ. ಅದರ ಖಾಯಿಲೆ ಇನ್ನೂ

ಜಾಸ್ತಿಯಾಗಿದೆಯೋ ವಿನಾ ಕಡಿಮೆಯಾಗಿಲ್ಲ. ಈ ಬಗ್ಗೆ ನಿಮ್ಮ ಇಲಾಖೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ಸರಿಯಾದ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಈ ಒಂದು ವಿಷಯವನ್ನು ನಾನು ಬಹಳ ತೀವ್ರತೆಯಿಂದ ಹೇಳುತ್ತಿದ್ದೇನೆ. ನಿಮ್ಮ ಇಲಾಖೆ ಬಗ್ಗೆ ಹೇಳಲೇ ಬೇಕಾದಂಥಾ ವಿಷಯ. ಏಕೆಂದರೆ ತಾವು ಡಾ. ಅಂಬೇಡ್ಕರ್ ಫೋಟೋವನ್ನು ಯಾವಾಗಲೂ ಇಟ್ಟುಕೊಂಡಿರುತ್ತೀರಿ ಅಲ್ಲದೆ ಅದರ ಮೇಲೆ ಭಾಷಣಗಳನ್ನೂ ಕೂಡ ಮಾಡುತ್ತೀರಿ, ಅದರಿಂದ ಹೇಳಬೇಕಾಗಿದೆ. ಏನು ವಿಷಯ ಎಂದರೆ ನಿಮ್ಮ ಇಲಾಖೆಯಲ್ಲಿ ೧೮ ಪರ್ಸೆಂಟ್ ರಿಸರ್ವೇಷನ್ ಅನ್ನು ಸರಿಯಾಗಿ ಕೊಟ್ಟಿದ್ದೀರಾ ? ಮತ್ತು ನಿಮಗೆ ಸೇರಿದಂಥಾ ಕಾರ್ಪೊರೇಷನ್‌ಗಳಲ್ಲಿ ಮತ್ತು ನಿಮ್ಮ ಅಧೀನದಲ್ಲಿರುವ ಇಲಾಖೆಗಳಲ್ಲಿ, ಅಗ್ರಿಕಲ್ಚರಲ್ ಯೂನಿವರ್ಸಿಟಿಯಲ್ಲಿ ಈ ಕಡೆಗಳಲೆಲ್ಲಾ ರಿಸರ್ವೇಷನ್ ಏನು ಇದೆ ಅದನ್ನು ಸರಿಯಾದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅನ್ವಯಿಸಿದ್ದಾರೆಯೋ ಮತ್ತು ಹರಿಜನ-ಗಿರಿಜನರಿಗೆ ಈ ಬಗ್ಗೆ ಏನು ಪ್ರಾತಿನಿಧ್ಯ ಸಿಗಬೇಕೋ ಅವೆಲ್ಲಾ ಸರಿಯಾಗಿ ಸಿಕ್ಕಿದೆಯೋ? ಒಂದು ವೇಳೆ ಅವರಿಗೆ ಸಿಕ್ಕದೇ ಹೋಗಿದ್ದರೆ ಇದಕ್ಕೆ ಕಾರಣರು ಯಾರು ಮತ್ತು ಅಂಥಾವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಅನ್ನುವುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು.

ಇನ್ನು ಕಡೆಯದಾಗಿ ಲೆಜಿಸ್ಲೇಚರ್ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿಬಿಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ. ಏನೆಂದರೆ ತಾರೀಖು ೧೪-೬-೧೯೭೮ ರಲ್ಲಿ ನಮ್ಮ ಲೆಜಿಸ್ಲೇಚರ್ ಅನ್ನು ಮೂರು ತಿಂಗಳೊಳಗಾಗಿ ಒಂದು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡುತ್ತೇವೆಂದು ಹೇಳಿದಿರಿ. ಆದರೆ ಇದುವರೆಗೂ ಇದನ್ನು ಒಂದು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಲಿಲ್ಲ. ತಾವು ಹೇಳಿ ಎಷ್ಟು ತಿಂಗಳುಗಳಾದವು ನೋಡಿ. ಇಷ್ಟು ದಿವಸವಾದರೂ ಕೂಡ ತಾವು ಇದರ ಬಗ್ಗೆ ಇನ್ನೂ ಯೋಚನೆಯನ್ನೇ ಮಾಡಿಲ್ಲ ಅಂತ ಕಾಣುತ್ತದೆ. ಇದನ್ನು ಯಾವಾಗ ಮಾಡುತ್ತೀರಿ ಅನ್ನುವುದನ್ನು ಸ್ಪಷ್ಟವಾಗಿ ತಮ್ಮ ಉತ್ತರದಲ್ಲಿ ಹೇಳಬೇಕು. ಏತಕ್ಕೆಂದರೆ ಇದು ಪ್ರತ್ಯೇಕ ಇಲಾಖೆಯಾಗುವ ತನಕ ನಮಗೆ ಮನಸ್ಸಿನಲ್ಲಿ ಸಮಾಧಾನವಿಲ್ಲ. Even today the Legislature is a part and parcel of the Government because it is clubbed with the Law Department. ಲೆಜಿಸ್ಲೇಚರ್ ಇಂಪಾರ್ಷಿಯಲ್ ಆಗಿ ಕೆಲಸ ಮಾಡಬೇಕಾದರೆ ಅದನ್ನು ಜುಡಿಷಿಯರಿ ತರಹ ಇಂಡಿಪೆಂಡೆಂಟ್ ಆಗಿ ಮಾಡಬೇಕು. ಆದುದರಿಂದ ಕೂಡಲೇ ಮಾನ್ಯ ಮಂತ್ರಿಗಳು ಇದಕ್ಕೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ನಮ್ಮ ಪಾರ್ಟಿಯವರಾದ ಶ್ರೀ ಗೋವಿಂದರಾಜ್ ಪಿ. ವಡೆಯರಾಜ್‌ರವರು ಒಂದು ಕಾಗದ ಬರೆದಿದ್ದರು. ಅದಕ್ಕೆ ಇನ್ನೂ ಉತ್ತರವನ್ನೇ ಕೊಟ್ಟಿಲ್ಲ. ದಯವಿಟ್ಟು ಇದರ ಬಗ್ಗೆ ಕೂಡಲೇ ಗಮನ ಕೊಟ್ಟು ಇದನ್ನು ಒಂದು ಪ್ರತ್ಯೇಕವಾದ ಇಲಾಖೆಯನ್ನಾಗಿ ಮಾಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ. ಅದೇ ರೀತಿಯಾಗಿ ಈ ಲೆಜಿಸ್ಲೇಚರ್‌ನಲ್ಲಿ ರೂಲ್ಸ್ ಆಫ್ ರಿಸರ್ವೇಷನ್ ಸರಿಯಾಗಿ ಪಾಲನೆ ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ. ಈ ಮಾತನ್ನು ನಮ್ಮ ಪಕ್ಷದವರು, ನಿಮ್ಮ ಪಕ್ಷದವರು ಅಂತ ಹೇಳುತ್ತಾ ಇಲ್ಲ. ಇದನ್ನು ಎಲ್ಲರೂ ಹೇಳುತ್ತಾರೆ. ಒಟ್ಟಿನಲ್ಲಿ ಈ ಲೆಜಿಸ್ಲೇಚರ್‌ನಲ್ಲಿ ರೂಲ್ಸ್ ಆಫ್ ರಿಸರ್ವೇಷನ್ ಸರಿಯಾಗಿ ಪಾಲನೆ ಮಾಡಿದ್ದಾರೆಯೋ ಅನ್ನುವುದರ ಕಡೆ ತಾವು ಗಮನ ಕೊಡಬೇಕು. ಒಂದು ವೇಳೆ ಅವರು ರೂಲ್ಸ್ ಆಫ್ ರಿಸರ್ವೇಷನ್ ಸರಿಯಾಗಿ ಪಾಲಿಸದೇ ಹೋಗಿದ್ದರೆ ಅಂಥಾವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಅನ್ನುವುದು ತಮಗೆ ಗೊತ್ತು.

ಇನ್ನು ಈ ಹೌಸ್ ಕಮಿಟಿಗಳಿಂದ ರಿಪೋರ್ಟ್ ಬಂದಿದೆ. ಆ ಬಗ್ಗೆ ಏನಾದರೂ ಫಾಲೋ ಅಪ್ ಆಕ್ಷನ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಎಂದರೆ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. ಇದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ಒಂದು ಸಿದ್ಧತೆ ಇದೆಯೋ ? ಇದನ್ನು ಫಾಲೋ ಅಪ್ ಮಾಡುವವರು ಯಾರು ಅನ್ನುವುದನ್ನು ಸಂಬಂಧಪಟ್ಟ ಮಂತ್ರಿಗಳು ಯಾರು ಇದ್ದಾರೋ ಅವರು ಮಾಡಬೇಕು. ಅನೇಕ ಕಮಿಟಿಗಳನ್ನು ಮಾಡುತ್ತೀರಿ, ಅವರು ರಿಪೋರ್ಟ್‌ಗಳನ್ನು ಕೂಡ ಕೊಟ್ಟುಬಿಡುತ್ತಾರೆ. ಇದಕ್ಕೆ ಸಾವಿರಾರು ರೂಪಾಯಿಗಳೂ ಕೂಡ ಖರ್ಚಾಗುತ್ತದೆ. ಈ ಬಗ್ಗೆ ರಿಪೋರ್ಟ್‌ಗಳು ಬಂದಮೇಲೆ ಅದರ ಮೇಲೆ ಸರಿಯಾದ ಆಕ್ಷನ್ ತೆಗೆದುಕೊಳ್ಳದೇ ಹೋದರೆ ಮಾಡಿದಂಥಾ ಕೆಲಸವೆಲ್ಲಾ ಸಾರ್ಥಕವಾಗುವುದಿಲ್ಲ. ಆದುದರಿಂದ ಈ ಬಗ್ಗೆ ನಿರಾಶೆಯಾಗದೇ ಇರುವ ಹಾಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವಂತ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ನನ್ನ ಪ್ರಾರ್ಥನೆ ಏನೆಂದರೆ ನಮ್ಮ ಕರ್ನಾಟಕ ವಿಧಾನ ಮಂಡಲದ ವರದಿಗಾರರ ಬಹು ದಿನಗಳ ಒಂದು ಬೇಡಿಕೆಯನ್ನು, ೫ ಅಂಶಗಳ ಒಂದು ಬೇಡಿಕೆಯನ್ನು ಸಹ ಸಹಾನುಭೂತಿಯಿಂದ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್. – ಏನು ಬೇಡಿಕೆ ಅದು ?

ಶ್ರೀ ವೈ. ರಾಮಕೃಷ್ಣ.—ನನಗೆ ಸಮಯವಿಲ್ಲವಾದುದರಿಂದ ಆ ಬೇಡಿಕೆಗಳು ಯಾವುವು ಎನ್ನುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ ?

೧) ವರದಿಗಾರರಿಗೆ ಹಾಲಿ ಇರತಕ್ಕಂಥಾ ೨೫ ಪರ್ಸೆಂಟ್ ಬಡ್ತಿ ಪ್ರಮಾಣವನ್ನು ೫೦ ಪರ್ಸೆಂಟಿಗೆ ವಿಸ್ತರಿಸುವುದು.

೨) ಚರ್ಚಾ ಸಂಪಾದಕರ ಹುದ್ದೆಯನ್ನು ದ್ವಿಗುಣಗೊಳಿಸಿ, ಸದರಿ ಹುದ್ದೆಗಳಿಗೆ ವರದಿಗಾರರಿಂದಲೇ ನೇರ ನೇಮಕಾತಿ ಮಾಡುವುದು.

೩) ಅದೇ ರೀತಿ ಸಹಾಯಕ ಚರ್ಚಾ ಸಂಪಾದಕರ ಹುದ್ದೆಯನ್ನು ದ್ವಿಗುಣಗೊಳಿಸಿ ಸದರಿ ಹುದ್ದೆಗಳಿಗೂ ಕೂಡ ವರದಿಗಾರರಿಂದಲೇ ನೇರ ನೇಮಕಾತಿ ಮಾಡುವುದು.

೪) ಮೊದಲು ಇದ್ದ ಪದ್ಧತಿಯಂತೆ ಅಧ್ಯಕ್ಷರ ಹಾಗೂ ಸಭಾಪತಿಯವರ ಆಪ್ತ ಕಾರ್ಯದರ್ಶಿಗಳ ಹುದ್ದೆಗಳನ್ನೂ ಕೂಡ ನೇರವಾಗಿ ವರದಿಗಾರರಿಂದಲೇ ನೇಮಕ ಮಾಡುವಂತೆ ವ್ಯವಸ್ಥೆ ಮಾಡುವುದು.

೫) ಸಬಾರ್ಡಿನೇಟ್ ಲೆಜಿಸ್ಲೇಷನ್ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಭರ್ತಿಮಾಡುವಾಗ ವರದಿಗಾರರಿಗೆ ಆದ್ಯತೆ ಕೊಡುವುದು.

ಇದನ್ನು ಮಾನ್ಯ ಮಂತ್ರಿಗಳು ತೀವ್ರವಾಗಿ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ. ರಾಜೂಗೌಡ (ಹಾನೂರ್).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕೃಷಿ ಮತ್ತು ತೋಟಗಾರಿಕೆಯ ಸಚಿವರು ಈ ಸದನದಲ್ಲಿ ಮಂಡಿಸಿದಂಥಾ ಬೇಡಿಕೆಗಳನ್ನು ನಾನು ಪ್ರಬಲವಾಗಿ ಸಮರ್ಥಿಸುತ್ತಾ ಆ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ವೈ. ರಾಮಕೃಷ್ಣ ಅವರು ರೈತರ ಬಗ್ಗೆ ಮಾತನಾಡುವಾಗ ಕೆಲವು ವಿಷಯಗಳನ್ನು ಈ ಇಲಾಖೆಯ ಮೇಲೆ ಆರೋಪಿಸಿದ್ದಾರೆ. ಇದರಲ್ಲಿ ಅವರು ಪ್ರಮುಖವಾಗಿ ಹೇಳತಕ್ಕಂಥಾದ್ದು ಈ ಇಲಾಖೆಯಲ್ಲಿ ಜಡತ್ವ ಕೂಡಿದೆ ಎನ್ನುವ ಒಂದು ಅರ್ಥದಲ್ಲಿ ಹೇಳಿದ್ದಾರೆ. ಈ ಇಲಾಖೆ ಕೃಷಿಗೆ ಸಂಬಂಧಪಟ್ಟಂತೆ ಸಂಪರ್ಕವನ್ನು ಇಟ್ಟುಕೊಂಡಿಲ್ಲ ಮತ್ತು ಇದರಲ್ಲಿ ರೈತನ ಒಂದು ಸಂಪರ್ಕವನ್ನೂ ಸಹ ಇಟ್ಟುಕೊಂಡಿಲ್ಲ. ಅಂಥಾ ವ್ಯವಸಾಯದ ಉಪಕರಣಗಳನ್ನು ಇವರು ಇಟ್ಟುಕೊಂಡಿದ್ದಾರೆ ಅಂತ ಹೇಳಿದರು. ಮತ್ತು ಇದರಲ್ಲಿ ಒಂದು ಆಧುನಿಕವಾದ ವ್ಯವಸ್ಥೆ ಇಲ್ಲ. ಈ ರೀತಿಯಾಗಿ ದೋಷ ರಹಿತವಾದಂಥಾ ಆಪಾದನೆಗಳನ್ನು ಮಾಡಿರುವುದೇ ಅಲ್ಲದೆ ಇನ್ನೂ ಅನೇಕ ಲೋಪಗಳನ್ನು ಮಾಡಿದೆ ಅಂತ ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಬೀಜಗಳನ್ನು ವಿತರಣೆ ಮಾಡುವುದರಲ್ಲೂ ಕೂಡ ವಿಫಲವಾಗಿದೆ ಎಂದು ಆರೋಪ ಮಾಡಿದ್ದಾರೆ. ಸ್ವಾಮಿ ನಾನಾದರೂ ಇದರ ಬಗ್ಗೆ ಹೇಳುತ್ತೇನೆ ಬಹುಶಃ ನಮ್ಮ ರಾಜ್ಯದಲ್ಲಿರತಕ್ಕ ಪ್ರತಿಯೊಂದು ಕೃಷಿ ಕುಟುಂಬಗಳನ್ನೂ ಆಧುನಿಕ ರೀತಿಯಲ್ಲಿ ವ್ಯವಸಾಯಕ್ಕೆ ಒಳಪಡಿಸಬೇಕು ಎಂದು ಹೇಳಿ ರೈತರ ಸರ್ವ ವಿಧದಲ್ಲೂ ಕೂಡ ಜಾಗೃತಿ ಕೆಲಸ ಮಾಡಿದ್ದಾರೆ. ಈ ಬಗ್ಗೆ ಈ ಇಲಾಖೆ ಅನೇಕ ಪ್ರಚಾರ ಕಾರ್ಯಕ್ರಮಗಳನ್ನೂ ಕೂಡ ಕೈಗೊಂಡಿದ್ದಾರೆ. ಇದರಲ್ಲಿ ಇಲಾಖೆಯವರು ಯಾವ ರೀತಿ ಪ್ರಚಾರ ಮಾಡಿದ್ದಾರೆ ಎಂದರೆ ಕರಪತ್ರ ಹಂಚುವ ಮುಖಾಂತರ, ಅಲ್ಲಿ ಗ್ರಾಹಕರ ಪ್ರದರ್ಶನಗಳನ್ನು ಮಾಡುವುದರ ಮುಖಾಂತರ, ಮತ್ತು ಜಾಹೀರಾತುಗಳನ್ನು ದಿನಪತ್ರಿಕೆಯಲ್ಲಿ, ಮಾಸಿಕ ಪತ್ರಿಕೆಯಲ್ಲಿ, ಅನೇಕ ಪತ್ರಿಕೆಗಳಲ್ಲಿ ಮತ್ತು ಚಲನಚಿತ್ರ ಮಂದಿರಗಳಲ್ಲಿ ಮತ್ತು ಬಾನುಲಿ ಮುಖಾಂತರ, ಇನ್ನೂ ಯಾವ್ಯಾವ ರೀತಿ ಸಾಧ್ಯವೋ ಅವೆಲ್ಲಾದರ ಮುಖಾಂತರ, ಪ್ರಚಾರ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ರೈತನಿಗೆ ಆಧುನಿಕ ರೀತಿಯಲ್ಲಿ ವ್ಯವಸಾಯಕ್ಕೆ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನೆಲ್ಲಾ ಸರ್ಕಾರ ಕೈಗೊಂಡಿದೆ. ನಾವು ೨೦ ವರ್ಷಗಳ ಒಂದು ಅಂಕಿಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದರೆ

ಹಿಂದೆಂದೂ ಆಗದಷ್ಟು ಪ್ರಗತಿ ಇವೊತ್ತಿನ ಬಹಳ ಹೆಚ್ಚಿನ ಒಂದು ಪ್ರಗತಿಯಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಸ್ವಾಮಿ ಪ್ರಸ್ತುತ ವರ್ಷದಲ್ಲಿ ಆಹಾರಧಾನ್ಯವನ್ನು ಸುಮಾರು ೭೮ ಲಕ್ಷ ಟನ್‌ವರೆಗೆ ಪಡೆಯುತಕ್ಕಂಥ ನಿರೀಕ್ಷೆಯಲ್ಲಿದ್ದೇವೆ. ೧೯೫೬-೫೭ರಲ್ಲಿ ಕೇವಲ ೩೩.೩೩ ಲಕ್ಷ ಟನ್ ಆಹಾರಧಾನ್ಯವನ್ನು ನಾವು ಉತ್ಪಾದನೆ ಮಾಡಿದ್ದು, ಕೇವಲ ೨೨ ವರ್ಷಗಳಲ್ಲಿ ಸುಮಾರು ಎರಡೂವರೆಯಷ್ಟು ಆಹಾರಧಾನ್ಯವನ್ನು ಉತ್ಪಾದನೆ ಮಾಡಿದ್ದೇವೆ. ಇದು ಒಂದೇ ಅಲ್ಲ, ಕರ್ನಾಟಕ ರಾಜ್ಯದಲ್ಲಿ ಹೈಬ್ರಿಡ್ ಮೇಜ್‌ನ್ನು ಬೆಳೆಯುವುದರಲ್ಲಿ ಇಡೀ ದೇಶದಲ್ಲಿ ನಾವು ಮುಂದೆ ಬಂದಿದ್ದೇವೆ. ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವರೀತಿಯಲ್ಲಿ ಹರಿಯಾಣ ಗೋಧಿಯನ್ನು ಬೆಳೆಯುವುದರಲ್ಲಿ ವಿಕ್ರಮವನ್ನು ಸ್ಥಾಪನೆ ಮಾಡಿದೆಯೋ ಅದೇ ರೀತಿಯಲ್ಲಿ ನಮ್ಮ ರಾಜ್ಯ ಹೈಬ್ರಿಡ್ ಜೋಳವನ್ನು ಬೆಳೆಯುವುದರಲ್ಲಿ ವಿಕ್ರಮವನ್ನು ಸ್ಥಾಪನೆ ಮಾಡಿದೆ, ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮತ್ತು ಇವತ್ತಿನ ದಿವಸ ರೈತರಿಗೆ ಇಲಾಖೆಯ ನೇತೃತ್ವದಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿ, ಸುಮಾರು ೭ ತರಬೇತಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ಪ್ರತಿವರ್ಷವೂ ಕೂಡ ಸುಮಾರು ೨೦ ಸಾವಿರ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದರ ಜೊತೆಗೆ ೧೩ ವ್ಯವಸಾಯ ಪಾಠಶಾಲೆಗಳಲ್ಲಿ ಸುಮಾರು ೩೦೦ ಜನ ತರಬೇತಿಯನ್ನು ಪಡೆಯುತ್ತಿದ್ದಾರೆ. ಇಡೀ ರೈತ ಸಮೂಹವನ್ನು ಆಧುನಿಕ ವ್ಯವಸಾಯದ ಚೌಕಟ್ಟಿನಲ್ಲಿ ತರಬೇಕು ಎನ್ನುವ ಉದ್ದೇಶದಿಂದ ಪ್ರತಿ ನೀರಾವರಿ ಬೇಸಾಯ ಮಾಡತಕ್ಕ ೪೦೦ ಕುಟುಂಬಗಳಿಗೆ ಒಬ್ಬ ಸಹಾಯಕ ಅಧಿಕಾರಿಯನ್ನು, ಖುಷ್ಕಿ ಜಮೀನು ಇರುವ ಕಡೆ ಪ್ರತಿ ೮೦೦ ಕುಟುಂಬಗಳಿಗೆ ಒಬ್ಬ ಸಹಾಯಕ ಅಧಿಕಾರಿಯನ್ನು ನೇಮಕ ಮಾಡಬೇಕು ಎನ್ನುವ ಒಂದು ಯೋಚನೆಯನ್ನು ನಮ್ಮ ಸರ್ಕಾರದವರು ಹಾಕಿಕೊಂಡಿದ್ದಾರೆ. ಈಗಾಗಲೇ ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತಂದು, ಇನ್ನು ಮೂರು ವರ್ಷಗಳಲ್ಲಿ ೧೯ ಜಿಲ್ಲೆಗಳಲ್ಲಿಯೂ ಇದನ್ನು ಜಾರಿಗೆ ತರುವುದರಲ್ಲಿದ್ದಾರೆ ಇದನ್ನೆಲ್ಲಾ ನಾವು ಅವಲೋಕನ ಮಾಡಿದಾಗ ನಮ್ಮ ಇಲಾಖೆಯವರು ರೈತರೊಂದಿಗೆ ಯಾವ ರೀತಿಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದಾರೆ ಎನ್ನುವುದನ್ನು ಮಾನ್ಯ ರಾಮಕೃಷ್ಣ ಅವರೇ ಹೇಳಬೇಕು. ಪ್ರತಿ ನೀರಾವರಿಯ ೪೦೦ ಕುಟುಂಬಗಳಿಗೊಬ್ಬ ಸಹಾಯಕ ಅಧಿಕಾರಿಯನ್ನು ನೇಮಿಸುವಂತೆ ಯೋಜನೆಯನ್ನು ನಮ್ಮ ಸರ್ಕಾರ ಇಟ್ಟುಕೊಂಡಿರುವಾಗ ಯಾವರೀತಿಯಲ್ಲಿ ನಮ್ಮ ಇಲಾಖೆ ರೈತರೊಂದಿಗೆ ಸಂಪರ್ಕವಿಟ್ಟುಕೊಂಡಿದೆ ಎನ್ನುವುದನ್ನು ನಾವು ಗಮನಿಸಬೇಕಾಗುತ್ತದೆ.

ಸುಮಾರು ೨೦ ವರ್ಷಗಳ ಹಿಂದೆ, ನಮ್ಮ ರೈತರು ರಾಸಾಯನಿಕ ಗೊಬ್ಬರವನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಿದ್ದರು ಎನ್ನುವುದನ್ನು ನಾವು ನೋಡಬೇಕಾಗಿದೆ. ೧೯೫೬- ೭ ರಲ್ಲಿ ಸುಮಾರು ೩೯೦೦ ಟನ್ ಗೊಬ್ಬರವನ್ನು ಉಪಯೋಗಿಸುತ್ತಿದ್ದರು. ಇವತ್ತು, ಮೂರು ಲಕ್ಷ ಟನ್ ರಾಸಾಯನಿಕ ಗೊಬ್ಬರವನ್ನು ನಮ್ಮ ರೈತರು ಉಪಯೋಗಿಸುತ್ತಿದ್ದಾರೆ. ಪ್ರತಿಯೊಬ್ಬ ರೈತರು ಬೇಸಿಗೆಯ ಬೆಳೆಗೆ ಅತಿ ಹೆಚ್ಚಿನ ರೀತಿಯಲ್ಲಿ ಗೊಬ್ಬರವನ್ನು ಉಪಯೋಗಿಸತಕ್ಕದ್ದನ್ನು ಅಳವಡಿಸಿಕೊಂಡಿದ್ದಾರೆ. ೧೯೫೬-೫೭ರಲ್ಲಿ ನಮ್ಮ ರಾಜ್ಯದಲ್ಲಿ ಅಕ್ಕಿಯ ಉತ್ಪಾದನೆ ೧೦.೮೬ ಲಕ್ಷ ಟನ್ ಇತ್ತು. ಇವತ್ತು ೨೨.೫೬ ಲಕ್ಷ ಟನ್ನುಗಳಿಗೆ ಏರಿದೆ. ಜವಾರ್ ೮.೩ ಟನ್ ಇದ್ದು ಇವತ್ತು ೧೭ ಲಕ್ಷ ಟನ್‌ಗಳಿಗೆ ಏರಿದೆ, ರಾಗಿ ೭.೬ ಲಕ್ಷ ಟನ್ ಇದ್ದು ಇವತ್ತು ೧೩.೭೦ ಲಕ್ಷ ಟನ್‌ಗಳಿಗೆ ಏರಿದೆ. ಎಣ್ಣೆ ಬೀಜಗಳ ವಿಷಯದಲ್ಲಿ ನಾವು ಸಾಕಷ್ಟು ಬೆಳೆಯನ್ನು ಪಡೆಯುವುದಕ್ಕೆ ಸಾಧ್ಯವಿಲ್ಲದಿದ್ದರೂ ಕೂಡ, ಇಲಾಖೆಯವರು ಒಂದು ಹೊಸ ಕಾರ್ಯಕ್ರಮವನ್ನು ಹಾಕಿಕೊಂಡು ಬೇಸಾಯಗಾರರಿಗೆ ಇಂತಿಷ್ಟು ಭೂಮಿಯಲ್ಲಿ ಎಣ್ಣೆಯ ಬೀಜಗಳನ್ನು ಬೆಳೆಯಬೇಕು ಎಂದು ನಿಗದಿ ಮಾಡಿದ್ದಾರೆ. ಅದರ ಪ್ರಕಾರ ರಾಜ್ಯದಲ್ಲಿ ಸುಮಾರು ನಾಲ್ಕು ಲಕ್ಷ ಹೆಕ್ಟೇರು ಭೂಮಿಯಲ್ಲಿ ನಾವು ಎಣ್ಣೆಯ ಬೀಜಗಳನ್ನು ಬೆಳೆಯಬೇಕಾಗಿದೆ. ಈ ಎಣ್ಣೆಯ ಬೀಜಗಳಲ್ಲಿ ನಮಗೆ ಏನೊಂದು ಕೊರತೆ ಇದೆ ಅದನ್ನು ತುಂಬಲಿಕ್ಕೆ ಇಲಾಖೆಯ ಮುಖಾಂತರ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮೊನ್ನೆಯ ದಿವಸ ಕೇಂದ್ರದ ವ್ಯವಸಾಯ ಕಾರ್ಯದರ್ಶಿಯವರೊಂದಿಗೆ ನಮ್ಮ ರಾಜ್ಯದ ಇಲಾಖಾ ಕಾರ್ಯದರ್ಶಿಗಳು ಸಮಾಲೋಚನೆ ಮಾಡಿ ಬೇಸಿಗೆಯಲ್ಲಿ ಇಷ್ಟು ಹೆಕ್ಟೇರುಗಳಲ್ಲಿ ಎಣ್ಣೆ ಬೀಜಗಳನ್ನು ಬೆಳೆಯಬೇಕು ಎಂದು ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಸರ್ಕಾರದವರೇ ಇಂತಿಷ್ಟು ಭೂಮಿಯಲ್ಲಿ ಎಣ್ಣೆಯ ಬೀಜಗಳನ್ನು ಬೆಳೆಯಬೇಕು ಎಂದು ನಿಗದಿಪಡಿಸಿದಾಗ ನಾವು ರಾಜ್ಯದಲ್ಲಿ ಸಮತೋಲನವಾಗತಕ್ಕ ಬೆಳೆಯನ್ನು ಬೆಳೆಯಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಮಾತನಾಡತಕ್ಕ ಒಂದು ಮಾತನ್ನು ನಾನು ಸಮರ್ಥನೆ ಮಾಡುತ್ತೇನೆ. ಸರ್ಕಾರದವರು ಸಣ್ಣ ರೈತರಿಗೆ ತಕಾವಿ ಸಾಲ ಇನ್ನಿತರೆ ಸಾಲಗಳನ್ನು ಕೊಟ್ಟಿದ್ದಾರೆ. ಅವರುಗಳು ಕಳೆದ ೨೦–೩೦ ವರ್ಷಗಳಲ್ಲಿ ಈ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗಿಲ್ಲ. ಈ ಸಾಲಕ್ಕೆ ಒಂದಕ್ಕೆ ಹತ್ತರಷ್ಟು ಬಡ್ಡಿಯು ಜಾಸ್ತಿಯಾಗಿದೆ. ಆದ್ದರಿಂದ ಪಕ್ಕದ ರಾಜ್ಯವಾದ ತಮಿಳುನಾಡಿನವರು ಏನೊಂದು ಸಣ್ಣ ರೈತರ ಈ ಸಾಲಗಳನ್ನೇ ಮಾಫಿ ಮಾಡಿದ್ದಾರೆ ಅದರಂತೆ, ನಮ್ಮ ರಾಜ್ಯದವರು ಸಣ್ಣ ರೈತರ ಈ ಸಾಲಗಳನ್ನು ಪೂರ್ತಿಯಾಗಿ ಮಾಫಿ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಇವತ್ತು ಸಣ್ಣ ರೈತರ ಜಮೀನನ್ನು ಸಾಲಕ್ಕೋಸ್ಕರ ಮಾರಾಟ ಮಾಡಿದರೂ ಸಹ ಸಾಲದಷ್ಟು ಹಣ ಜಮೀನಿನಿಂದ ಬರುವುದಿಲ್ಲ. ತಮಿಳುನಾಡು ರಾಜ್ಯದವರು ಈ ದಿಸೆಯಲ್ಲಿ ಹಾಕಿಕೊಂಡ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿಯೂ ಸರ್ಕಾರದವರು ಮನಸ್ಸುಮಾಡಿ, ಉದಾರಿ ಎನ್ನುವ ಹೆಸರನ್ನು ಪಡೆಯಬೇಕು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಸಾರಿ ನಾನು ಈ ಬೇಡಿಕೆಯ ಬಗ್ಗೆ ಮಾತನಾಡುತ್ತಾ ಇರುವಾಗ ಎರಡು ವಿಷಯಗಳನ್ನು ತಿಳಿಸಿದ್ದೆ. ಒಂದು, ಬೆಳೆಯ ವಿಮಾ ಯೋಜನೆ, ಎರಡನೆಯದು, ಜೌಗು ಅಥವಾ ಚೌಳು ಇರುವ ಪ್ರದೇಶವನ್ನು ವ್ಯವಸಾಯಕ್ಕೆ ಅಳವಡಿಸುವುದು. ಬೆಳೆ ವಿಮಾ ಯೋಜನೆಯನ್ನು ತಾವು ಎಷ್ಟು ಪ್ರದೇಶಗಳಲ್ಲಿ ಜಾರಿಗೆ ತಂದಿದ್ದೀರಿ ? ಮತ್ತು ಚೌಳು ಪ್ರದೇಶವನ್ನು ವ್ಯವಸಾಯಕ್ಕೆ ಅಳವಡಿಸಲು ೧೫೦ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ, ಸಾಧ್ಯವಾದಷ್ಟು ಮಾಡುತ್ತೇನೆಂದು ತಾವು ಉತ್ತರ ಕೊಟ್ಟಿದ್ದೀರಿ. ಚೌಳು ಭೂಮಿಯನ್ನು ತಡೆಗಟ್ಟುವುದಕ್ಕೆ ಏನು ಮಾಡುತ್ತಿದ್ದೀರಿ ಎನ್ನುವುದೇ ತಿಳಿದುಬರುತ್ತಿಲ್ಲ. ದಯಮಾಡಿ ತಾವು ಉತ್ತರ ಕೊಡುವಾಗ ಈ ಎರಡು ವಿಷಯಗಳ ಬಗ್ಗೆಯೂ ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಕಡಿಮೆ ಹಿಡುವಳಿದಾರರ ಸಂಖ್ಯೆ ೧೦ ೮೦ ಲಕ್ಷ. ೫ ರಿಂದ ೧೦ ಎಕರೆ ಜಮೀನುಳ್ಳವರು ಬಹುಶಃ ೫ ೫೨ ಲಕ್ಷ ಇರಬಹುದು, ಇವರು ಹೊಂದಿರುವ ಜಮೀನಿನ ವಿಸ್ತೀರ್ಣ ೮.೪ ಲಕ್ಷ ಎಕರೆ. ೧ ರಿಂದ ೨ ಎಕರೆ ಜಮೀನುಳ್ಳವರು ೮.೪ ಲಕ್ಷ ಜನರಿದ್ದು ಇವರು ಹೊಂದಿರುವ ಜಮೀನು ೧೨.೨ ಹೆಕ್ಟೇರುಗಳು. ಇವರ ಬಗ್ಗೆ ನಾನು ಈ ಸಮಯದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಸರ್ಕಾರದವರು ತಮ್ಮ ಬೊಕ್ಕಸದಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅನೇಕ ನೀರಾವರಿ ಕಾಮಗಾರಿಗಳನ್ನು, ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ತಯಾರು ಮಾಡಿದ್ದಾರೆ. ಇವುಗಳ ಕೆಳಗೆ ಬರತಕ್ಕ ಭೂಮಿಗೇನೋ ನೀರು ಒದಗುತ್ತದೆ. ಆದರೆ ಸಣ್ಣ ರೈತರಿಗೆ ನೀರೇ ಒದಗದಿದ್ದರೆ ಯಾವ ವ್ಯವಸ್ಥೆಯನ್ನು ನೀವು ಅವರಿಗೆ ಮಾಡಬೇಕು ? ಜಮೀನು ಅಡಮಾನ ಬ್ಯಾಂಕುಗಳ ಮುಖಾಂತರ ತಾವು ಅವರಿಗೆ ಸಾಲ ಕೊಟ್ಟು ಬಾವಿಗಳನ್ನು ಮಾಡಿಸಬೇಕು ಎಂದು ಹೊರಟಿದ್ದೀರಿ. ಆದರೆ ಈ ಜನರಿಗೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ರಾಜ್ಯದ ಸಂಪತ್ತು ಕೆಲವೇ ವರ್ಗದ ಜನರಿಗೆ ಮೀಸಲಾಗಿಡದೆ, ಸಣ್ಣ ರೈತರಿಗೂ ಇದರ ಪಾಲು ದೊರಕಿ, ಅವರ ಜಮೀನುಗಳನ್ನು ನೀರಾವರಿಗೆ ಒಳಪಡಿಸುವ ಒಂದು ಕಾರ್ಯಕ್ರಮವನ್ನು ತಾವು ಜಾರಿಗೆ ತರಬೇಕು ಎಂದು ನಾನು ಹೇಳುತ್ತೇನೆ. ಈ ದಿಸೆಯಲ್ಲಿ ರಿಸರ್ವ್ ಬ್ಯಾಂಕಿನಿಂದ ಸಾಲವನ್ನು ತಾವೇ ನೇರವಾಗಿ ಹಣವನ್ನು ಪಡೆದು ರೈತರಿಗೆ ನೀರಾವರಿ ಬಾವಿಗಳನ್ನು ಸೃಷ್ಟಿ ಮಾಡಿ ಅವರ ಜಮೀನನ್ನು ನೀರಾವರಿಗೊಳಪಡಿಸಿ ಅವರನ್ನು ಉದ್ಧಾರಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಾವು ಯಾವ ಬೆಳೆಯನ್ನು ಬೆಳೆಯಬೇಕಾದರೂ ರಾಸಾಯನಿಕ ಗೊಬ್ಬರವನ್ನು ಹಾಕಲೇಬೇಕು ಹಾಕದಿದ್ದರೆ, ಯಾವ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ೧೨ ವರ್ಷಗಳ ಹಿಂದೆ ಒಂದು ಎಕರೆ ಭೂಮಿಗೆ ಒಂದು ಮೂಟೆ ಯೂರಿಯಾ ಹಾಕಿದಾಗ ಎಷ್ಟು ಬೆಳೆಯನ್ನು ಬೆಳೆಯುತ್ತಿದ್ದೆವೋ ಅಷ್ಟೇ ಬೆಳೆಯನ್ನು ಇವತ್ತು ಬೆಳೆಯಬೇಕಾದರೆ ಸುಮಾರು ಮೂರು ಮೂಟೆ ಯೂರಿಯಾ ಹಾಕಬೇಕಾಗುತ್ತದೆ. ಇದಕ್ಕೆ ಕಾರಣ ಏನು ಎನ್ನುವುದನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ನಮಗೆ ಗೊತ್ತಿರುವ ಹಾಗೆ ಭೂಮಿಯಲ್ಲಿ ಸಸಿಯನ್ನು ಇಟ್ಟಮೇಲೆ ಪ್ರಕೃತಿ ದತ್ತವಾದ ೧೬ ಗುಣಗಳೂ ಇರಬೇಕು. ಈ ಗುಣಗಳು ಈಗ ಗೊಬ್ಬರವನ್ನು ನಾವು ಅಳವಡಿಸಿದ ಮೇಲೆ ಕಡಿಮೆಯಾಗಿವೆ ಎನ್ನತಕ್ಕ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ನಾವು ಇದೇ ದಾಟಿಯಲ್ಲಿ ಭೂಮಿಯಲ್ಲಿ ಗೊಬ್ಬರ ಹಾಕಿ ಬೆಳೆಯನ್ನು ಬೆಳೆಸುವುದಾದರೆ, ಕೆಲವೇ ವರ್ಷಗಳಲ್ಲಿ ಪ್ರಕೃತಿ ದತ್ತವಾದ ಯಾವ ಒಂದು ಗುಣ ಇದೆ ಅದು ನಾಶವಾಗಿ ಹೋಗುತ್ತದೆ. ಆದ್ದರಿಂದ ಇಲಾಖೆಯವರು ರೈತರು ರಾಸಾಯನಿಕ ಗೊಬ್ಬರವನ್ನು

ಉಪಯೋಗಿಸತಕ್ಕ ಕಾಲದಲ್ಲಿ ದನದ ಗೊಬ್ಬರವನ್ನೂ ಇಂತಿಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕು ಎಂದು ನಿಗಧಿಮಾಡಬೇಕು. ಹಾಗಿಲ್ಲದಿದ್ದರೆ ರೈತನ ಭೂಮಿ ಹಾಳಾಗಿ ಹೋಗುತ್ತದೆ, ಮತ್ತು ಫಲವತ್ತಾದ ಭೂಮಿಯ ಸಾರವೂ ಕಡಿಮೆಯಾಗುತ್ತದೆ ಎನ್ನುವುದನ್ನು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೨೦-೩೦ ವರ್ಷಗಳ ಕೆಳಗೆ, ನಾವು ಹಸುಗಳಿಂದ ಪಡೆಯುತಕ್ಕ ಹಾಲಿನ ಗುಣಮಟ್ಟಕ್ಕೂ ಇವತ್ತಿನ ಹಸುವಿನ ಹಾಲಿನ ಗುಣಮಟ್ಟಕ್ಕೂ ಬಹಳ ವ್ಯತ್ಯಾಸವಿದೆ. ಈಗಿನ ಹಾಲಿನಲ್ಲಿ ಪೌಷ್ಟಿಕಾಂಶಗಳು ಹೆಚ್ಚಿನ ರೀತಿಯಲ್ಲಿರುವುದಿಲ್ಲ ಎನ್ನುವುದನ್ನು ನಾವು ತಿಳಿದಿದ್ದೇವೆ. ಇವತ್ತು ನಾವು ಪ್ರೊಡಕ್ಷನ್ ದೃಷ್ಟಿಯಿಂದ ಹೆಚ್ಚು ಬೆಳೆಯನ್ನು ಬೆಳೆದರೂ, ಹೆಚ್ಚು ಹಾಲನ್ನು ಉತ್ಪಾದನೆ ಮಾಡಿದರೂ ಸಹ ಗುಣಮಟ್ಟದಲ್ಲಿ ನಾವು ಮೊದಲು ಯಾವ ಗುಣಮಟ್ಟವನ್ನು ಹೊಂದಿದ್ದೇವೆ ಅದು ಬಹಳ ಕಡಿಮೆಯಾಗಿದೆ ಎನ್ನುವುದನ್ನು ನಾವೆಲ್ಲರೂ ಒಪ್ಪಬೇಕಾಗಿದೆ. ಹಿಂದಿನ, ಹಾಲು, ಬೆಣ್ಣೆ, ತುಪ್ಪ, ಇವತ್ತು ದೊರಕುತ್ತಿಲ್ಲ. ಇದಕ್ಕೆ ಕಾರಣ ಏನೆಂದರೆ, ನಾವು ಹೆಚ್ಚಾಗಿ ರಾಸಾಯನಿಕ ಗೊಬ್ಬರಗಳನ್ನು ಭೂಮಿಯಲ್ಲಿ ಹಾಕುತ್ತಿದ್ದೇವೆ, ಆದರಿಂದ ಬೆಳೆದ ಹುಲ್ಲನ್ನು ನಮ್ಮ ಹಸುಗಳು ಉಪಯೋಗಿಸಿ ಹಾಲಿನ ಗುಣಮಟ್ಟವೂ ಕಡಿಮೆಯಾಗಿದೆ. ಆದ್ದರಿಂದ ಇಲಾಖೆಯವರು ಇದನ್ನು ಯಾವರೀತಿಯಲ್ಲಿ ತಡೆಗಟ್ಟಬೇಕು ಎನ್ನುವುದನ್ನು ಸಂಶೋಧನೆ ನಡೆಸಿ ರೈತರಿಗೆ ಸಲಹೆ ಮಾಡಬೇಕು ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಸ್ವಾಮಿ, ರೈತರಿಗೆ ಬಂದಿರುವ ಅತಿ ಹೆಚ್ಚಿನ ಪಿಡುಗು ಎಂದರೆ, ಜಮೀನುಗಳಲ್ಲಿ ಕಳೆ ಹುಟ್ಟುತ್ತಿರುವುದು. ಇದನ್ನು ಹೋಗಲಾಡಿಸಲು ರೈತರು ಬಹಳ ಹಣ ಖರ್ಚು ಮಾಡಬೇಕಾಗಿದೆ. ಈ ಕಷ್ಟ ತಪ್ಪಿಸಲು ಸಂಶೋಧನೆಯ ಮೂಲಕ ಏನಾದರು ದ್ರವ ಸಿಂಪಡಿಸುವುದರ ಮೂಲಕ ಇದು ಹುಟ್ಟದಂತೆ ಮಾಡಿದರೆ, ರೈತರಿಗೆ ಅತಿ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆಂದು ಹೇಳುತ್ತೇನೆ.

೪-೦೦ ಪಿ.ಎಂ.

ಇನ್ನು ಈ ರಾಜ್ಯದಲ್ಲಿ ಒಟ್ಟು ಜಮೀನಿನ ವಿಸ್ತೀರ್ಣ ೧೯೧.೧೬ ಹೆಕ್ಟೇರ್‌ಗಳು. ಇದರಲ್ಲಿ ವ್ಯವಸಾಯಕ್ಕೆ ಯೋಗ್ಯವಾಗಿರುವುದು ೧೦೩.೬ ಲಕ್ಷ ಹೆಕ್ಟೇರ್‌ಗಳು. ಇನ್ನುಳಿದ ಜಮೀನು ಬಂಜರು ಆಗಿರಬಹುದು. ಇದನ್ನು ಸಹ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನಾಗಿ ಪರಿವರ್ತನೆ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ನಮ್ಮ ರಾಜ್ಯದಲ್ಲಿರತಕ್ಕಂಥ ೨೬ ೮೫೬ ಹಳ್ಳಿಗಳಲ್ಲಿ ಕೃಷಿಯೇ ಮುಖ್ಯವಾದ ಕಸುಬಾಗಿದೆ. ಆದ ಕಾರಣ ಇದನ್ನು ಲಾಭದಾಯಕವಾದ ಉದ್ಯಮವನ್ನಾಗಿ ಪರಿವರ್ತನೆ ಮಾಡಬೇಕಾಗಿದೆ. ಇಲ್ಲವಿದ್ದರೆ ಇದರಲ್ಲಿ ತೊಡಗಿರುವವರು, ಈ ಉದ್ಯಮಕ್ಕೆ ಶರಣು ಹೊಡೆದು ಬೇರೆ ಕಡೆಗೆ ಹೋಗಬಹುದು. ಇದಕ್ಕೆ ಕಾರಣವೆಂದರೆ, ರೈತರು ಬೆಳೆದ ಬೆಳೆಗೆ ಸರಿಯಾದ ಬೆಲೆಯನ್ನು ನಿಗದಿ ಮಾಡದಿರುವುದು. ಇವೊತ್ತಿನ ದಿವಸ ಕಾರ್ಖಾನೆಗಳಲ್ಲಿ ತಯಾರಾಗುವಂತಹ ವಸ್ತುಗಳು ಏನಿವೆ, ಅವುಗಳ ಬೆಲೆಯನ್ನು ನಿಗದಿ ಮಾಡುವಾಗ, ಅವುಗಳನ್ನು ತಯಾರು ಮಾಡಲು ಆಗತಕ್ಕಂಥ ವೆಚ್ಚ, ಅಲ್ಲಿಯ ನೌಕರರಿಗೆ ಕೊಡುವಂತಹ ಸಂಬಳ ಹಾಗೂ ಬೋನಸ್ಸನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆದರೆ ರೈತರು ಬೆಳೆದ ಬೆಳೆಗೆ ಬೆಲೆಯನ್ನು ನಿಗದಿ ಮಾಡುವವರು ದೆಹಲಿಯಲ್ಲಿರುವ ಅಧಿಕಾರಿಗಳು. ಅವರಿಗೆ ಕೃಷಿ ಎಂದರೆ ಏನು ಎಂಬುದು ಗೊತ್ತಿರುವುದಿಲ್ಲ; ಅಂತಹವರ ಕೈಯಲ್ಲಿ ದರವನ್ನು ನಿಗದಿ ಮಾಡಿಸಲಾಗುತ್ತಿದೆ. ಇದರಿಂದ ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಇದು ನಮ್ಮ ಜವಾಬ್ದಾರಿ ಅಲ್ಲವೆಂದು ನಮ್ಮ ಸರ್ಕಾರದವರು ಹೇಳಬಹುದು. ಈ ಬಗ್ಗೆ ನನ್ನ ಸಲಹೆ ಏನೆಂದರೆ ಕೇಂದ್ರದವರು ದರ ನಿಗದಿ ಮಾಡಿದಮೇಲೆ ರೈತರಿಗೆ ಆಗತಕ್ಕಂಥ ನಷ್ಟವನ್ನು ಸಬ್ಸಿಡಿ ಮೂಲಕ ಭರ್ತಿ ಮಾಡಿಕೊಡಬೇಕೆಂದು ಹೇಳುತ್ತೇನೆ. ಒಂದು ಪರ್ಸೆಂಟಿನಷ್ಟು ಇರತಕ್ಕಂಥ ಸರ್ಕಾರಿ ನೌಕರರಿಗೆ ಒಂದು ಡಿ.ಎ. ಕೊಡಲು ೫ ಕೋಟಿ ರೂಗಳವರೆಗೆ ಖರ್ಚು ಮಾಡುವಾಗ, ೮೫ ಪರ್ಸೆಂಟಿನಷ್ಟು ಇರತಕ್ಕಂಥ ಈ ರೈತರಿಗೆ ಉಪಕಾರ ಮಾಡಲು ೨೫-೩೦ ಕೋಟಿ ರೂಗಳನ್ನು ಸಬ್ಸಿಡಿ ಮೂಲಕ ಕೊಟ್ಟರೆ ರೈತರಿಗೆ ಎಲ್ಲ ವಿಧದಿಂದಲೂ ಉಪಕಾರ ಮಾಡಿದಂತೆ ಆಗುತ್ತದೆಂದು ಹೇಳುತ್ತೇನೆ. ಆದರೆ ಈ ರಾಜ್ಯದಲ್ಲಿ ಎಲ್ಲ ಮಟ್ಟದಲ್ಲಿಯೂ ಅಲಕ್ಷವಾಗಿರುವಂತಹ ಸಮಾಜವೆಂದರೆ ಈ ರೈತ ಸಮಾಜವೆಂದು ನಾನು ವಿಧಿ ಇಲ್ಲದೆ ಹೇಳಬೇಕಾಗಿದೆ. ನಾಲ್ಕು ದಶಕಗಳ ಹಿಂದೆ ಕವಿಯೊಬ್ಬ ಈ ರೀತಿ ಹಾಡಿದ್ದಾನೆ.—

"ಎಲ್ಲಿ ನೋಡಿದರೂ ದನಕರುಗಳೇ, ಆದರೆ ಬಡ ಕೃಷಿಕನ ತುತ್ತಿನ ಚೀಲ ಬರಿದೋ ಬರಿದೋ" ಎಂದು ಆ ಕವಿ ಹಾಡಿದ್ದಾನೆ. ಮುಖ್ಯವಾಗಿ ನಾನು ಹೇಳುವುದಿಷ್ಟೆ. ಆಹಾರಧಾನ್ಯಗಳ ಉತ್ಪಾದನೆ ಜಾಸ್ತಿಯಾಗುವಂತೆ ನೋಡಿಕೊಳ್ಳಬೇಕು ಮತ್ತು ಅವುಗಳಿಗೆ ಸರಿಯಾದ ಧಾರಣೆ ಸಿಗುವಂತೆ ವ್ಯವಸ್ಥೆ ಮಾಡಬೇಕು ಹಾಗೂ ಸಾಮಾನ್ಯ ಜನರಿಗೆ ಅದನ್ನು ಕೊಳ್ಳುವಂಥ ಶಕ್ತಿ ಇರುವಂತಹ ಶಕ್ತಿ ಇರುವಂತೆ ಮಾಡಬೇಕು, ಅಂದರೆ. ಈ ಮೂರರ ಬಗ್ಗೆಯೂ ಒಂದು ಸಮತೋಲನದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ರೈತರು ವ್ಯವಸಾಯವನ್ನು ಸರಿಯಾಗಿ ಮಾಡಿದರೆ ವರ್ಷದಲ್ಲಿ ಎರಡು ಬೆಳೆ ತೆಗೆಯಲು ಸಾಧ್ಯವಿದೆ. ಇಲ್ಲಿ ರೈತರಿಗೆ ಭತ್ತ ಬೆಳೆಯಲು ಎಷ್ಟು ಖರ್ಚು ಬರುತ್ತದೆಂಬುದನ್ನು ಲೆಕ್ಕ ಹಾಕಿ ನೋಡಿದರೆ ಒಂದು ಎಕರೆಯಲ್ಲಿ ಭತ್ತ ಬೆಳೆದರೆ, ಒಂದು ಕೆ.ಜಿ. ಭತ್ತ ಬೆಳೆಯಲು ನೂರಿಪ್ಪತ್ತೈದು ಪೈಸೆ ಖರ್ಚು ಬರುತ್ತದೆ. ಅದೇ ಎರಡು ಎಕರೆಯಲ್ಲಿ ಬೆಳೆದರೆ ಕೆ ಜಿ. ಒಂದಕ್ಕೆ ಎಂಭತ್ತೇಳೂವರೆ ಪೈಸೆ ಖರ್ಚು ಬರುತ್ತದೆ, ಅದೇ ೫ ಎಕರೆಯಲ್ಲಿ ಬೆಳೆದರೆ ಕೆ ಜಿ. ಒಂದಕ್ಕೆ ಐವತ್ತೈದು ಪೈಸೆ ಖರ್ಚು ಬರುತ್ತದೆ; ಇಷ್ಟೊಂದು ಹಣ ಖರ್ಚು ಮಾಡಿ ಆತ ಬೆಳೆದ ಆಹಾರಪದಾರ್ಥಗಳಿಗೆ ಕಡಿಮೆ ದರವನ್ನು ಸರ್ಕಾರದವರು ಗೊತ್ತು ಮಾಡಿದರೆ, ಆತನ ಪರಿಸ್ಥಿತಿ ಏನಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ವ್ಯವಸಾಯದ ಬದಲು ಸಾವಿರ ರೂಗಳ ಬಂಡವಾಳ ಹಾಕಿ ಒಂದು ಹೋಟೆಲ್ ಇಟ್ಟರೆ ಇಲ್ಲವೇ ಒಂದು ಸಣ್ಣ ಅಂಗಡಿಯನ್ನು ಇಟ್ಟರೆ ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಸಾಧ್ಯವಿದೆ. ಗ್ರಾಮಾಂತರ ಪ್ರದೇಶದ ಸಂಪರ್ಕವನ್ನು ಹೆಚ್ಚಾಗಿ ಇಟ್ಟುಕೊಂಡಿರತಕ್ಕಂಥ ಮಾನ್ಯ ಮಂತ್ರಿಗಳೂ ಸಹ ಇದನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆಂದು ನಾನು ಭಾವಿಸಿದ್ದೇನೆ.

ಇನ್ನು ರೈತನಿಂದ ಕೊಂಡ ಧಾನ್ಯವನ್ನು ಗ್ರಾಹಕರಿಗೆ ಮಾರತಕ್ಕಂಥ ದಳ್ಳಾಳಿಗಳು ಶೇಕಡಾ ಹತ್ತರಷ್ಟು ಲಾಭ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದರು. ಆದರೆ ಭಾರತದ ಆಹಾರ ನಿಗಮ ತನ್ನ ಒಂದು ಸೇವೆಯನ್ನು ಮಾಡಲು ೩೩ ಪರ್ಸೆಂಟಿನಷ್ಟು ಲಾಭ ಇಟ್ಟುಕೊಂಡು ಸೇವೆ ಸಲ್ಲಿಸುತ್ತಿದೆ. ಇದು ಬಹಳ ವಿಚಿತ್ರವಾಗಿದೆ. ಇಷ್ಟೊಂದು ಲಾಭ ಪಡೆಯುವುದು ಸರಿಯೋ ಎಂದು ನೋಡಬೇಕು. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಬೇಸಾಯಗಾರರು ತಮ್ಮ ಕಸುಬನ್ನೆ ಬಿಟ್ಟುಬಿಡಬಹುದು; ಆಗ ಆಹಾರದ ಅಭಾವ ಉಂಟಾಗಬಹುದು; ಆಗ ಎಲ್ಲೆಲ್ಲಿಯೂ ಹಾಹಾಕಾರ ಉಂಟಾಗಿ ದೇಶದ ಆರ್ಥಿಕ ವ್ಯವಸ್ಥೆಯೇ ಕುಸಿದು ಬೀಳಬಹುದೆಂದು ಹೇಳುತ್ತೇನೆ. ನಮ್ಮ ಅರ್ಥ ವ್ಯವಸ್ಥೆಯ ಪ್ರಧಾನವಾದಂಥ ಅಂಗಗಳು ಯಾವುವು ಎಂದರೆ, ಈ ಕೃಷಿ, ಕೈಗಾರಿಕೆ ವಿದೇಶಿ ವ್ಯಾಪಾರ ಹಾಗೂ ಸಾಗಾಣಿಕೆ; ಇವುಗಳ ಪ್ರಮಾಣ ಹೆಚ್ಚುತ್ತಾ ಹೋದರೆ ದೇಶವು ಸಮಗ್ರವಾಗಿ ಅಭಿವೃದ್ಧಿ ಹೊಂದುವುದಕ್ಕೆ ಸಾಧ್ಯವಿದೆ. ಈ ಪ್ರಧಾನ ಅಂಗಗಳಲ್ಲಿ ಯಾವುದಾದರು ಒಂದು ಕುಂಠಿತವಾದರೂ ಸಹ ಈ ದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ಈ ಪ್ರಧಾನವಾದಂಥ ಅಂಗಗಳು ವರ್ಷದಲ್ಲಿ ಶೇಕಡಾ ೫ರಂತೆ ಹೆಚ್ಚುತ್ತಾ ಹೋಗಬೇಕು. ಇಲ್ಲದಿದ್ದರೆ ದೇಶದ ಅಭಿವೃದ್ಧಿಯಾಗುವುದಿಲ್ಲವೆಂದು ತಜ್ಞರು ಹೇಳುತ್ತಾರೆ. ಆದಕಾರಣ ರೈತರು ಬೆಳೆದ ಬೆಳೆಗೆ ಯೋಗ್ಯ ಬೆಲೆಯನ್ನು ತಾವು ನಿಗದಿ ಮಾಡಬೇಕು. ಇಲ್ಲದಿದ್ದರೆ ರೈತರಿಗೆ ಬೇಜಾರಾಗಿ ಅವರು ಆ ವೃತ್ತಿಯನ್ನೆ ಬಿಡಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ವ್ಯವಸಾಯ ಮಾಡತಕ್ಕಂಥ ಭೂಮಿಯನ್ನೇ ಎರಡು ವರ್ಷಗಳ ಕಾಲ ವ್ಯವಸಾಯವನ್ನೇ ಮಾಡದೆ ಹಾಗೆಯೇ ಬಂಜರು ಬಿಟ್ಟರೆ ಅಂತಹ ಭೂಮಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಅಂದರೆ ಇರತಕ್ಕಂಥ ಭೂಮಿಯಲ್ಲಿ ಚೆನ್ನಾಗಿ ವ್ಯವಸಾಯ ಮಾಡಬೇಕು, ಹೆಚ್ಚಿನ ಉತ್ಪಾದನೆ ಮಾಡಬೇಕೆಂದು ತಾವು ಅಪ್ಪಣೆ ಕೊಡಿಸಿದ್ದೀರಿ, ಆದರೆ ಅವರು ಬೆಳೆದ ಬೆಳೆಗೆ ಮಾತ್ರ ಒಳ್ಳೆಯ ಬೆಲೆಯನ್ನು ತಾವು ನಿಗದಿ ಮಾಡಿಲ್ಲ. ಈ ರೀತಿಯಾದರೆ ರೈತರೆಲ್ಲರೂ ಜಮೀನನ್ನು ಬಂಜರು ಬಿಡದೆ ಮತ್ತೇನು ಮಾಡುತ್ತಾರೆ ?

ಉಪಾಧ್ಯಕ್ಷರು.—ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಜಿ. ರಾಜೂಗೌಡ.—ವಿದ್ಯುಚ್ಛಕ್ತಿ ದರ ಜಾಸ್ತಿಯಾಗಿದೆ, ಗೊಬ್ಬರ ಹಾಗೂ ವ್ಯವಸಾಯದ ಸಲಕರಣೆಗಳ ಧಾರಣೆಗಳು ಜಾಸ್ತಿಯಾಗಿವೆ. ಒಟ್ಟಿನಲ್ಲಿ ಹೇಳಬೇಕೆಂದರೆ, ರೈತರು ಬಹಳ ಕಷ್ಟದಲ್ಲಿದ್ದಾರೆ. ಇಂತಹ ರೈತರ ಬಗ್ಗೆ ಹೆಚ್ಚಿನ ಕಳಕಳಿ ಇರತಕ್ಕಂಥ ಸಚಿವರು ನಮಗೆ ಸಿಕ್ಕಿರುವುದು ತಮ್ಮ ಅದೃಷ್ಟವೆಂದು ಹೇಳಬೇಕಾಗಿದೆ. ಇನ್ನೂ ಹೆಚ್ಚಿನ ವಿಷಯಗಳನ್ನು ಹೇಳುವುದಿತ್ತು, ಆದರೆ ಸಮಯವಿಲ್ಲ; ಒಟ್ಟಿನಲ್ಲಿ ವ್ಯವಸಾಯಗಾರರ ಈಗಿನ ಪರಿಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷಿಣಿಯವರೇ, ವ್ಯವಸಾಯ ಮಂತ್ರಿಗಳು ಈ ಸಭೆಯ ಮುಂದೆ ಮುಂದಿನ ವರ್ಷ ತಮ್ಮ ಇಲಾಖೆಗೆ ಖರ್ಚಾಗತಕ್ಕ ಹಣಕ್ಕೆ ಮಂಜೂರಾತಿ ಕೊಡಬೇಕೆನ್ನತಕ್ಕ ಬೇಡಿಕೆಯನ್ನು ಮಂಡಿಸಿದ್ದಾರೆ. ಬಹುಶಃ ಶ್ರೀ ಮಾನ್ ರಂಗನಾಥ್ ಅವರ ಬಗ್ಗೆ ನನಗೆ ಅಪಾರ ಗೌರವ ಇದೆ. ಅವರು ನಿಜವಾಗಿಯೂ ಕೂಡ ಒಳ್ಳೆಯ ಮಂತ್ರಿಗಳು ಎಂದು ಹೇಳಿದರೆ ತಪ್ಪಾಗಲಾರದು. ಅವರು ಅಷ್ಟೇ ಕನಿಕರ ಉಳ್ಳವರು ಆದರೆ ಅವರ ಈ ಕನಿಕರ ಅಥವಾ ಒಳ್ಳೆಯತನವನ್ನು ಆ ಇಲಾಖೆಯೇನಾದರೂ ದುರುಪಯೋಗ ಮಾಡಿಕೊಳ್ಳುತ್ತಿದೆಯೋ ಏನೋ ಎಂಬ ಶಂಕೆ ನಮಗೆ ಬರುತ್ತದೆ. ವ್ಯವಸಾಯ ಇಲಾಖೆಯಲ್ಲಿ ಏನು ಒಂದು ಪ್ರಗತಿಯನ್ನು ಸಾಧನೆ ಮಾಡಬೇಕಾಗಿತ್ತೋ ಅವುಗಳನ್ನು ಸಾಧನೆ ಮಾಡಿಲ್ಲ ಎನ್ನುವವರಲ್ಲಿ ನಾನೂ ಒಬ್ಬ. ಮೊದಲನೆಯದಾಗಿ ಇವತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಮೂರು ಇಲಾಖೆಗಳನ್ನು ಒಬ್ಬೊಬ್ಬ ಮಂತ್ರಿಗಳು ಹೊಂದಿದ್ದಾರೆ ಅವುಗಳು ಸಾಯಿಲ್ ಕನ್‌ಸರ್‌ವೇಷನ್ ಲ್ಯಾಂಡ್ ರಿಫಾರ್‌ಮ್ಸ್, ಕನ್‌ಸಾಲಿಡೇಷನ್ ಆಫ್ ಹೊಲ್ಡಿಂಗ್ಸ್ ಹಾಗೂ ಹಾರ್ಟಿಕಲ್ಚರ್. ನನ್ನ ಆಸೆಯಾದರೂ ಕೂಡ ಈ ವ್ಯವಸಾಯ ಇಲಾಖೆಯ ಮಂತ್ರಿಗಳಿಗೆ ವ್ಯವಸಾಯಕ್ಕೆ ಸಂಬಂಧಪಟ್ಟಂಥಾ ಎಲ್ಲಾ ಇಲಾಖೆಗಳನ್ನೂ ಒಳಗೊಂಡಂಥಾ ಒಂದು ವ್ಯವಹಾರವನ್ನು ನೋಡಬೇಕಾಗಿತ್ತು ಎಂದು. ಸಾಯಿಲ್ ಕನ್‌ಸರ್‌ವೇಷನ್‌ಅನ್ನು ಒಬ್ಬ ಮಂತ್ರಿಗಳು ಲ್ಯಾಂಡ್ ರಿಫಾರಮ್ಸ್‌ಅನ್ನು ಇನ್ನೊಬ್ಬರು ಮಂತ್ರಿಗಳು ಕನ್‌ಸಾಲಿಡೇಷನ್ ಆಫ್ ಹೊಲ್ಡಿಂಗ್ಸ್‌ನ್ನು ಒಬ್ಬರು ಮಂತ್ರಿಗಳು ಹಾರ್ಟಿಕಲ್ಚರ್‌ನ್ನು ಒಬ್ಬರು ಮಂತ್ರಿಗಳು ನೋಡುತಿದ್ದಾರೆ. ಈ ವ್ಯವಸಾಯದ ಸಮಸ್ಯೆ ಏನಿದೆ, ವ್ಯವಸಾಯಗಾರನ ಸಮಸ್ಯೆ ಏನಿದೆ ಇದನ್ನು ಶೀಘ್ರವಾಗಿ ನೋಡತಕ್ಕ ಅವಕಾಶ ದೊರೆಯದೆ ಹೋಗಿದ್ದು ಈ ರೀತಿ ಆಗಿದೆಯೋ ಏನೋ ಎಂದು ನನಗನ್ನಿಸುತ್ತದೆ. ಬಹುಶ: ಯಾವ ರಾಜಕೀಯ ಪಕ್ಷವೇ ಆಗಲಿ ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ವ್ಯವಸಾಯಗಾರನ ಬಗ್ಗೆ ನಾವು ವಿಶೇಷವಾಗಿ ಮಾತನಾಡುತ್ತೇವೆ. ಅವನ ಪರಿಸ್ಥಿತಿ ಬಹಳ ಕೆಳಮಟ್ಟದಲ್ಲಿ ಇದೆ. ಅವನನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿಲ್ಲ. ಕಳೆದ ೩೦ ವರ್ಷಗಳಿಂದಲೂ ಅವನ ಬಗ್ಗೆ ಹೇಳುತ್ತಿದ್ದೇವೆ. ಆದರೆ ಅವನ ಸ್ಥಿತಿಯನ್ನು ನಿಜವಾಗಿಯೂ ನಾವು ಎಷ್ಟರಮಟ್ಟಿಗೆ ಉತ್ತಮಪಡಿಸಿದ್ದೇವೆ. ಎಂದರೆ, ನಿಜವಾಗಿಯೂ ನಾವು ಏನನ್ನೂ ಸಾಧನೆ ಮಾಡಿಲ್ಲವೆಂದು ನನಗೆ ಕಾಣಿಸುತ್ತದೆ. ಇವತ್ತು ವ್ಯವಸಾಯಗಾರನಲ್ಲಿರತಕ್ಕ ತೊಡಕು ಏನು ? First of all, he has to depend upon nature. ಇವತ್ತು ನಮ್ಮ ದೇಶದಲ್ಲಿ ವ್ಯವಸಾಯವಾಗತಕ್ಕ ಭೂಮಿ ಏನಿದೆ ಅದರಲ್ಲಿ ನೀರಾವರಿಯಾಗತಕ್ಕುದ್ದು ಶೇಕಡ ೨೦ಕ್ಕೂ ಮುಟ್ಟಿಲ್ಲ. ಶೇಕಡಾ ೮೦ರಷ್ಟು ಭೂಮಿಯಲ್ಲಿ ವ್ಯವಸಾಯ ಮಾಡತಕ್ಕ ಜನ ಇವತ್ತು ನೇಚರ್ ನೋಡುತ್ತಿದ್ದಾರೆ. He is depending upon Nature ಮಳೆ ಬಂದರೆ ಬೆಳೆ ಉಂಟು. ಇಲ್ಲದಿದ್ದರೆ ಇಲ್ಲ. ಒಂದೊಂದು ಬಾರಿ ಬಂಪರ್ ಕ್ರಾಪ್ ಬರುತ್ತದೆ, ಒಂದೊಂದು ಬಾರಿ ಆವರೇಜ್ ಕ್ರಾಪ್ ಬರುತ್ತದೆ, ಕೆಲವು ಬಾರಿ ಏನೂ ಬಾರದೇ ಹೋಗುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಏನು ಕ್ರಮವನ್ನು ಕೈಗೊಂಡಿದ್ದಾರೆ. ವಾಟರ್ ಫಾರ್ ಇರಿಗೇಷನ್ ಶೇಕಡ ೨೦ ಭಾಗವನ್ನು ಪೋಟೆನ್‌ಷಿಯಲ್‌ಗಾಗಿ ಕ್ರಿಯೇಟ್ ಮಾಡಿದ್ದಾರೆ. ಸಿಗುವ ಎಲ್ಲಾ ನೀರನ್ನು ಉಪಯೋಗಿಸಿಕೊಂಡು ಲಿಫ್ಟ್ ಇರಿಗೇಷನ್ನು ಹೆಚ್ಚು ಮಾಡಿ ಉಪಯೋಗಿಸಿದ ಪಕ್ಷದಲ್ಲಿ ಶೇಕಡ ೨೫–೩೦ ಭಾಗ ನೀರಾವರಿಯಾಗುತ್ತದೆಂದು ನನಗನ್ನಿಸುತ್ತದೆ. ಇವತ್ತು ಶೇಕಡಾ ೨೦ರಷ್ಟು ಕೂಡ ಭೂಮಿಗೆ ನೀರಾವರಿಯನ್ನು ಒದಗಿಸುವದಕ್ಕಾಗಿಲ್ಲ. ಆದ್ದರಿಂದ ಇವತ್ತು ಈ ವಿಷಯದ ಕಡೆಗೆ ಹೆಚ್ಚು ಕೆಲಸ ಮಾಡಬೇಕಾಗಿದೆ.

ಇನ್ನು ಸಾಲ ಕೊಡತಕ್ಕ ಬಗ್ಗೆ ಹೇಳಬೇಕಾಗಿದೆ. ಈ ಹಿಂದೆ ನಾನು ಸಹಕಾರ ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಹೇಳಿದ್ದೆ. ಇವತ್ತು ವ್ಯವಸಾಯಗಾರರಿಗೆ ಕೊಡತಕ್ಕ ಹಣ ವರ್ಷೇವರ್ಷೇ ಜಾಸ್ತಿಯಾಗುತ್ತಾ ಹೋಗಿಲ್ಲ. ಅದು ಕಡಿಮೆಯಾಗುತ್ತಾ ಹೋಗಿಲ್ಲ. ಅದು ಕಡಿಮೆಯಾಗುತ್ತಾ ಹೋಗುತ್ತಿದೆ ಎಂದು ಈ ಬಾಬ್ತು ೭೫ ಕೋಟಿ ರೂಪಾಯಿಯಿಂದ ೫೬ ಕೋಟಿ ರೂಪಾಯಿಗೆ ಇಳಿದಿದೆ. ಬಹುಶ: ಈ ವರ್ಷ ಇನ್ನೂ ಕಮ್ಮಿಯಾಗುವಂತೆ ಕಂಡುಬರುತ್ತಿದೆ. ಆದ್ದರಿಂದ ನಾನು ಹೇಳುವುದೇನೆಂದರೆ ಈ ಎಲ್ಲವನ್ನೂ ಒಬ್ಬರೇ ಮಂತ್ರಿಗಳು ಇಟ್ಟುಕೊಂಡು ವ್ಯವಹರಿಸಿದ ಪಕ್ಷದಲ್ಲಿ ವ್ಯವಸಾಯಗಾರರ ಸ್ಥಿತಿಯನ್ನು ಸರಿಪಡಿಸುವುದಕ್ಕೆ ಪ್ರಯತ್ನಪಡಬಹುದು. ಒಂದೊಂದು ಇಲಾಖೆಯನ್ನು ಒಬ್ಬೊಬ್ಬರು ನೋಡಿಕೊಳ್ಳುವುದರಿಂದ ಹೆಚ್ಚಿನ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಇವತ್ತು ನಮ್ಮ ದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ವ್ಯವಸಾಯಕ್ಕೆ ಹಣ ಮತ್ತು ರೈತರಿಗೆ ಸಾಲವನ್ನು ಒದಗಿಸಬೇಕಾಗಿದೆಯೋ ಅಷ್ಟು ಪ್ರಮಾಣದಲ್ಲಿ ಅವನಿಗೆ ಒದಗಿಸುತ್ತಿಲ್ಲ.

ಇನ್ನು ಸುಧಾರಿತ ಬೀಜಗಳ ಬಗ್ಗೆ ಕೆಲವು ಮಾತುಗಳನ್ನು ಆಡುತ್ತೇನೆ. ತಮ್ಮ ಇಲಾಖೆ ಮುಖ್ಯ ವಾಗಿ ಮಾಡಬೇಕಾದ ಕೆಲಸ. ವ್ಯವಸಾಯಗಾರರಿಗೆ ಉತ್ತಮವಾದ ಬೀಜಗಳನ್ನು ಒದಗಿಸುವುದು. ಈಗಾಗಲೇ ಕೆಲವು ಬೆಳೆಗಳಲ್ಲಿ ಹೈಬ್ರಿಡ್ ಬೀಜಗಳನ್ನು ತಯಾರಿಸಿದೀರಿ. ಕೆಲವು ರೀಸರ್ಚ್ ಮಾಡಿ ಉತ್ತಮ ತಳಿಯ ಬೆಳೆಗಳನ್ನು ಉತ್ಪಾದಿಸಿದ್ದೀರಿ. ಅವುಗಳ ಮಲ್ಟಿಪ್ಲಿಬಿ ಮಾಡುವುದರಲ್ಲಿ ತಾವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೀರಿ? ಒಂದು ವಿಚಾರ ಹೇಳುತಿದ್ದೇನೆ. ನಾನು ನಿಮ್ಮ ಇಲಾಖೆಯಲ್ಲಿರುವ ರಚನೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ಇಲಾಖೆಯ ರೂಪರೇಷೆ ನೋಡುವುದಾದರೆ ರಾಜ್ಯದ ಮಟ್ಟದಲ್ಲಿ ಇಬ್ಬರು ಡೈರೆಕ್ಟರ್ ಇದ್ದಾರೆ; ನಾಲ್ಕು ಜನ ಜಾಯಿಂಟ್ ಡೈರೆಕ್ಟರ್ ಇದ್ದಾರೆ, ಜಿಲ್ಲಾ ಮಟ್ಟದಲ್ಲಿ ಡೆಪ್ಯೂಟಿ ಡೈರೆಕ್ಟರ್ ಇದ್ದಾರೆ, ಅವರ ಕೈಕೆಳಗೆ ಅಸಿಸ್ಟೆಂಟ್ ಡೈರೆಕ್ಟರುಗಳಿದ್ದಾರೆ. ಆದರೆ ಗ್ರಾಮ ಮಟ್ಟದಲ್ಲಿ ಏನು ಮಾಡಿದ್ದೀರೆಂದರೆ ೧೦-೧೫ ಗ್ರಾಮಗಳಿಗೆ ಒಬ್ಬ ಗ್ರಾಮಸೇವಕನ್ನು ಮಾಡಿ ಅವನು ಬಿ.ಡಿ.ಓ. ಕೈಕೆಳಗೆ ಕೆಲಸ ಮಾಡಬೇಕಾಗುತ್ತದೆ. ಇಷ್ಟೊಂದು ಗ್ರಾಮಗಳ ಅಭಿವೃದ್ಧಿಯ ಕೆಲಸಗಳನ್ನೆಲ್ಲಾ ಈ ಒಬ್ಬ ಗ್ರಾಮಸೇವಕನು ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ಊಹಿಸಿದ್ದೀರಾ?

ಶ್ರೀ ಕೆ. ಎಚ್. ರಂಗನಾಥ್.—ಇನ್ನು ಮೇಲೆ ಹಾಗೆ ಆಗುವುದಿಲ್ಲ. ಇಲಾಖೆಯನ್ನು ರೀಆರ್ಗನೈಸ್ ಮಾಡುತ್ತಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ಅದೇನೋ ಸರಿ. ತಾವು ಇಲಾಖೆಯನ್ನು ರೀಆರ್ಗನೈಸ್ ಮಾಡುತ್ತಿದ್ದೀರಿ. ಬಹುಶಃ ಈ ರೀ ಆರ್ಗನೈಸೇಷನ್ ಪ್ರಕಾರ ಗ್ರಾಮಸೇವಕರು ಎ.ಇ.ಓ. ಕೈಕೆಳಗೆ ಬರುತ್ತಾರೆ. ಈ ರೀಆರ್ಗನೇಷನ್ ಪ್ರಕಾರ ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಬರುತ್ತಾರೆ. ನಾಲ್ಕು-ಐದು ತಾಲ್ಲೂಕಿಗೆ ಒಬ್ಬ ಡೆಪ್ಯೂಟಿ ಡೈರೆಕ್ಟರ್ ಬರುತ್ತಾರೆ. ತಾವು ಸ್ಟಾಫ್ ಸ್ಟ್ರೆಂತ್ ಜಾಸ್ತಿ ಮಾಡುತ್ತಿದ್ದೀರಿ. ಯಾವಾಗಲೂ ರೀಆರ್ಗನೈಸ್ ಮಾಡುವಾಗ ಒಬ್ಬ ಡೈರೆಕ್ಟರ್ ಇದ್ದರೆ ೪ ಜನರನ್ನು ಮಾಡುತ್ತಾರೆ. ಇಬ್ಬರು ಜಾಯಿಂಟ್ ಡೈರೆಕ್ಟರ್ ಇದ್ದರೆ ೧೦ ಜನಕ್ಕೆ ವಿಸ್ತರಿಸುತ್ತಾರೆ. ಡೆಪ್ಯೂಟಿ ಡೈರೆಕ್ಟರ್ಸ್ ೧೦ ಜನ ಇದ್ದರೆ ಅವರನ್ನು ೪೦ ಜನ ಮಾಡುತ್ತಾರೆ. The army of officers are increa-ed but what is the work you are going to assign to those officers? That is more important. ಈ ವಿಚಾರದಲ್ಲಿ ನಾನು ಹೇಳುತ್ತೇನೆ. ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಮಾಡ ಬೇಕೆಂದು ತಾವು ಹಿಂದಿನಿಂದ ಯೋಚನೆ ಮಾಡುತ್ತಿದ್ದೀರಿ. I want to know how for the Department is able to get these register d seed growers and to produce good quality seed for the needs of the ryots. ಇವತ್ತಿನ ದಿವಸ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ವರಲಕ್ಷ್ಮಿ ಸೀಡ್ಸ್ ಎಂದು ಏನು ಮಾಡಿದಿರಿ. ಇದನ್ನು ಬೆಳೆಯಲು ಕೆಲವು ೫-೬ ಜನ ರೈತರನ್ನು ಸೆಲೆಕ್ಟ್ ಮಾಡಿದಿರಿ. ಕೆಲವು ವರ್ಷಗಳಲ್ಲಿ ಇದಕ್ಕೆ ಬಹಳ ಡಿಮ್ಯಾಂಡ್ ಬಂತು. ಇದರಲ್ಲಿ ಸರ್ಕಾರದವರು ಕೆಲವು ಶಿಫಾರಸ್ಸುಗಳಿಗೆ ಒಳಗಾಗಿ ಕೋಟ್ಯಾಂತರ ರೂಪಾಯಿ ನಷ್ಟ ವಾಯಿತು. ಇದನ್ನು ಕೆಲವೇ ಸ್ಥಳಗಳಲ್ಲಿ ಕೆಲವೇ ಫ್ಯಾಮಿಲಿಗಳವರು ಬೆಳೆಯುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಇವರು ೧೭೫ ಏಕರೆಗಳಲ್ಲಿ ಎಷ್ಟು ಸೀಡ್ಸ್ ಉತ್ಪಾದನೆ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ವರಲಕ್ಷ್ಮಿ ಸೀಡ್ ಉತ್ಪಾದನೆಯನ್ನು ನಮ್ಮ ರಾಜ್ಯಕ್ಕೆ ಎಷ್ಟು ಬೇಕೋ ಅಷ್ಟು ಮಾಡಿಲ್ಲ. ಹೊರ ರಾಜ್ಯಗಳಿಂದ, ತಮಿಳುನಾಡಿನಿಂದ ಕೊಳ್ಳುತ್ತಿದ್ದಾರೆಂದು ನಾನು ಕೇಳಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರ ಕೊಡಬೇಕು. ಅದಕ್ಕೆ ಯಾರು ಸರ್ಟಿಫೈ ಮಾಡುತ್ತಾರೆ ಯಾವ ರೀತಿ ಅದನ್ನು ಕೊಳ್ಳುತ್ತಾರೋ, ಯಾವ ರೀತಿ ಮಾರಾಟ ಮಾಡುತ್ತಾರೋ ಎಂಬುದು ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ಇದರ ಬಗ್ಗೆ ಹೆಚ್ಚಿನ ವಿವರಗಳನ್ನು ಹೇಳಿದರೆ ಒಳ್ಳೆಯದು. ಸೀಡ್ ಪ್ರೊಡಕ್ಷನ್‌ನಲ್ಲಿ ನಾವು ಸಂಪೂರ್ಣವಾದ ಯಶಸ್ಸನು ಪಡೆದಿಲ್ಲ. ಬಿತ್ತನೇ ಬೀಜ ರೈತನಿಗೆ ಸಕಾಲದಲ್ಲಿ ಬೇಕಾಗುತ್ತದೆ. ಅಗ್ರಿಕಲ್ಚರ್ ಸೀಸನ್‌ನಲ್ಲಿ ಯಾವತ್ತೋ ಒಂದು ದಿವಸ ಅವನು ಬಿತ್ತನೆ ಮಾಡಬೇಕಾಗು ತ್ತದೆ. ಆ ದಿವಸ ಅವನು ಬಿತ್ತನೆ ಮಾಡದೇ ಹೋದರೆ ಅವನಿಗೆ ನಷ್ಟವಾಗುತ್ತದೆ. He is not going to miss one day, one week or one month, but he is going or miss one year ಅವನು ಸರಿಯಾದ ಹದ ನೋಡಿ ಬಿತ್ತನೆ ಮಾಡುತ್ತಾನೆ. ಸರಿಯಾದ ಹದವನ್ನು ನೋಡಿ ಬಿತ್ತನೆ ಮಾಡಿದರೆ ಅವನಿಗೆ ಬಂಪರ್ ಕ್ರಾಪ್ ಬರುತ್ತದೆ. ಅವನಿಗೆ ಹದ ಸಿಕ್ಕಿದ ಸಮಯದಲ್ಲಿ ಬಿತ್ತನೆ ಮಾಡದೇ ಹೋದರೆ ಅವನಿಗೆ ಅದರಿಂದ ಪ್ರತಿಫಲ ಸಿಕ್ಕುವುದಿಲ್ಲ. ಅದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಅದನ್ನು ಸ್ವಲ್ಪ ಯೋಚನೆ ಮಾಡತಕ್ಕದು ಮುಖ್ಯ.

ಇನ್ನು ಫರ್ಟಿಲೈಸರ್ಸ್‌ನ್ನು ರೈತರಿಗೆ ಒದಗಿಸುವ ಬಗ್ಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಪ್ರತಿ ವರ್ಷವೂ ಇವುಗಳ ಬೆಲೆ ಜಾಸ್ತಿಯಾಗುತ್ತಾ ಹೋಗುತ್ತಿದೆ. ಬೆಲೆ ಈ ರೀತಿ ಏರುತ್ತಾ ಹೋದರೆ ರೈತನ ಗತಿ ಏನು? ಕೇಂದ್ರ ಸರ್ಕಾರದವರು ಒಂದು ಟನ್ನಿಗೆ ೫ ರೂಪಾಯಿ ೧೦ ರೂಪಾಯಿ ಕಡಿದು ಮಾಡಿರಬಹುದು. ಈ ರೀತಿ ಬೆಲೆ ಜಾಸ್ತಿಯಾದರೆ ನಮ್ಮ ರೈತರು ಎಷ್ಟು ಜನ ಈ ಫರ್ಟಿಲೈಸರ್ಸ್‌ಗಳನ್ನು ಉಪಯೋಗಿಸುತ್ತಾರೆ? ಇದು ರೈತನಿಗೆ ಮುಟ್ಟಬೇಕಾದರೆ ಯಾವ ರೀತಿ ನೀವು ಇದನ್ನು ಸರಿಪಡಿಸುತ್ತೀರಾ? ಸಬ್ಸಿಡೈಸ್ಡ್ ರೇಟಿನಲ್ಲಾದರೂ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಈಗ ರೈತರಲ್ಲಿ ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಹಾಗೂ ಬಿಗ್ ಫಾರ್ಮರ್ಸ್ ಎಂದು ಮೂರು ವಿಧಗಳಿವೆ. ಈಗ ಇದರಿಂದ ಸ್ಮಾಲ್ ಫಾರ್ಮರ್‌ಗೂ ಮಾರ್ಜಿನಲ್ ಫಾರ್ಮರ್‌ಗೂ ಬಹಳ ತೊಂದರೆಯಾಗುತ್ತದೆ. ಏಕೆಂದರೆ ಅವರು ಒಂದೋ ಎರಡೋ ಅಥವಾ ಮೂರೋ ಎಕರೆಯಲ್ಲಿ ಬೆಳೆ ತೆಗೆಯುತ್ತಾರೆ. ಅವರಿಗೆ ಈ ಫರ್ಟಿಲೈಸರ್ಸ್‌ಗಳನ್ನು ಪಡೆದುಕೊಳ್ಳುವುದಕ್ಕೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ಸ್ವಲ್ಪ ಕಡಿಮೆ ದರದಲ್ಲಿ ಮಾರ್ಜಿನಲ್ ಫಾರ್ಮರ್ಸ್ ಹಾಗೂ ಸ್ಮಾಲ್ ಫಾರ್ಮರ್ಸ್ ಫರ್ಟಿಲೈಸರ್ಸ್‌ಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡುವುದು ಬಹಳ ಮುಖ್ಯವಾದುದು. ಇದೆಲ್ಲಾ ಆದಮೇಲೆ ಒಂದು ಮುಖ್ಯವಾದ ಅಂಶದ ಬಗ್ಗೆ ಸರ್ಕಾರ ಜವಾಬ್ದಾರಿ ತೆಗೆದುಕೊಳ್ಳದೇ ಇರುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ವ್ಯವಸಾಯ ಇಲಾಖೆಯವರಿಗೆ ಸಪೋರ್ಟ್ ಪ್ರೈಸ್ ಎಂದರೆ ಏನು ಎಂಬುದೇ ಗೊತ್ತಿಲ್ಲ ಎಂದು ಕಾಣುತ್ತದೆ.

ಏಕೆ ಈ ಪ್ರಶ್ನೆ ಕೇಳುತ್ತಿದ್ದೇನೆ ಎಂದು ತಾವು ತಿಳಿದುಕೊಳ್ಳಬಹುದು. ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ನಾನು ಪ್ರಶ್ನೆಯನ್ನು ಬಹಳ ಸ್ಪಷ್ಟವಾಗಿ ಕಳುಹಿಸಿದ್ದೇನೆ. "Whether the prices of agricultural commodities such as Ragi and Jowar have gone down to an uneconomical level? If so whether Government have given supporting price" ಇದನ್ನು Ministry of Agricultural and Parliamentary Affairs ಎಂದು ಬರೆದು ಕಳುಹಿಸಿದರೆ ನಿಮ್ಮ ಇಲಾಖೆಯಿಂದ, 'ನಾವಲ್ಲ ಉತ್ತರ ಕೊಡುವುದು ಫುಡ್ ಮಿನಿಸ್ಟ್ರಿ' ಎಂದು ಉತ್ತರ ಬಂದಿದೆ. ನಿಮ್ಮ ಇಲಾಖೆ ಅಧಿಕಾರಿಗಳಿಗೆ, ರಾಗಿಯಾಗಲೀ ಭತ್ತವಾಗಲೀ, ಹತ್ತಿ, ಷುಗರ್‌ಕೇನ್, ಆಗಲೀ ಇದಕ್ಕೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ ಎಂದು ಗೊತ್ತಿಲ್ಲವೆ?.

ಶ್ರೀ ಕೆ. ಎಚ್. ರಂಗನಾಥ್.—ಕೊಳ್ಳತಕ್ಕ ಹೊಣೆ ಫುಡ್ ಇಲಾಖೆ ಮಾಡುತ್ತಾ ಇರುವುದರಿಂದ ಬಹಳಮಟ್ಟಿಗೆ ಆ ಉತ್ತರವನ್ನು ಅಲ್ಲಿಗೆ ಕಳುಹಿಸಿರಬಹುದು.

SRI M. C. BASAPPA. - They did not know what is price conception ನಿಮ್ಮ ಇಲಾಖೆಯವರು ಏನು ತಿಳಿದುಕೊಂಡಿದ್ದಾರೆಂದರೆ ಏನೋ...

SRI K. H. RANGANATH.—That inference may not be correct. Your question might not have been under stood by the Department. ಪ್ರೊಕ್ಯೂರ್ ಮಾಡುವುದರಿಂದ ಅವರೆ ಅದಕ್ಕೆ ಹೆಚ್ಚು ಸಂಬಂಧಪಟ್ಟವರು ಎಂದು ಹೇಳಿದ್ದಾರೆ.

SRI M. C. BASAPPA.—I thank you very much for having clarified the point. But your Department people have not understood the price policy and cost of cultivation. That is what I meant. Your Department people have not understood that point. I was trying to draw your attention about the cost of production and the rate the farmer gets. According to the figures......

ಶ್ರೀ ಕೆ. ಎಚ್. ರಂಗನಾಥ್ —ಕೇಂದ್ರ ಸರ್ಕಾರದಲ್ಲಿ ಇನತ್ತಿನ ದಿವಸ ಕಾಸ್ಟ್ ಆಫ್ ಪ್ರೊಡಕ್ಷನ್ ಏನು ಎನ್ನುವುದನ್ನು ಶಾಸ್ತ್ರೀಯವಾಗಿ ಗೊತ್ತುಮಾಡತಕ್ಕ ರೀತಿಯಲ್ಲಿ ಅವರೂ ಇಲ್ಲ. ತಮಗೆ ಗೊತ್ತಿದೆ, ಇವತ್ತು ನಾವು ಈ ಅಸೆಂಬ್ಲಿಯಲ್ಲಿದ್ದೇವೆ. ೧೯೬೨-೬೩ರಲ್ಲಿ ಮೊದಲಬಾರಿ ಬಂದಾಗ ಸೆಲ್ಲಿಂಗ್ ಪ್ರೈಸ್‌ನ್ನೂ ಲೆವಿ ಪ್ರೈಸನ್ನೂ ಲೆಕ್ಕ ಹಾಕುವಂಥ ಒಂದು ಕಾಲದೊಳಗೆ ೨೦-೨೫ ರೂಪಾಯಿ ಜಾಸ್ತಿ ಹ್ಯಾಂಡ್ಲಿಂಗ್

ಚಾರ್ಜಸ್ ಲೆಕ್ಕಹಾಕಿ ಮಾರಾಟ ಮಾಡಿದ್ದುಂಟು. ಅದರ ಬಗ್ಗೆ ವಾದವಿವಾದ ಮಾಡುವುದಕ್ಕೆ ನಾನು ತಯಾರಿಲ್ಲ. ಆದರೆ ಇನ್ನೂ ಕೂಡ ವ್ಯವಸ್ಥಿತವಾಗಿ ಶಾಸ್ತ್ರೀಯವಾದ ರೀತಿಯಲ್ಲಿ ಲೆಕ್ಕ ಹಾಕತಕ್ಕಂಥ ಕ್ರಮ ಅಲ್ಲೂ ಪ್ರಾರಂಭವಾಗಿಲ್ಲ. ಅದು ಆಗದೇ ಇದ್ದುದರಿಂದ......

ಶ್ರೀ ಎಚ್. ಡಿ. ಚೌಡಯ್ಯ.—ಪ್ರಾರಂಭವಾಗುವುದು ಇಲ್ಲಿಂದ, ಅಲ್ಲಿಂದ ಅಲ್ಲ.

ಶ್ರೀ ಕೆ. ಎಚ್. ರಂಗನಾಥ್. ಇಲ್ಲಿಂದ ಅಂದರೆ ಅದು ಬೇರೆ ಮಾತು. ಅದೂ ಒಂದು ಅಭಿಪ್ರಾಯ ಬಂದಿದೆ, ಮಾನ್ಯ ರಾಜೂಗೌಡರು ಆದರ ಬಗ್ಗೆ ಹೇಳಿದ್ದಾರೆ. ಈಗ ೮೫ ರೂಪಾಯಿ ಮಾಡಿದ್ದೇವೆ. ನಾವೂ ನೀವೂ ಹೇಳುತ್ತಾ ಇದ್ದೇವೆ. ಈಗ ಎಲ್ಲದರ ಮೇಲೂ ಲೆಕ್ಕ ಹಾಕುತ್ತಾ ಹೋದರೆ ಅವನು ಕೆಲಸ ಮಾಡಿರುವುದನ್ನೂ ಲೆಕ್ಕಹಾಕಿ ತೆಗೆದುಕೊಳ್ಳುವುದಾದರೆ ಎಲ್ಲಿ ಬರುತ್ತದೆ.

ಶ್ರೀ ಎಂ. ಸಿ. ಬಸಪ್ಪ.—ತಮ್ಮ ಕಷ್ಟ ನನಗ ಅರ್ಥವಾಯಿತು.

ಶ್ರೀ ಕೆ. ಎಚ್. ರಂಗನಾಥ್,—ಈಗ ೮೫-೯೫ ರೂಪಾಯಿ ಮಾಡಿದ್ದೇವೆ.

ಶ್ರೀ ಎಂ. ಸಿ. ಬಸಪ್ಪ.—ತಾವು ಕೇಂದ್ರ ಸರ್ಕಾರ ನೋಡೋಣ ಎಂದು ಹೇಳುತ್ತೀರಿ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರವನ್ನು ನೋಡಲಿ. ಸೈಂಟಿಫಿಕ್ ಅಸೆಸ್‌ಮೆಂಟ್ ಬೇಡ ಹೇಗೋ ನಡೆದು ಕೊಂಡು ಹೋಗುತ್ತಿದೆ, ರೈತ ಇಷ್ಟು ದಿವಸ ಬದುಕಿರಲಿಲ್ಲವೇ...

SRI K. H. RANGANATH.—I never meant like that I am sorry...

SRI M. C. BASAPPA.—Is it not the responsibility of the State Government work of the figures.

SRI K H. RANGANATH.—Madam Speaker, I am not disagreeing with the hon. member. ಇದು ಹೇಗೆ ಆಗಿದೆಯೆಂದರೆ, ಕುರುಡ ಇಟ್ಟ, ಮೂಗ ಉಂಡ, ಆ ಪರಿಸ್ಥಿತಿಗೆ ಬಂದಿದೆ.

SRI M. C. BASAPPA.—Hon Minister for Agriculture has understood the problem correctly.

ಶ್ರೀ ಕೆ. ಎಚ್. ರಂಗನಾಥ್.—ಈಗ ಆ ವಿಚಾರಕ್ಕೆ ಬಂದಿದ್ದಾರೆ. ಇದು ಏಕೆ ಆಗಬೇಕು ಎಂದರೆ ೧೯೫೬ ೫೭ರಲ್ಲಿ ೩೩ ಲಕ್ಷ ಟನ್ನು ಪ್ರೊಡಕ್ಷನ್ ಇದ್ದದ್ದು ಇವತ್ತು ಈ ಒಂದು ಮಟ್ಟದಲ್ಲಿ ಬಂದಾಗ, ರಾಷ್ಟ್ರೀಯ ಮಟ್ಟದಲ್ಲಿ ಜಾಸ್ತಿ ಬಂದಾಗ. ಇವತ್ತು ಆ ಪ್ರಮಾಣದಲ್ಲಿ ಉಳಿತ ಯ ಬಂದರೆ ಎಕಾನಮಿ ಕೊಲ್ಯಾಪ್ಸ್ ಆಗುತ್ತದೆ ಎಂದು ೮೫-೮೬ ರೂಪಾಯಿ ಕೊಡೋಣ ಎಂದು ಬಂದಿದ್ದಾರೆಯೇ ವಿನಹ ಶಾಸ್ತ್ರೀಯವಾಗಿ ನಿರ್ಧಾರ ಮಾಡತಕ್ಕ ರೀತಿಯಲ್ಲಿ ಅಲ್ಲೂ ಇಲ್ಲ ಅದು ಇಲ್ಲದೇ ಇರುವುದರಿಂದ ನಮಗೆ ತೊಂದರೆ ಬಂದಿರುವುದು. ಇವತ್ತಿನ ದಿವಸ ಸಬ್ಸಿಡಿ ಕೊಡುವುದಾದರೆ, is the State Government in a position to meet the subsidy charges 100%? At the same time the Central G vernment should also come to out help to some extent. I would personally feel that the Central Government should also come to our help to a maximum extent possible. Then only we will be in a position to help the poor farmers. ಇಲ್ಲದೇ ಹೋದರೆ ಏನೂ ಮಾಡುವುದಕ್ಕಾಗುವುದಿಲ್ಲ. ಒಂದು ಕಾಲದಲ್ಲಿ ಬರೀ ಆಹಾರಧಾನ ಗಳನ್ನು ಬೆಳೆಯಿರಿ ಎಂದು ನಾವು ಬೆಳೆಯುತ್ತಾ ಹೋದೆವು. ೧೯೫೭ರಲ್ಲಿ ಅಶೋಕಮೆಹ್ತಾ ಕಮಿಟಿಯಾಗಿತ್ತು, ಅವರು ರಿಪೋರ್ಟ್ ಕೊಟ್ಟರು ಪಿ. ಎಲ್. ೪೮೦ ಎಕ್ಸ್‌ಪ್ಲೋಟ್ ಮಾಡುತ್ತಾ ಬಂದೆವು. ಆಗಿನಿಂದ ಬೆಳೆಯುವುದಕ್ಕೆ ಶುರು ಮಾಡಿ ಇವತ್ತು ಜಾಸ್ತಿ ಬೆಳೆಯುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆದರೂ ಕೂಡ ಆಹಾರಧಾನ್ಯ ಹೆಚ್ಚುವರಿಯಾಗಿದೆ. ಇನ್ನೂ ಮಾಡತಕ್ಕಂಥಾದ್ದು ಕೂಡಇದೆ. ಆಹಾರಧಾನ್ಯಗಳು ಜಾಸ್ತಿಯಾಗಿರುವಾಗ ಏನು ಮಾಡಬೇಕು, ತೊಂದರೆ ಬಂದಿತು ಎಂದು ಎಲ್ಲರೂ ವಿಚಾರ ಮಾಡತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಒಂದು ಬೆಲೆ ಕೊಡುವುದಕ್ಕೆ ಬಂದಿದೆ.

ಶ್ರೀ ಎಂ. ಸಿ. ಬಸಪ್ಪ.—ಇಷ್ಟು ದಿವಸ ರೈತ ಕಿವುಡ, ಮೂಗ ಅಷ್ಟೇ ಅಲ್ಲ, ಕುರುಡನೂ ಆಗಿದ್ದ. ಈ ಮೂರು ಆಗಿರುವುದರಿಂದ ನಿಮ್ಮ ಸರ್ಕಾರ ನಡೆದುಕೊಂಡು ಹೋಗುತ್ತಿದೆ. ಒಂದು ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ ಮದ್ರಾಸಿನಲ್ಲಿ ಎಚ್ಚೆತ್ತುಕೊಂಡ ಹಾಗೆ ರೈತ ಎಚ್ಚೆತ್ತರೆ ಬಹುಶಃ ನಿಮ್ಮ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ, ಯಾವುದೂ ಅವರ ಎದುರು ನಿಂತುಕೊಳ್ಳುವುದು ಕಷ್ಟ. ಅದರ ರುಚಿಯನ್ನು ಮದ್ರಾಸ್ ಸರ್ಕಾರದವರು ಅನುಭವಿಸಿದ್ದಾರೆ.

SRI K. H. RANGANATH.—I think the hon. Member would be fair to the State Government. Because even though the Central Government did not announce this supporting price, we took a decision in this behalf. We have done it.

SRI M. C. BASAPPA.—I am coming to the problem. This is why I am telling. ರೈತ ಕಿವುಡ, ಮೂಗ, ಕುರುಡನಾದ್ದರಿಂದ ತಾವು ನಡೆಸಿಕೊಂಡು ಬರುತ್ತಿದ್ದೀರಿ. ಇವತ್ತು ಧಾರಣೆಗಳನ್ನು ನಾನು ಕ್ವೋಟ್ ಮಾಡುತ್ತೇನೆ. ನನಗೆ ಸಿಕ್ಕಿರತಕ್ಕ ಅಂಕಿ ಅಂಶಗಳ ಪ್ರಕಾರ per quintal paddy Rs. 91/- cultivation expenses ಬರುತ್ತದೆ. I cannot say this is a scientific figure. But it has been worked out by the people who are in the field.

Jowar	...	Rs. 140/-	per Quintal.
Ragi	...	Rs. 90/-	,,
Cotton	...	Rs. 314/-	,,
Sugarcane	...	Rs. 159/-	,,

SRI K.H. RANGANATH.—It is for Varalaxmi or some other type of Cotton?

SRI M. C. BASAPPA.—They say it is cotton. According to my information Sugarcane comes to Rs. 159/- Some of the farmers are selling Sugarcane to the Co-operative Sugar Factories at Rs. 115/- and 135/- respectively. It includes transport cost. If the cost of cultivation is Rs. 159/- and if they were to sell it at Rs. 135/- you can imagine the fate of these farmers.

SRI K. H. RANGANATH.—What is the yeild per hectare in that area?

SRI M. C. BASAPPA—It will not be more than 50 tonnes. So, I would like to ask the Hon. Minister for Agriculture as to how these farmers could depend on this occupation? ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಏನೆಂದರೆ ಡಿಪೋಗಳನ್ನು ಓಪನ್ ಮಾಡಿದಿರಿ, ರಾಗಿ ತೆಗೆದುಕೊಂಡು ಮೂರು ತಿಂಗಳಾದರೂ ಇನ್ನೂ ನಮಗೆ ಹಣ ಪಾವತಿಯಾಗಿಲ್ಲ ಎನ್ನತಕ್ಕ ಕಂಪ್ಲೈಂಟ್ಸ್ ಧಾರವಾಡ ಮುಂತಾದ ಕಡೆಯಿಂದ ನಮಗೆ ಬಂದಿದೆ.

ಶ್ರೀ ಜಿ. ರಾಮೇಗೌಡ.—ಎಲ್ಲೆಲ್ಲಿ ದವಸ ತೆಗೆದುಕೊಂಡು ಹಣ ಕೊಟ್ಟಿಲ್ಲವೆಂದು ತಿಳಿಸಿದರೆ, ಆ ಊರಿನೊಳಗೆ ತಕ್ಷಣವೇ ವ್ಯವಸ್ಥೆ ಮಾಡಿಸಿಕೊಡುತ್ತೇನೆ.

೪–೩೦ ಪಿ. ಎಂ.

ಶ್ರೀ ಎಂ. ಸಿ. ಬಸಪ್ಪ. — ನಮ್ಮ ಕಡೆಗೆ ನೀವು ಡಿಪೋಗಳನ್ನೇ ಓಪನ್ ಮಾಡಿಲ್ಲ. ನಾವು ಬೆಂಗಳೂರಿಗೆ ಹೊತ್ತುಕೊಂಡು ಬಂದು ಕೊಟ್ಟು ಹೋಗುವುದಕ್ಕೆ ಆಗುತ್ತದಯೇ ಆದರೆ ಒಂದು

ರೇಟನ್ನು ಫಿಕ್ಸ್ ಮಾಡಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದೀರಿ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಮ್ಮಲ್ಲಿ ಯಾರೂ ಕೊಂಡುಕೊಳ್ಳಲಿಲ್ಲ.

ಶ್ರೀ ಜಿ. ರಾಮೇಗೌಡ —ಚಾಮರಾಜನಗರದಲ್ಲಿ ರಾಗಿ ತಿಂದು ಮಿಕ್ಕುವಷ್ಟು ಆಗಿದೆಂದು ಗೊತ್ತಾಗಿದ್ದರೆ ಖಂಡಿತವಾಗಿಯೂ ಪ್ರಯತ್ನ ಮಾಡುತ್ತಿದ್ದೆ. ಆದರೆ ಗೊತ್ತಾಗಲಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಅಲ್ಲಿ ಎರಡು ಸ್ಯಾಂಡೀಸ್ ಇದೆ, ಒಂದು ತೆರಕಣಾಂಬಿ, ಇನ್ನೊಂದು ಸಂತೆ ಮಾರನಹಳ್ಳಿ. ಅಲ್ಲಿ ಹೈಬ್ರಿಡ್ಜ್ ಜೋಳವನ್ನು ಸಂತೆಗಳಲ್ಲಿ ಎಷ್ಟು ಅಂದರೆ ಅಷ್ಟಕ್ಕೆ ಮಾರುತ್ತಿದ್ದಾರೆ. ಅದನ್ನು ರೆಗ್ಯುಲೇಟ್ ಮಾರ್ಕೆಟ್‌ನವರೂ ಕೊಂಡುಕೊಳ್ಳುತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್. — ಹೈಬ್ರಿಡ್ ಜೋಳಕ್ಕೆ ನಮ್ಮ ಹತ್ತಿರ ಬೆಲೆ ಇಲ್ಲ. ಯಾವುದೇ ಸಪೋರ್ಟ್ ಪ್ರೈಜ್ ಫಿಕ್ಸ್ ಮಾಡಿಲ್ಲ. ನಮ್ಮಲ್ಲಿ ಹೈಬ್ರಿಡ್ಜ್ ಜೋಳವನ್ನು ಯಾರೂ ಕೊಂಡುಕೊಳ್ಳುವವರೇ ಇಲ್ಲದೇ ಇರುವುದರಿಂದ ಅದು ಹಾಗೆಯೇ ಉಳಿದುಕೊಂಡಿದೆ, ಆದುದರಿಂದ ತಾವು ದಯಮಾಡಿ ಕೇಂದ್ರ ಸರ್ಕಾರದವರ ಮೇಲೆ ಒತ್ತಾಯ ತಂದು ಮಾಡಿಸಿ.

ಶ್ರೀ ವೈ. ರಾಮಕೃಷ್ಣ—ಫೆಬ್ರುವರಿ ೪ನೇ ತಾರೀಖಿನ ಲೆಟರ್‌ನಲ್ಲಿ ಬರೆದಿದ್ದಾರೆ, ಹೈಬ್ರಿಡ್ಜ್ ಜೋಳವನ್ನು ತೆಗೆದುಕೊಂಡು "ವರ್ಕ್ ಫಾರ್ ಫುಡ್" ಯೋಜನೆಯ ಮೂಲಕ ಹಂಚಿ ಅಂತ ಬರೆದಿದ್ದಾರೆ, ಅದನ್ನು ತಾವು ಓದಿ ನೋಡಿ ಗೊತ್ತಾಗುತ್ತದೆ.

ಶ್ರೀ ಜಿ. ರಾಮೇಗೌಡ—ಅದರ ಹಿನ್ನೆಲೆ ಹೇಳುತ್ತೇನೆ ಕೇಳಿ ಸ್ವಾಮಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ ತಿಳಿದುಕೊಳ್ಳಿ. ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಕೆಲವು ಏಜೆಂಟ್ಸ್‌ನ್ನು ಕಳುಹಿಸಿ ಟ್ರೈನಿಂಗ್ ಕೊಟ್ಟಿದ್ದಾರೆ. ಅವರು ಕೆಲವು ಸ್ಯಾಂಪಲ್ ತೆಗೆದುಕೊಂಡಿದ್ದಾರೆ. ಅದರಲ್ಲಿ ಹೈಬ್ರಿಡ್ ಜೋಳ ಇಲ್ಲವೇ ಇಲ್ಲ. ನಮ್ಮ ಕಡೆಗೆ ರಾಗಿ ಇರುವಾಗ ಹೈಬ್ರಿಡ್ ಜೋಳವನ್ನೇ ತಿನ್ನುವುದಿಲ್ಲ ಅದನ್ನು ನಾನು ಹಲವಾರು ಜನರಿಂದ ತಿಳಿದುಕೊಂಡಿದ್ದೇನೆ. ಎಲ್ಲೋ ದಾವಣಗೆರೆ ಆ ಕಡೆಯಿರುವವರು ಮಾತ್ರ ತಿನ್ನುವುದರಿಂದ ಅದು ನಮ್ಮ ಕಲೆಕ್ಷನಲ್ಲೂ ಸಹ ಬರುವುದಿಲ್ಲ. ಈಗ ಹೈಬ್ರಿಡ್ ಜೋಳ ಏನಾಗಿದೆ ಎಂದರೆ ಎರಡು ದಿವಸ ಮಳೆ ಬಿದ್ದಿದ್ದುದರಿಂದ ತೆನೆಯೆಲ್ಲಾ ಸ್ವಲ್ಪ ಕಪ್ಪು ಬಂದಿದೆ, ಬಣ್ಣ ಬದಲಾವಣೆಯಾಗಿದೆಯೇ ಹೊರತು ಅದರ ಗುಣದಲ್ಲಿ, ಕ್ವಾಲಿಟಿಯಲ್ಲಿ ಆಗಲೀ ಯಾವುದೇ ಬದಲಾವಣೆಯಾಗಿಲ್ಲ. ಇದರ ಬಗ್ಗೆ ನಮ್ಮ ಮ್ಯಾನೇಜಿಂಗ್ ಡೈರೆಕ್ಟರ್ ಚಮನ್ನಲಾಲ್‌ರವರನ್ನು ಕರೆದು ಕೇಳಿದಾಗ ಅವರು ಪ್ರಾಕ್ಟಿಕಲ್ ಆಗಿ ಈ ತರಹ ಕಷ್ಟವಿದೆಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ಕ್ವಾಲಿಟಿಯಲ್ಲಿ ಏನೂ ಬದಲಾವಣೆಯಾಗಿಲ್ಲ ಬಣ್ಣ ಮಾತ್ರ ಬದಲಾವಣೆಯಾಗಿದೆ ಅಷ್ಟೇ.

ಶ್ರೀ ಭೀಮಣ್ಣ ಖಂಡ್ರೆ—ಲೆಟರ್ ಡೇಟೆಡ್ ೪ನೇ ಏಪ್ರಿಲ್ ೧೯೭೯ರಲ್ಲಿ ತಮಗೊಂದು ಪತ್ರ ಬಂದಿದೆ ಅದರಲ್ಲಿ ಎಷ್ಟೇ ರೊಕ್ಕ ಆಗಲಿ ಕೊಟ್ಟು ಕೊಂಡು ಖರೀದಿ ಮಾಡಿರಿ ಅಂತ ತಮಗೂ ತಿಳಿಸಿದ್ದಾರೆ. ತಾವು ಆ ಪತ್ರವನ್ನು ಎಫ್.ಸಿ.ಐ.ನಿಂದ ಏನು ಬಂದಿದೆ ಅದನ್ನು ಓದಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್—ಫೇರ್ ಪ್ರೈಜ್ ಕಂಡುಹಿಡಿಯುವುದಕ್ಕೆ ಏಜೆಂಟ್ಸ್‌ಗಳನ್ನು ಕಳುಹಿಸಿದ್ದಾರೆ, ಟ್ರೈನಿಂಗ್ ಮಾಡಿಕೊಂಡು ಬಂದ ಮೇಲೆ ಅವರು ಫಿಕ್ಸ್ ಮಾಡಿದ ರೇಟಿನಲ್ಲಿ ಕೊಂಡುಕೊಳ್ಳಬೇಕು ಈಗಲ್ಲ.

ಶ್ರೀ ಭೀಮಣ್ಣ ಖಂಡ್ರೆ—ಇಲ್ಲ ಸ್ವಾಮಿ ಅವರು ಈ ಪತ್ರದಲ್ಲಿ ತಮಗೆ ಸರಿಯಾಗಿ ಬರೆದು ತಿಳಿಸಿದ್ದಾರೆ ಅದನ್ನು ತಾವು ಓದಬೇಕು.

ಶ್ರೀ ಕೆ.ಎಚ್. ರಂಗನಾಥ್—ಕರ್ನಾಟಕದಲ್ಲಿ ಅಷ್ಟು ಹೆಚ್ಚಾಗಿ ಯಾರೂ ಹೈಬ್ರಿಡ್ ಜೋಳವನ್ನು ಉಪಯೋಗ ಮಾಡುತ್ತಿಲ್ಲ, ಅಷ್ಟು ಕೊಂಡುಕೊಂಡು ಏನು ಮಾಡುವುದು? ಆಮೇಲೆ ನೇಣು ಹಾಕಿಕೊಳ್ಳುವುದೇ?

ಶ್ರೀ ಎಸ್.ಆರ್. ಬೊಮ್ಮಾಯಿ—ಇಬ್ಬರು ಮಂತ್ರಿಗಳವರು ತಮ್ಮ ತಮ್ಮ ಕಷ್ಟವನ್ನು ಹೇಳಿಕೊಂಡಿದ್ದಾರೆ. ಇದು ಕೇಂದ್ರ ಸರ್ಕಾರದವರ ಒಂದು ಪತಿಯಿಂದ ಖರೀದಿ ಮಾಡತಕ್ಕ ನೀತಿ ಎಂಬುದನ್ನು ಒಪ್ಪುತ್ತೇನೆ, ಆದರೆ ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ರಾಜ್ಯ ಸರ್ಕಾರದವರೇ ಹೈಬ್ರಿಡ್ಜ್ ಜೋಳವನ್ನು ಖರೀದಿ ಮಾಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದನ್ನು ಕೊಂಡುಕೊಂಡು ಸ್ಟಾಕ್ ಮಾಡಿ

ತಕ್ಕ ಫ್ಯಾಕ್ಟರಿಯವರಿಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಆ ತರಹ ನಮ್ಮ ರಾಜ್ಯದಲ್ಲೂ ಮಾಡುವುದಕ್ಕೆ ತಮಗೇನು ತೊಂದರೆ? ಬರೀ ಕೇಂದ್ರ ಸರ್ಕಾರದ ಕಡೆಗೆ ಬೆಟ್ಟು ಮಾಡಿ ತೋರಿಸುತ್ತಿದ್ದೀರಿ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳವರು ಮಾಡಿರುವ ಹಾಗೆ ಇಲ್ಲಿಯೂ ವ್ಯವಸ್ಥೆ ಮಾಡಿ. ಎಫ್.ಸಿ.ಐ ಬೇಡ ನಿಮ್ಮ ಫುಡ್ ಕಾರ್ಪೊರೇಷನ್ ಮುಖಾಂತರ ತೆಗೆದುಕೊಂಡು ಫುಡ್ ಫಾರ್ ವರ್ಕ್ಸ್ ಯೋಜನೆಯ ಮುಖಾಂತರ ಹಂಚುವ ವ್ಯವಸ್ಥೆ ಮಾಡಿ.

ಶ್ರೀ ಜಿ. ರಾಮೇಗೌಡ—ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರ ನಿಜವಿರಬಹುದು, ಏತಕ್ಕೆಂದರೆ ನಾನು ಗುಜರಾತಿಗೆ ಹೋಗಲಿಲ್ಲ. ಆದರೆ ನಮ್ಮಲ್ಲಿ ರಾಗಿ ಇರುವವರೆಗೂ ಜೋಳ ತಿನ್ನುವುದಿಲ್ಲ ಎನ್ನುವ ಅಭಿಪ್ರಾಯ ನಮ್ಮ ಜನಗಳಲ್ಲಿ ಇರುವುದನ್ನು ಕಲೆಕ್ಟ್ ಮಾಡಿದ್ದೇನೆ. ಒಂದು ವೇಳೆ ಅದಕ್ಕೆ ಡಿಮ್ಯಾಂಡ್ ಬಂದಲ್ಲಿ ಖಂಡಿತವಾಗಿಯೂ ಅದನ್ನು ಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ— ನಿಮ್ಮ ಕಡೆ ತಿನ್ನದೇ ಇರಬಹುದು ನಮ್ಮ ಬಿಜಾಪುರ, ದಾವಣಗೆರೆ ಕಡೆ ಅದನ್ನೇ ಹೆಚ್ಚಿಗೆ ತಿನ್ನುವುದು ತಾವು ನಮ್ಮ ಕಡೆ ಬಂದು ನೋಡಿಲ್ಲ.

ಶ್ರೀ ಭೀಮಣ್ಣ ಖಂಡ್ರೆ -- ಹೈದರಾಬಾದ್ ಕರ್ನಾಟಕದ ಕಡೆಯೆಲ್ಲಾ ಹೈಬ್ರಿಡ್ ಜೋಳವನ್ನೇ ತಿನ್ನುತ್ತಿದ್ದಾರೆ.

ಶ್ರೀ ಎಂ.ಸಿ. ಬಸಪ್ಪ--ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಮಂತ್ರಿಗಳಿಬ್ಬರು ತಮ್ಮ ಕಷ್ಟವೇನಿದೆಂಬುದನ್ನು ಹೇಳಿಕೊಂಡರು.

ಶ್ರೀ ಕೆ.ಎಚ್. ರಂಗನಾಥ್--ನಮ್ಮ ಕಷ್ಟವೇನೂ ಇಲ್ಲ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ, ಮಾನ್ಯ ಬಸಪ್ಪನವರಲ್ಲಿ ಮತ್ತು ಶ್ರೀ ರಾಜಶೇಖರ್ ಮತ್ತು ಶ್ರೀ ರಾಮಕೃಷ್ಣರವರಲ್ಲಿ ಕೇಳಿಕೊಂಡೆ. ತಾವು ದಯಮಾಡಿ ಡೆಲ್ಲಿ ಕಡೆಗೆ ಪ್ರಯಾಣ ಹೋಗುತ್ತಿರುತ್ತೀರಲ್ಲಾ ಆಗ ನಮ್ಮ ರಾಜ್ಯ ಸರ್ಕಾರದ ಕಷ್ಟವೇನಿದೆ ಅದನ್ನು ತಿಳಿಸಿ ನಮಗೆ ಹಣದ ಸಹಾಯಂ ಮಾಡಿಸಿಕೊಡಿ, ಅವರಿಂದ ನಮಗೆ ತುಂಬಾ ಸಹಾಯವಾಗುತ್ತದೆಂದು ಹೇಳಿದೆ ಅಷ್ಟೇ !

ಶ್ರೀ ಎಸ್.ಆರ್. ಬೊಮ್ಮಾಯಿ--ಅದನ್ನು ಮಾಡೋಣ, ಆದರೆ ಮಹಾರಾಷ್ಟ್ರ ರಾಜ್ಯ ಸರ್ಕಾರದವರು ಮಾಡಿದ ಹಾಗೆ ನೀವು ಇಲ್ಲಿ ಮಾಡಬಹುದಲ್ಲಾ.

ಶ್ರೀ ಎಂ.ಸಿ. ಬಸಪ್ಪ—ರೈತ ಬೆಳೆದಿರತಕ್ಕ ಮಾಲಿಗೆ ಏನು ಖರ್ಚಾಗುತ್ತದೆ, ಆತನ ಮಾಲಿಗೆ ನಷ್ಟವಾಗದ ರೀತಿಯಲ್ಲಿ ಆತನೂ ತನ್ನ ಜೀವನ ನಡೆಸಬೇಕು ಆ ರೀತಿಯಾದ ಒಂದು ಬೆಲೆಯನ್ನು ನಿಗದಿ ಮಾಡಬೇಕು. ಅದು ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗದಿದ್ದರೆ ನಿಮ್ಮ ಅಧಿಕಾರಿಗಳಿದ್ದಾರಲ್ಲಾ ಅವರು ವರ್ಕ್ ಮಾಡಿಕೊಡಲಿ. ಇವತ್ತು ಒಬ್ಬ ರೈತ ಕಬ್ಬು ಬೆಳೆಯುವುದಕ್ಕೆ ೧೫೫ ರೂಪಾಯಿ ಖರ್ಚುಮಾಡಿ ಕೇವಲ ೧೧೫ಕ್ಕೆ ಮಾರಿದರೆ ಅವನು ಹೇಗೆ ಬದುಕಬೇಕು? ಇದನ್ನೆಲ್ಲಾ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ.ವಿ. ರಾಜಶೇಖರನ್—ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಶ್ರೀ ಬಸಪ್ಪನವರು ಒಂದು ಸಲಹೆ ಕೊಟ್ಟರು ಇಲಾಖೆಯವರು ಒಂದು ಬೆಲೆ ನಿಗದಿ ಮಾಡುವ ಬಗ್ಗೆ ವರ್ಕ್ ಔಟ್ ಮಾಡಲಿ ಎಂದು, ಆದರೆ ಇವತ್ತು ನಮ್ಮ ದೇಶದಲ್ಲಿ ಏನಾಗಿದೆಂದರೆ ಇದನ್ನೆಲ್ಲಾ ನಿಮ್ಮ ಅಧಿಕಾರಿಗಳು ವರ್ಕ್ ಔಟ್ ಮಾಡಿದ್ದಾರೆ. ಇಷ್ಟು ಖರ್ಚು ಆಗುತ್ತದೆ ಇಷ್ಟು ಬೆಲೆ ಕೊಡಬೇಕೆಂದು ಹೇಳಿದ್ದಾರೆ. ಆದರೆ ಇವತ್ತು ದುರ್ದೈವ ಅದನ್ನು ಒತ್ತಾಯ ಮಾಡಲು ನಮ್ಮಲ್ಲಿ ಪೊಲಿಟಿಕಲ್ ಪ್ರಜರ್ ಇಲ್ಲ. ಆದರೆ ಇವತ್ತು ಏನು ಮಾಡುತ್ತಿದ್ದೀರಿ ಎಂದರೆ ರೈತ ತಾನು ಬೆಳೆದ ಧಾನ್ಯವನ್ನೆಲ್ಲಾ ವರ್ತಕರಿಗೆ ಮಾರಿದಾದ ಮೇಲೆ ಇಷ್ಟು ಎಂದು ಬೆಲೆಯನ್ನು ನಿಗದಿ ಮಾಡುತ್ತೀರಾ, ಅದು ಅವನ ಕೈಯಿಂದ ತಪ್ಪಿಹೋದ ಮೇಲೆ, ಆದರೆ ಬೇರೆ ದೇಶಗಳಲ್ಲಿ ಹೇಗೆ ಮಾಡುತ್ತಾರೆ ಎಂದರೆ ಬಿತ್ತನೆ ಮಾಡುವುದಕ್ಕಿಂತ ಮೊದಲೇ ಇಂಥಿಂಥ ಧಾನ್ಯಗಳಿಗೆ ಇಂಥಿಂಥ ಬೆಲೆಯನ್ನು ನಿಗದಿ ಮಾಡಿಬಿಟ್ಟಿರುತ್ತಾರೆ ಇದರಿಂದ ಅವನು ಹೆಚ್ಚೆಚ್ಚಿಗೆ ಲಾಭ ಬರತಕ್ಕ ಬೆಳೆಯನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ಆದರೆ ನಮ್ಮಲ್ಲಿ ಆ ಪದ್ಧತಿಯನ್ನು ತಾವು ಜಾರಿಗೆ ತರುತ್ತಿಲ್ಲ ಇದರಿಂದಾಗಿ ಏನಾಗುತ್ತಿದೆಂದರೆ ಅವನು ತಾನು ಬೆಳೆದ ಆಹಾರ ಪದಾರ್ಥಗಳನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳವಿರುವುದಿಲ್ಲ, ಹಣ ಬೇರೆ ಅವನಿಗೆ ಅರ್ಜೆಂಟ್ ಆಗಿ ಬೇಕಾಗಿರುತ್ತದೆ ಈ ಎಲ್ಲಾ ಕಾರಣಕ್ಕೆ ಅವನು ಸಿಕ್ಕಷ್ಟು ಹಣಕ್ಕೆ ತನ್ನ ಧಾನ್ಯವನ್ನೆಲ್ಲಾ ಮಾರಿಕೊಂಡಾದ ಮೇಲೆ ನೀವು ರೇಟನ್ನು ಫಿಕ್ಸ್ ಮಾಡುತ್ತಿದ್ದೀರಿ. ಆದುದರಿಂದ ಅದನ್ನು ಮುಂಚಿತವಾಗಿ ಅನೌನ್ಸ್ ಮಾಡುವುದಕ್ಕೆ ನಮ್ಮಲ್ಲಿ ಪೊಲಿಟಿಕಲ್ ವಿಲ್ ಇಲ್ಲ.

ಶ್ರೀ ಜಿ. ರಾಮೇಗೌಡ—ಮಾನ್ಯ ಅಧ್ಯಕ್ಷಣೀಯವರೇ, ರಾಗಿಗೆ ಸಪೋರ್ಟಿಂಗ್ ಪ್ರೈಜ್ ಗೊತ್ತು ಮಾಡಿದ್ದೇವೆ ಭತ್ತಕ್ಕೆ ಗೊತ್ತುಮಾಡಿದ್ದೇವೆ. ಮಾನ್ಯ ಸದಸ್ಯರು ಅಮೇರಿಕಾ ದೇಶದಲ್ಲಿ ಮುಂಚಿತವಾಗಿ ಅನೌನ್ಸ್ ಮಾಡಿರುತ್ತಾರೆಂದು ಹೇಳಿದರು. ಇದನ್ನು ನಾನು ಮೊದಲು ಕೇಳಿದ್ದೆ ಅದಕ್ಕೆ ನಾನು ಮೊನ್ನೆ ಅಕಸ್ಮಾತ್ ಅಮೇರೀಕಾಕ್ಕೆ ಹೋಗಿದ್ದೆ ಅಲ್ಲಿಯ ಫುಡ್ ಕಮಿಷನರ್‌ಗಳ ಜೊತೆಯಲ್ಲಿ ಒಂದೊಂದು ಗಂಟೆ ಕೂತುಕೊಂಡು ಮಾತನಾಡಿ ನೀವು ಮುಂಚಿತವಾಗಿ ಅನೌನ್ಸ್ ಮಾಡುತ್ತೀರಾ ಅಂತ ಕೇಳಿದೆ ಅದಕ್ಕೆ ಅವರು ಇಲ್ಲ ಅವರು ಓಪನ್ ಮಾರ್ಕೆಟ್‌ರವರೊಡನೆ ಕಾಂಪಿಟ್ ಮಾಡಬೇಕಾಗುತ್ತದೆಂದು ಹೇಳಿದರು. ಬಹುಶಃ ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಅಲ್ಲಿ ಯಾವ ಅಧ್ಯಕ್ಷರು ಇದ್ದರೋ ಗೊತ್ತಿಲ್ಲ. ಈಗ ಅಂತೂ ಅಲ್ಲಿ ಕಡ್ಲೆಕಾಯಿ ಬೆಳೆಯುತ್ತಿದ್ದವರೇ ಅಧ್ಯಕ್ಷರಾಗಿದ್ದಾರೆ. ನಾನು ವೆಸ್ಟ್ ವರ್ಜಿನಿ, ಫ್ಲಾರಿಡಾದಲ್ಲಿ ಕೇಳಿದ್ದೇನೆ ವಾಷಿಂಗ್‌ಟನ್‌ನಲ್ಲಿ ಕೇಳಿದ್ದೇನೆ ಎಲ್ಲೂ ಮೊದಲೇ ಬೆಲೆಯನ್ನು ನಿಗದಿ ಮಾಡಿರುವುದಿಲ್ಲವಂತೆ. ಮತ್ತೆ ಕೆಲವರು ಹೇಳಿದರು ಖರ್ಚಾಗದೇ ಉಳಿದಂಥ ಪದಾರ್ಥವನ್ನು ಸಮುದ್ರಕ್ಕೆ ಹಾಕಿದರು ಅಂತ ಕೆಲವರು ಹೇಳಿದ್ದರು ಅದಕ್ಕೆ ನಾನು ಬಹಳ ಆಸ್ಥೆಯಿಂದ ಅದನ್ನು ಎಲ್ಲ ಕೆಡವಿದ್ದಾರೆ ನೋಡೋಣ ಅಂತ ಎಲ್ಲಾ ಕಡೆ ಕೇಳಿ ನೋಡಿದೆ ಆದರೆ ನನ್ನ ಕೈಯಲ್ಲಿ ನೋಡಲಾಗಲಿಲ್ಲ.

ಶ್ರೀ ಎಂ.ವಿ. ರಾಜಶೇಖರನ್—ನನಗಂತು ಬಹಳ ವ್ಯಸನವಾಗುತ್ತದೆ; ಮಾನ್ಯ ರಾಮೇಗೌಡರು ವ್ಯವಸಾಯಗಾರರು; ಅವರು ಈವತ್ತಿನ ದಿವಸ ವ್ಯವಸಾಯ ಇಲಾಖೆಯನ್ನು ವಹಿಸಿಕೊಂಡಿಲ್ಲವೆಂದು ಬಹಳ ಲಘುವಾಗಿ ಮಾತನಾಡುತ್ತಿದ್ದಾರೆ; ಅದು ಖಂಡಿತ ಸರಿಯಲ್ಲ. ಅಮೇರಿಕಾಕ್ಕೆ ಹೋದೆ, ಅಲ್ಲಿ ಸಂಬಂಧಪಟ್ಟ ಇಲಾಖೆಯವರೊಡನೆ ಮಾತನಾಡಿದೆ, ಮತ್ತು ಅಲ್ಲಿ ಓಪನ್ ಮಾರ್ಕೆಟಿನಲ್ಲಿ ಕಾಂಪೀಟ್ ಮಾಡಬೇಕೆಂದು ಹೇಳಿದರೆಂದು ತಿಳಿಸಿದರು. ಇದು ಸರಿಯಾದ ವಿಚಾರವಲ್ಲ, ಇದನ್ನು ಎಲ್ಲಿ ಹೇಳಿ ಕೊಟ್ಟಿದ್ದು ಎಂಬುದು ಗೊತ್ತು. ನನಗೆ ಗೊತ್ತಿರುವ ಹಾಗೆ, ಪ್ರತಿ ವರ್ಷ ಇಡೀ ವ್ಯವಸಾಯೋತ್ಪನ್ನ ಗಳಿಗೆ, ಯಾವ ಯಾವ ಉತ್ಪನ್ನಗಳಿಗೆ ಎಷ್ಟೆಷ್ಟು ಬೆಲೆಯನ್ನು ಕೊಡಬೇಕೆಂದು ತೀರ್ಮಾನ ಮಾಡತಕ್ಕ ವ್ಯವಸ್ಥೆ ಆ ದೇಶದಲ್ಲಿದೆ.

ಶ್ರೀ ಜಿ. ರಾಮೇಗೌಡ—ನಾನು ಒಮ್ಮೆ ವಾಷಿಂಗ್‌ಟನ್ನಿಗೆ ಹೋದಾಗ ರೈತರು ಟ್ರಾಕ್ಟರ್‌ಗಳನ್ನು ತಂದು ಅಲ್ಲಿನ ಅಧ್ಯಕ್ಷರ ಕಛೇರಿಯ ಮುಂದೆ ಮುಷ್ಕರ ಹೂಡಿದ್ದರು. ಆಗ ನಾನು ಏಕೆ ಮುಷ್ಕರ ಮಾಡುತ್ತಿದ್ದೀರಿ, ಭಾರತದಲ್ಲಿ ಮುಷ್ಕರ ಮಾಡುವುದಿಲ್ಲ. ಟ್ರಾಕ್ಟರ್ ತರುವುದಿಲ್ಲ. ಇಲ್ಲಿ ತರುತ್ತಿದ್ದೀರಲ್ಲ ಎಂದು ಕೇಳಿದ್ದಕ್ಕೆ ಬೆಳೆದ ಪದಾರ್ಥಕ್ಕೆ ಸರಿಯಾದ ಬೆಲೆ ದೊರಕುತ್ತಿಲ್ಲವೆಂದು ಮುಷ್ಕರ ಮಾಡುತ್ತಿದ್ದೇ ವೆಂದು ಹೇಳಿದರು.

SRI K. BHASKAR NAIDU.—Now Madam Speaker that you are going to America you can find out and tell us.

DEPUTY SPEAKER.—You want to send me to America?

ಶ್ರೀ ಎಂ.ಸಿ. ಬಸಪ್ಪ—ಇನ್ನು ಸಪೋರ್ಟ್ ಪ್ರೈಸ್ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ, ಕಾಸ್ಟ್ ಆಫ್ ಕಲ್ಟಿವೇಷನ್ ಅನ್ನು ಪ್ರತಿ ವರ್ಷ ವರ್ಕ್ ಔಟ್ ಮಾಡಿ ಅದಕ್ಕಿಂತ ಹೆಚ್ಚಿನ ಬೆಲೆಯಲ್ಲಿ ಪರ್ಚೇಸ್ ಮಾಡತಕ್ಕ ವ್ಯವಸ್ಥೆ ಮಾಡಬೇಕು ಎಂದು. ಈ ಬಗ್ಗೆ ಕೇಂದ್ರ ಸರ್ಕಾರದೊಡನೆ ಹೋರಾಟ ಮಾಡಿದರೆ ಏನೂ ತಪ್ಪಾಗಲಾರದ್ದರಿಂದ ಈ ಒಂದು ಪ್ರಯತ್ನವನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ಮುಖ್ಯವಾಗಿ ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳುವುದಾದರೆ, ತಮ್ಮ ಒಂದು ಅಂಕಿ ಅಂಶಗಳ ಪ್ರಕಾರ ಇನ್ನೂ ೫೦ ಲಕ್ಷ ಹೆಕ್ಟೇರ್ ಸಾಯಿಲ್ ಕನ್‌ಸರ್ವೇಷನ್ ಆಗಬೇಕಾಗಿದೆ; ಅದರಲ್ಲಿ ಈಗಾಗಲೇ ಸುಮಾರು ೨೪ ಲಕ್ಷ ಹೆಕ್ಟೇರ್ ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ತಾವು ಮಾಡಿರತಕ್ಕ ಸಾಯಿಲ್ ಕನ್‌ಸರ್ವೇಷನ್ ವರ್ಕ್ ಏನಿದೆ ಅದು ನ್ಯಾಯವಾದ ರೀತಿಯಲ್ಲಿ ಆಗಿಲ್ಲ. ಅನೇಕ ಕಡೆ ವೇಸ್ಟ್ ವೈರ್ ಹಾಕಿರುವುದಿಲ್ಲ; ಆಗ ಮಳೆ ಬಂದರೆ, ಬಂಡ್ ಹಾಕಿದರೂ ಏರೋಷನ್ ಜಾಸ್ತಿಯಾಗಿ, ನಾವು ಏನು ಪ್ರತಿಫಲವನ್ನು ನಿರೀಕ್ಷಣೆ ಮಾಡಿರುತ್ತೇವೆಯೋ ಅದು ಆಗುವುದಿಲ್ಲ. ತಾವು ಕೆಲಸ ಮಾಡಿಸುವಾಗ ಕಂಟೂರ್ ಬಂಡಿಂಗ್ ಮಾಡಿಸತಕ್ಕದ್ದು ಬಹಳ ಮುಖ್ಯ ಎಂದು ಹೇಳುತ್ತೇನೆ. ಇನ್ನು ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಮಾನ್ಯ ರಾಮಕೃಷ್ಣರವರು, ತಾವು ಆ ಕೆಲಸವನ್ನು ಬಿಟ್ಟು ಬೇರೆ ಕೆಲಸಕ್ಕೆ ಕೈ ಹಾಕಬಾರ ದಾಗಿತ್ತೆಂದು ಹೇಳಿದ್ದಾರೆ. ತಾವು ವೈಟ್ ಪೇಪರ್‌ನಲ್ಲಿ ಕೂಡ ಹೇಳಿದ್ದೀರಿ. 'KAIC has entrusted to the Indian Institute of Management, Bangalore, to prepare a

plan to streamline the organisation' ಎಂದು. ಅಂದರೆನೀವು ೫ ಕೋಟಿ ರೂಪಾಯಿಗ ಳನ್ನು ಕಳೆದುಕೊಂಡ ಮೇಲೆ ಆರ್ಗನೈಸೇಷನ್ ಅನ್ನು ಸ್ಟ್ರೀಮ್‌ಲೈನ್ ಮಾಡಬೇಕೆಂದು ಹೊರಟಿದ್ದೀರಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನವರನ್ನು ಹೇಗೆ ಸರಿ ಮಾಡುವುದು ಎಂದು ಹೊರಟಿದ್ದೀರಿ. ಬಹುಶಃ ಇನು ಆಗಬಾರದಿತ್ತು. ತಾವು ಹೇಳಿರುವ ಪ್ರಕಾರ ೫ ಕೋಟಿ ರೂಪಾಯಿ ನಷ್ಟ ವಾಗಿದೆಯಲ್ಲ ಇದಕ್ಕೆ mismangement and corruption is not the only reason. The point that we seek to make in this White Paper mismanagement and corruption, if there are, alone are not responsible for the losses. ಅಂದರೆ ಸಾಕ್ಷಿ ಚನ್ನಾಗಿ ಹೇಳಿದ್ದೀರಿ. ಈಗ ಮಿಸ್ ಮ್ಯಾನೇಜ್‌ಮೆಂಟ್, ಕರಪ್ಷನ್ ಹೀಗೆ ಪ್ರತಿಯೊಂದು ಇದೆ. ಆದರೆ ಅಷ್ಟೇ ಕಾರಣ ಎನ್ನುವುದು ತಪ್ಪು; ಸ್ವಲ್ಪ ನ್ಯಾಯವಾಗಿಯೂ ನಷ್ಟವಾಗಿದೆ. ತಾವು ವೈಟ್ ಪೇಪರ್ ಎಂದು ಏನು ಕರೆದಿದ್ದೀರಿ ಅದು ಬ್ಲಾಕ್‌ಸ್ಟ್ ಪೇಪರ್ ಕೂಡ ಆಗಬಹುದು. ಸರ್ಕಾರ ದಿಂದ ಮಂಡನೆಯಾದ ಪೇಪರ್‌ನಲ್ಲಿ ಇದು ಇರಬಾರದಾಗಿತ್ತು. ಮಿಸ್ ಮ್ಯಾನೇಜ್‌ಮೆಂಟ್, ಕರಪ್ಷನ್ ಏನಿದೆ ಅವನ್ನು ಸರಿ ಮಾಡಿದ್ದೇವೆ, we have taken effective steps to put it down ಅಂಥ ಹೇಳಿದ್ದರೆ I would have really felt happy. ಆದರೆ ಅದರಲ್ಲಿ ಮಿಸ್ ಮ್ಯಾನೇಜ್ ಮೆಂಟ್ ಇದೆ,, ಕರಪ್ಷನ್ ಇದೆ ಎಂಬುದು ಅಷ್ಟೇ ಕಾರಣವಲ್ಲ, ಹಾಗೂ ಹೀಗೂ ನ್ಯಾಯವಾಗಿ ನಷ್ಟ ವಾಗಿದೆ ಎಂಬುದು ಇರಬಾರದಾಗಿತ್ತು, ಅದು ಈಗ ಗಮನಕ್ಕೆ ಬಂದಿದೆ. ಅದನ್ನು ರೂಟ್‌ಔಟ್ ಮಾಡುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಬೇಕೋ ಹಾಕಿ, ಒಂದು ದಕ್ಷತೆಯನ್ನು ಆ ಒಂದು ಆರ್ಗನೈಸೇಷನ್ನಿಗೆ ತರತಕ್ಕದ್ದು ಬಹಳ ಮುಖ್ಯ ಎಂದು ಹೇಳುತ್ತೇನೆ. ಕಳೆದ ಸಾಲಿನಲ್ಲಿ ಮಾನ್ಯ ರಾಜಶೇಖರನ್‌ರವರು ಮಾತನಾಡುತ್ತಾ ಅವರ ಒಂದು ಸ್ವಂತ ಅನುಭವವನ್ನು ಹೇಳಿದ್ದರು; ನಾನು ೧೮ ಸಾವಿರ ರೂಪಾಯಿ ಸಾಲ ತೆಗೆದುಕೊಂಡು ೩೭ ಸಾವಿರ ರೂಪಾಯಿ ಬಡ್ಡಿ ಕೊಟ್ಟೆ ಎಂದು. ಅದರಲ್ಲೂ ಕೆಎಐಸಿ.ಯಲ್ಲಿ ಸಾಲ ತೆಗೆದುಕೊಂಡರೆ ತೀರಿಸುವುದು ಬಹಳ ಕಷ್ಟ. ಏಕೆಂದರೆ, ಸಾಲದ ಳರಷ್ಟು ಬಡ್ಡಿ ಕೊಟ್ಟಿರುತ್ತೇವೆ. ಅಸಲು ಹಾಗೆ ಇರುತ್ತದೆ, ಬಡ್ಡಿ ಕೊಡುತ್ತಿರುತ್ತೇವೆ, ಸುಸ್ತಿ ಬಡ್ಡಿ ಕೊಡುತ್ತೇವೆ. ಈ ಸಂದರ್ಭದಲ್ಲಿ, ರೈತನ ಮೇಲೆ ಯಾವ ವಿಧವಾದ ಸುಸ್ತಿ ಬಡ್ಡಿಯನ್ನು ಕೂಡ ಈ ಸಂಸ್ಥೆಯಾಗಲೀ ಅಥವಾ ಯಾವ ಸಂಸ್ಥೆಯಾಗಲೀ ಹಾಕಕೂಡದು ಎಂಬ ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಆಗ್ರೋ ಇಂಡಸ್ಟ್ರೀಸ್ ಒಂದೇ ಅಲ್ಲ, ಮೈಸೂರ್ ಟೊಬ್ಯಾಕೋ ಕಂಪನಿ ಹೀಗೆ ಅನೇಕ ಸಂಸ್ಥೆಗಳು ಸಾಲ ಕೊಟ್ಟಿವೆ. ಯಾವ ಸಂಸ್ಥೆಯೇ ಆಗಲೀ ಅಸಲನ್ನು ಇನ್‌ಸ್ಟಾಲ್‌ಮೆಂಟ್ ಮೂಲಕ ತೆಗೆದುಕೊಳ್ಳಲಿ. ಬಡ್ಡಿಯನ್ನು ತೆಗೆದುಕೊಳ್ಳಲಿ, ಬೇಡ ಅನ್ನುವುದಿಲ್ಲ; ಆದರೆ ಸುಸ್ತಿ ಬಡ್ಡಿ ಯನ್ನು ಏಕೆ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. ಆದ್ದರಿಂದ, ಈ ಒಂದು ಸಂಕಷ್ಟವನ್ನು ನಿವಾರಿಸು ವಲ್ಲಿ ಸರ್ಕಾರದವರು ನೆರವಾಗಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಎಲೆಕ್ಟ್ರಿಸಿಟಿ ಚಾರ್ಜಸ್ ಬಗ್ಗೆ ಹೇಳುವುದಾದರೆ, ಅದು ನಮಗೆ ನೇರವಾಗಿ ಸಂಬಂಧವಿಲ್ಲವೆಂದು ಹೇಳು ತ್ತೀರಿ. ಇವತ್ತು ಕೃಷ್ಣರಾಜಸಾಗರ, ತುಂಗಭದ್ರ ಡ್ಯಾಮ್‌ಗಳ ಕೆಳಗೆ ಒಂದು ಎಕರೆ ಜಮೀನಿಗೆ ನೀರನ್ನು ಕೊಟ್ಟರೆ ೩೦-೪೦ ರೂಪಾಯಿ ವಾಟರ್ ರೇಟ್ ಹಾಕುತ್ತೀರಿ. ಅದೇ ವಿದ್ಯುತ್ತಿನ ಸಹಾಯದಿಂದ ನೀರನ್ನು ಪಡೆದರೆ ತಿಂಗಳಿಗೆ ೧೦೦-೧೫೦ ರೂಪಾಯಿ ಬಿಲ್ ಬರುತ್ತದೆ. ಹೆವಿ ಇರಿಗೇಷನ್‌ನಲ್ಲಿ ಭತ್ತ, ಕಬ್ಬು ಬೆಳೆ ಯುತ್ತೇವೆಂದರೆ ಇನ್ನೂ ಜಾಸ್ತಿಯಾಗುತ್ತದೆ ಆಗ ಕಾಸ್ಟ್ ಆಫ್ ಕಲ್ಟಿವೇಷನ್ ಕೂಡ ಜಾಸ್ತಿಯಾಗು ತ್ತದೆ. ಇವತ್ತಿನ ದಿವಸ ಅನೇಕ ರಾಜ್ಯಗಳಲ್ಲಿ ಕೇವಲ ಹಾರ್ಸ್ ಪವರ್ ಫ್ಲಾಟ್ ರೇಟ್, ಎಲೆಕ್ಟ್ರಿಕ್ ಚಾರ್ಜಸ್ ಹಾಕುತ್ತಿದ್ದಾರೆ ಉದಾಹರಣೆಗೆ, ಮಹಾರಾಷ್ಟ್ರ, ಹರಿಯಾಣ ರಾಜ್ಯಗಳಲ್ಲಿ ಹಾರ್ಸ್ ಪವರ್ ಮೇಲೆ ಇಷ್ಟು ಮಿನಿಮಂ ಚಾರ್ಜ್ ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ಕಾಸ್ಟ್ ಆಫ್ ಕಲ್ಟಿವೇಷನ್ ಕಡಿಮೆಯಾಗುತ್ತದೆ; ರೈತನಿಗೆ ಭಾರ ಕಡಿಮೆಯಾಗುತ್ತದೆ; ರೈತ ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಬಳಸಿ ನೀರನ್ನು ಉಪಯೋಗಿಸುವುದಕ್ಕೆ ಅನುಕೂಲವಾಗುತ್ತದೆ; ಆದ್ದರಿಂದ, ಈ ಒಂದು ಪದ್ಧತಿಯನ್ನು ನಮ್ಮ ರಾಜ್ಯದಲ್ಲಿ ತರುವುದಕ್ಕೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಗಳೊಡನೆ ಪ್ರಸ್ತಾಪಿಸುವುದು ಮುಖ್ಯವೆಂದು ಹೇಳು ತ್ತೇನೆ. ಇನ್ನು ಈ ವ್ಯವಸಾಯ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಬೇಕಾದಷ್ಟು ಮಾತ ನಾಡುತ್ತಿದ್ದೇವೆ. ಜಾಬ್ ಓರಿಯಂಟೇಷನ್ ಇರಬೇಕು, ಈಗ ಇರತಕ್ಕದ್ದು ಸರಿಯಲ್ಲ ಎಂದೆಲ್ಲ ಮಾತ ನಾಡುತ್ತೇವೆ. ವ್ಯವಸಾಯವನ್ನೇ ನಂಬಿರತಕ್ಕಂತ ದೇಶದಲ್ಲಿ ವರ್ಷಕ್ಕೆ ಕೇವಲ ೫೨೦ ಜನ ವಿದ್ಯಾರ್ಥಿ ಗಳನ್ನು ತರಬೇತು ಮಾಡಿದರೆ ಸಾಲದು. ತಮ್ಮ ವರದಿ ಪ್ರಕಾರ ೧೫ ವ್ಯವಸಾಯ ಶಾಲೆಗಳಿವೆ, ಅವು

ಗಳ ಪೈಕಿ ೧೩ ಮಾತ್ರ ನಡೆಯುತ್ತಿವೆ, ಉಳಿದ ಎರಡನ್ನು ಪ್ರಾರಂಭಿಸಬೇಕೆಂದು ಹೇಳಿದ್ದೀರಿ. ಅವನ್ನು ಏಕೆ ಪ್ರಾರಂಭಿಸಿಲ್ಲವೆಂದು ಗೊತ್ತಿಲ್ಲ. ಅವುಗಳನ್ನು ಪ್ರಾರಂಭಿಸುವುದು ಅಷ್ಟೇ ಅಲ್ಲದೆ ಪ್ರತಿಯೊಂದು ತಾಲೂಕಿನಲ್ಲೂ ಕೂಡ ಒಂದೊಂದು ವ್ಯವಸಾಯ ಶಾಲೆಯನ್ನು ಮಾಡುವುದು ಅಗತ್ಯವೆಂದು ಹೇಳುತ್ತೇನೆ. ಆ ರೀತಿ ಮಾಡಿ ಪ್ರತಿಯೊಂದು ತಾಲೂಕಿನಲ್ಲೂ ನೂರಿನ್ನೂರು ಮಂದಿ ಯುವಕರನ್ನು ತಯಾರಿಸಬೇಕಾಗುತ್ತದೆ, ಕೇವಲ ನೌಕರಿಗೋಸ್ಕರ ಓದಿಸುವುದು ಬೇಡ. ವ್ಯವಸಾಯ ಮಾಡುವ ತಿಳುವಳಿಕೆ. ಅದಕ್ಕೆ ಬೇಕಾದ ಬೀಜ-ಗೊಬ್ಬರಗಳ ಬಗ್ಗೆ ಸರಿಯಾದ ಜ್ಞಾನ, ಹಾಗೂ ವ್ಯವಸಾಯೋಪಕರಣಗಳನ್ನು ಉಪಯೋಗಿಸುವಿಕೆ ಹೇಗೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಒಂದು ವರ್ಷದ ಕೋರ್ಸ್ ಎಂದು ಏನು ಮಾಡುತ್ತೀರಿ ಅದನ್ನು ಮಾಡುವುದು ಮುಖ್ಯ. ಇನ್ನು ಇಲಾಖೆಯ ಖರ್ಚಿನ ಬಗ್ಗೆ ಹೇಳಬಯಸುತ್ತೇನೆ. During 1977-78 as against a total allotment of Rs. 2,054 lakhs under different heads of expenditure including statutory grants total expenditure was 1 779 lakhs. ಅಂದರೆ ೨೦೦ ಚಿಲ್ಲರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಆಗಿಲ್ಲ ಏತಕ್ಕೆ ಆಗಲಿಲ್ಲ ಎಂಬುದನ್ನು ತಿಳಿಸಬೇಕು. ಇದರಲ್ಲಿ ಏನಿದೆ ಎಂದರೆ during the year 1978-79, up to the end of February 1979, Rs, 1382 lakhs have been spent out of Rs. 2120 lakhs ಎಂದು ಇದೆ. ಅಂದರೆ ತಮ್ಮ ಸ್ಟೇಟ್‌ಮೆಂಟ್ ಪ್ರಕಾರ ತಾವು ೧೧ ತಿಂಗಳಿಗೆ ೧೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ; ಇನ್ನು ೮ ಕೋಟಿ ರೂಪಾಯಿಗಳನ್ನು ಒಂದು ತಿಂಗಳಿನಲ್ಲಿ ಖರ್ಚು ಮಾಡಬೇಕಾಗಿದೆ. ಅಂದರೆ ತಮ್ಮ ಇಲಾಖೆಯವರು ಅವರ ಮಂತ್ಲಿ ಪ್ರೋಗ್ರಾಮ್ ಪ್ರಕಾರ ಎಕ್ಸ್‌ಪೆಂಡಿಚರ್ ಹಾಕಿಕೊಂಡು ಆ ಕಾರ್ಯಕ್ರಮದಂತೆ ಕೆಲಸ ಮಾಡುತ್ತಾ ಇಲ್ಲ. ಮಾರ್ಚ್ ತಿಂಗಳವರೆಗೆ ಪ್ರೋಗ್ರಾಮ್ ಹಾಕಿದರೂ ಮತ್ತೆ ಒಂದು ತಿಂಗಳಿಗೆ ಖರ್ಚು ಮಾಡತಕ್ಕಂಥ ವ್ಯವಸ್ಥೆ ತಮ್ಮ ಇಲಾಖೆಯಲ್ಲಿ ಇದೆಯಲ್ಲಾ ಎಂದು ನನಗೆ ವ್ಯಥೆಯಾಗುತ್ತಿದೆ. ಇದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡತಕ್ಕಂಥ ರೀತಿಯಲ್ಲಿ ತಾವು ವ್ಯವಸ್ಥೆ ಮಾಡಬೇಕು. ಈ ವಿಚಾರದಲ್ಲಿ ಎಷ್ಟು ಹಣ ಮಂಜೂರಾಗಿ ದೆಯೋ ಅಷ್ಟೂ ಹಣವನ್ನು ಖರ್ಚು ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ಹಾರ್ಟಿಕಲ್ಚರ್ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷಣಿಯವರೇ, ನನ್ನ ಸ್ನೇಹಿತರು ಹಾರ್ಟಿಕಲ್ಚರ್ ಮಿನಿಸ್ಟರ್ ಆಗಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಯವರು ಇವರಿಗೆ ಪೋರ್ಟ್‌ಫೋಲಿಯೋ ಕೊಡಬೇಕಾದರೆ ಇವರ ಬ್ಯಾಕ್‌ಗ್ರೌಂಡ್ ತಿಳಿದುಕೊಂಡು ಕೊಟ್ಟಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಅವರು ಹಿಂದೆ ನಮ್ಮ ಚಾಮರಾಜ ತಾಲೂಕಿನ ತಾಲೂಕ್ ಬೋರ್ಡ್ ಅಧ್ಯಕ್ಷರಾಗಿದ್ದರು. ಅವರು ಅಧ್ಯಕ್ಷರಾಗಿದ್ದಂಥ ಕಾಲದಲ್ಲಿ ಅಲ್ಲಿರತಕ್ಕಂಥ ೪½ ಎಕರೆಯಷ್ಟು ಭೂಮಿಯಲ್ಲಿ ೧½ ಎಕರೆಯಷ್ಟು ಒಂದು ಬಿಲ್ಡಿಂಗ್ ಕಟ್ಟಿ, ಉಳಿದ ೩ ಎಕರೆಯಷ್ಟು ಭೂಮಿ ಪಾಳು ಬಿದ್ದಿತ್ತು; ಈ ೩ ಎಕರೆಯಷ್ಟು ಭೂಮಿಯಲ್ಲಿ ಒಂದು ಹಾರ್ಟಿಕಲ್ಚರ್ ಗಾರ್ಡನ್ ಬಂತು. ತಾವು ಆ ಹಾರ್ಟಿಕಲ್ಚರ್ ಗಾರ್ಡನ್‌ಗೆ ಹೋದರೆ ಅಲ್ಲಿ ಆಗಿರತಕ್ಕಂಥ ಪ್ರಗತಿಯನ್ನು ನೋಡಬಹುದು. ಮಾನ್ಯ ಮರಿಗೌಡರು ಈ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಡೈರೆಕ್ಟರ್ ಆಗಿದ್ದಾಗ ರಸ್ತೆ ಉದ್ದಕ್ಕೂ ಹಣ್ಣಿನ ತೋಟಗಳನ್ನು ಮಾಡಿಕೊಂಡು ಹೋಗಿದ್ದರು. ಒಂದೊಂದು ತಾಲೂಕಿನಲ್ಲಿಯೂ ಫ್ರೂಟ್ ಆರ್ಚರ್ಡ್ಸ್ ಮಾಡಿದ್ದರು. ಈಗ ಅದು ಕಾಣದಾಗಿದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಹಣ್ಣಿನ ಬೀಜಗಳನ್ನು ರೈತರಿಗೆ ಹಂಚಿಕೆ ಮಾಡಬೇಕಾದರೆ, ಅವರು ಬರೀ ಕೋಕನಟ್ ಬೆಳೆಯುವುದಲ್ಲ, ಎಲ್ಲಾ ವಿವಿಧ ಹಣ್ಣುಗಳನ್ನು ಬೆಳೆಯುವುದಕ್ಕೆ ತಾವು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡಬೇಕು. ಪ್ರತಿಯೊಂದು ತಾಲೂಕಿನಲ್ಲಿಯೂ ಫ್ರೂಟ್ ಆರ್ಚರ್ಡ್ಸ್ ಮಾಡಬೇಕು. ನಮ್ಮ ಚಾಮರಾಜನಗರ ತಾಲೂಕಿನಲ್ಲಿ ಯಾವ ರೀತಿ ಮಾಡಿದ್ದಾರೆಯೋ ಅದೇ ರೀತಿಯಲ್ಲಿ ಎಲ್ಲಾ ತಾಲೂಕುಗಳಲ್ಲಿಯೂ ಅದನ್ನು ಮಾಡಿ ಹಣ್ಣಿನ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ಸುಬ್ಬಯ್ಯ, (ವಿರಾಜಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ವ್ಯವಸಾಯ ಹಾಗೂ ತೋಟಗಾರಿಕೆ ಇಲಾಖೆಯ ಸಚಿವರು ಇಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸಿ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ನಾನಾವರೂ ಈಗಾಗಲೇ ನಮ್ಮ ಸ್ನೇಹಿತರು ಮಾತನಾಡಿದಂಥ ಆ ವಿಷಯಗಳನ್ನು ಬಿಟ್ಟು ಗಿರಿಜನರ ಉಪಯೋಜನೆಯ ವಿಚಾರದಲ್ಲಿ ಮಾತ್ರ ಸೀಮಿತ

ವಾಗಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ೧೯೭೮-೭೯ರಲ್ಲಿ ಈ ಗಿರಿಜನ ಉಪಯೋಜನೆಗೆ ವ್ಯವಸಾಯ ಇಲಾಖೆಯಿಂದ ೧೮ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದರು. ಈ ವರ್ಷ ೫೭ ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ, ಇದು ಬಹಳ ಸಂತೋಷದ ವಿಚಾರ. ಕಳೆದವರ್ಷ ನಮ್ಮ ಕೊಡಗು ಜಿಲ್ಲೆಗೆ ೨.೪ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ಅದರಲ್ಲಿ ೯೨.೯೦೦ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದರು. ೧೯೭೮ನೇ ಇಸವಿಯ ನವೆಂಬರ್ ತಿಂಗಳಲ್ಲಿ ಅಂದರೆ ಆ ವರ್ಷದ ಅಂತ್ಯದಲ್ಲಿ ಆ ಹಣವನ್ನು ಬಿಡುಗಡೆ ಮಾಡಿದ್ದರಿಂದ ತಮ್ಮ ಇಲಾಖೆಯವರು ಈ ಗಿರಿಜನ ಉಪಯೋಜನೆಯ ವಿಚಾರದಲ್ಲಿ ಏನೇನು ಕೆಲಸಕಾರ್ಯಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡುವುದಕ್ಕೆ ಆಗಲಿಲ್ಲ. ನಮ್ಮ ಜಿಲ್ಲೆಯಲ್ಲಿ ಈ ಯೋಜನೆಗಾಗಿ ೧೩ ಕಾಲೋನಿಗಳನ್ನು ಆರಿಸಿಕೊಂಡರು. ಈ ೧೩ ಕಾಲೋನಿಗಳಿಗೆ ಉಳುವ ಎತ್ತು, ಬಿತ್ತನೆ ಬೀಜ ಮತ್ತು ಇತರ ವ್ಯವಸಾಯ ಸಾಮಗ್ರಿಗಳನ್ನು ಸರಬರಾಜು ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡರು. ಆದರೆ ಮಾರ್ಚ್ ೩೧ನೇ ತಾರೀಖಿನವರೆಗೆ ತಮ್ಮ ಇಲಾಖೆಯವರು ಈ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ. ಈ ೧೩ ಕಾಲೋನಿಗಳನ್ನು ಆರಿಸಿಕೊಂಡ ಸಂದರ್ಭದಲ್ಲಿ ಯಾವ ಒಂದು ವಿಶೇಷವಾದ ಸಂಖ್ಯಾ ಮಟ್ಟವನ್ನು ಇಟ್ಟುಕೊಂಡಿದ್ದಾರೆ ಎಂಬುದನ್ನು ನಾನು ವರ್ಣಿಸಬೇಕಾಗಿದೆ. ನಮ್ಮ ವಿರಾಜಪೇಟೆ ತಾಲ್ಲೂಕಿನಲ್ಲಿ ೨೧ ಸಾವಿರ ಗಿರಿಜನರು ಇದ್ದಾರೆ, ಅಲ್ಲಿ ೨ ಕಾಲೋನಿಗಳನ್ನು ಆರಿಸಿಕೊಂಡಿದ್ದಾರೆ. ಸೋಮವಾರ ಪೇಟೆಯಲ್ಲಿ ೩ ಸಾವಿರ ಗಿರಿಜನರು ಇದ್ದಾರೆ, ಅಲ್ಲಿ ೧೧ ಕಾಲೋನಿಗಳನ್ನು ಆರಿಸಿಕೊಂಡಿದ್ದಾರೆ. ನಮ್ಮ ಮಡಿಕೇರಿ ಕ್ಷೇತ್ರದಲ್ಲಿ ೨ ಸಾವಿರ ಗಿರಿಜನರು ಇದ್ದಾರೆ, ಅಲ್ಲಿ ಒಂದು ಕಾಲೋನಿಯನ್ನೂ ಆರಿಸಿಕೊಂಡಿಲ್ಲ. ಸೋಮವಾರ ಪೇಟೆಯಲ್ಲಿ ೧೧ ಕಾಲೋನಿಗಳನ್ನು ಆರಿಸಿಕೊಂಡಿರುವುದನ್ನು ನೋಡಿದರೆ ಮಾನ್ಯ ಗುಂಡೂರಾಯರನ್ನು ಮೆಚ್ಚಿಸುವುದಕ್ಕಾಗಿ ಆರಿಸಿಕೊಂಡಿದ್ದಾರೆ ಎಂದು ಕಾಣುತ್ತದೆ. ಮಾನ್ಯ ಗುಂಡೂರಾಯರನ್ನು ಮೆಚ್ಚಿಸುವುದಕ್ಕಾಗಿ ಈ ಕೆಲಸವನು ಮಾಡಬಾರದು. ಜನರ ಉಪಯೋಗಕ್ಕಾಗಿ ಈ ಕೆಲಸವನ್ನು ಮಾಡಬೇಕು ಎಂದು ಹೇಳುತ್ತೇನೆ. ನಂತರ ತಮ್ಮ ಇಲಾಖೆಯವರು ರೈತರಿಗೆ ಎತ್ತುಗಳು, ಬಿತ್ತನೆ ಬೀಜಗಳು ಹಾಗೂ ಇನ್ನಿತರ ವ್ಯವಸಾಯ ಸಾಮಗ್ರಿಗಳನ್ನು ಕೊಡುವುದರಲ್ಲಿ ತೊಂದರೆ ಉಂಟಾಗಿದೆ. ಇದಕ್ಕೆ ಕಾರಣವೇನೆಂದರೆ ಮಾರ್ಕೆಟ್‌ನಲ್ಲಿ ಎತ್ತುಗಳು ಸಿಕ್ಕುವುದಿಲ್ಲ, ಬಿತ್ತನೆ ಬೀಜಗಳನ್ನು ಮತ್ತಿತರ ವ್ಯವಸಾಯ ಸಾಮಗ್ರಿಗಳನ್ನು ಕೋ-ಆಪರೇಟಿವ್ ಸೊಸೈಟಿಗಳಲ್ಲೇ ಕೊಂಡುಕೊಳ್ಳಬೇಕಾಗಿದೆ. ಇವೆಲ್ಲವನ್ನೂ ಕೊಡುವುದಕ್ಕೆ ಎ.ಸಿ. ಬಿಲ್‌ನಲ್ಲಿ ಅನುಮತಿ ದೊರೆಯದ್ದರಿಂದ ಎತ್ತುಗಳು, ಬಿತ್ತನೆ ಬೀಜಗಳು ಹಾಗೂ ಇನ್ನಿತರ ವ್ಯವಸಾಯ ಸಾಮಗ್ರಿಗಳನ್ನು ಕೊಡುವುದಕ್ಕೆ ಅಸಾಧ್ಯವಾಗಿದೆ ಎಂದು ನನ್ನ ಅರಿವಿಗೆ ಬಂದಿದೆ. ನಮ್ಮ ಜಿಲ್ಲಾ ಮಟ್ಟದ ಸಮಿತಿಯಲ್ಲಿ ೫ನೇ ತಾರೀಖಿನ ದಿವಸ ವಿಚಾರವಿನಿಮಯ ಮಾಡಿದಂಥ ಸಂದರ್ಭದಲ್ಲಿ ಈ ವಿಚಾರಗಳು ಹೊರಬಂದವು. ಇನ್ನು ಮುಂದಕ್ಕಾದರೂ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈ ಭಾಗಕ್ಕೆ ತಾವು ಹೆಚ್ಚಿನ ಹಣವನ್ನು ಇಟ್ಟಿದ್ದೀರಿ, ಅದನ್ನು ಈಗಾಗಲೇ ತಾವು ಬಿಡುಗಡೆ ಮಾಡಿದ್ದೀರಿ ಎಂದು ನನ್ನ ಅರಿವಿಗೆ ಬಂದಿದೆ. ಆದ್ದರಿಂದ ಆದಷ್ಟು ಬೇಗ ಈ ಯೋಜನೆಯನ್ನು ನಮ್ಮ ಭಾಗದಲ್ಲಿ ಅಳವಡಿಸಿಕೊಂಡು ಅಲ್ಲಿಯ ಜನರಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿ ಕೊಡುವ ದಿಶೆಯಲ್ಲಿ ತಮ್ಮ ಇಲಾಖೆಯವರು ಕೆಲಸ ಮಾಡಲಿ ಎಂದು ತಮ್ಮಲ್ಲಿ ನಾನು ವಿನಂತಿಸಿ ಕೊಳ್ಳುತ್ತೇನೆ.

ಇನ್ನು ಹಾರ್ಟಿಕಲ ರ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ೧೯೭೮-೭೯ನೇ ಸಾಲಿಗೆ ಈ ತೋಟಗಾರಿಕೆ ಸಂಬಂಧವಾಗಿ ನಮ್ಮ ಕೊಡಗು ಜಿಲ್ಲೆಗೆ ೨ ಲಕ್ಷದ ೧೩೬ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಅದೂ ಕೂಡ ನವೆಂಬರ್ ತಿಂಗಳಲ್ಲಿ ಮಂಜೂರಾಗಿತ್ತು. ಡಿಸೆಂಬರ್ ತಿಂಗಳಲ್ಲಿ ತಮ್ಮ ಇಲಾಖೆಯವರಿಗೆ 'ರೈತರಿಗೆ ಹಣ್ಣು ಹಂಪಲಗಳ ಗಿಡಿಗಳನ್ನು ಕೊಡಿ' ಎಂದು ಇಲ್ಲಿಂದ ಆದೇಶ ಹೋಯಿತು. ಆದರೆ ಡಿಸೆಂಬರ್, ಜನವರಿ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರು ಇಲ್ಲದೇ ಇರುವಾಗ ಗಿರಿಜನ ರೈತರು ಹಣ್ಣುಹಂಪಲಗಳ ಗಿಡಗಳನ್ನು ಬೆಳೆಸುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಬಗ್ಗೆ ಗಿರಿಜನ ಅಭ್ಯರ್ಥಿಗಳನ್ನು ತರಬೇತಿ ಮಾಡಲು ಮಾದಾಪುರ ಹಾರ್ಟಿಕಲ್ಚರ್ ಸೆಂಟರ್‌ಗೆ ೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದರು. ವರ್ಷದ ಅಂತ್ಯಭಾಗದಲ್ಲಿ ಅದನ್ನು ಬಿಡುಗಡೆ ಮಾಡಿದ್ದರಿಂದ ಅವರು ಆ ಕೆಲಸವನ್ನು ಮಾಡುವುದಕ್ಕಾಗಲಿಲ್ಲ, ೫ ಸಾವಿರ ರೂಪಾಯಿಗಳು ಲ್ಯಾಪ್ಸ್ ಆಯಿತು. ಆಮೇಲೆ ಗಿರಿಜನ ಅಭ್ಯರ್ಥಿಗಳಿಗೆ ಸ್ಟೈಫಂಡ್ ಕೊಡುವುದಕ್ಕಾಗಿ ೩೩ ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. ಆದರಲ್ಲಿ ೭೦೭೩ ರೂಪಾಯಿ

ಗಳು ಮಾತ್ರ ಖರ್ಚಾಗಿದೆ. ವರ್ಷದ ಅಂತ್ಯಭಾಗದಲ್ಲಿ ಹಣವನ್ನು ಕೊಟ್ಟಿದ್ದರಿಂದ ಉಳಿದ ಹಣವನ್ನು ಖರ್ಚು ಮಾಡುವುದಕ್ಕಾಗಲಿಲ್ಲ. ಆದ್ದರಿಂದ ಆಯಾ ವರ್ಷದ ಮೊದಲ ಭಾಗದಲ್ಲಿ ಆದಷ್ಟು ಬೇಗ ಹಣವನ್ನು ಒದಗಿಸಿಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೂ ಈ ವಿಚಾರದಲ್ಲಿ ನನಗೆ ಕಂಡಂಥ ಕುಂದುಕೊರತೆಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಅದನ್ನೆಲ್ಲಾ ಸರಿಪಡಿಸಿಕೊಂಡು ಗಿರಿಜನರಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟು ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ೪ ಮಾತುಗಳನ್ನು ಮುಗಿಸುತ್ತೇನೆ.

೫ – ೦೦ ಪಿ. ಎಂ.

† ಶ್ರೀ ಹೆಚ್. ಡಿ. ಚೌಡಯ್ಯ, (ಕೆರಗೋಡು) —ಸನ್ಮಾನ್ಯ ಅಧ್ಯಕ್ಷರೇ. ಈಗ ನಮ್ಮ ಮುಂದಿರುವ ನಾಲ್ಕು ಬೇಡಿಕೆಗಳಲ್ಲಿ ಮೂರು ಬೇಡಿಕೆಗಳು ಬಹಳ ಪ್ರಾಮುಖ್ಯವಾದುವು ಇವುಗಳ ಬೇಡಿಕೆ ಮೇಲಣ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಸ್ವತಃ ರೈತನಾದ ನನಗೆ ಏಕೋ ಏನೋ ಸ್ಫೂರ್ತಿ ಬರುತ್ತಿಲ್ಲ. ಕಾರಣ : ಈಗಾಗಲೇ ಮಾತನಾಡಿರುವ ಭಾಷಣಕಾರರು ತಿಳಿಸಿರುವಂತೆ ದೇಶದಲ್ಲಿ ರೈತನ ಸ್ಥಿತಿ ಅಧೋಗತಿಗಿಳಿದಿದೆ. ರೈತನಿಗೆ ತನ್ನ ಜೀವನ ನಡೆಸುವುದೇ ಒಂದು ದೊಡ್ಡ ಕಾಯಿಲೆಯಾಗಿದೆ ಇಂತಹ ಪರಿಸ್ಥಿತಿಯಲ್ಲಿ ನಾನು ಏನು ಮಾತನಾಡಬೇಕೆಂಬುದೇ ಹೊಳೆಯುತ್ತಿಲ್ಲ. ವ್ಯವಸಾಯ ಇಲಖೆಗೆ ಸಂಬಂಧಿಸಿದ ಈ ವರ್ಷದ ವರದಿ. ಕಳೆದ ವರ್ಷ ಒದಗಿಸಲಾಗಿದ್ದ ವರದಿಯ ಪ್ರತಿರೂಪವಾಗಿದ್ದು ಗ್ರಾಮೋಫೋನ್ ರೆಕಾರ್ಡ್ ಇದ್ದಂತಿದೆ. ಕಳೆದ ಸಾಲಿನ ವರದಿಯಲ್ಲಿದ್ದಂತೆ ಈ ಸಾಲಿನ ವರದಿಯಲ್ಲೂ ಹತ್ತನ್ನೆರಡು ಶಿರೋನಾಮೆಗಳಿವೆ. ಈ ವರದಿ ಕಳೆದ ವರದಿಯ ಪುನರುದ್ಧಿಯಾಗಿದೆ. ವ್ಯವಸಾಯ ಕ್ಷೇತ್ರದಲ್ಲಿ ಕೆಲವು ಸಾಧನೆಗಳನ್ನು ಮಾಡಲಾಗುವುದೆಂದು ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರು, ಕಳೆದ ವರ್ಷ ಕೊಟ್ಟ ಈ ಆಶ್ವಾಸನೆ ಮಾನ್ಯ ಸಚಿವರಿಗೆ ಜ್ಞಾಪಕವಿರಬಹುದು. ಆ ಆಶ್ವಾಸನೆಗಳನ್ನು ಈಡೇರಿಸುವ ಸಲುವಾಗಿ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವ ವಿವರವನ್ನು ಈ ವರದಿಯಲ್ಲಿ ಕೊಟ್ಟಿಲ್ಲ. ವ್ಯವಸಾಯ ಕಸುಬು ಲಾಭದಾಯಕವಾಗಿದೆ ಎಂದು ಸರ್ಕಾರಕ್ಕೆ ನಿಜವಾಗಲೂ ಮನವರಿಕೆಯಾಗಿದ್ದರೆ. ಅದನ್ನು ಸರ್ಕಾರ ವರದಿಯಲ್ಲಿ ಹೇಳಬಹುದಾಗಿತ್ತು. ಈ ರಾಜ್ಯದಲ್ಲಿನ ನಾನಾ ಪ್ರದೇಶಗಳಲ್ಲಿ ಯಾವ ಯಾವ ಬೆಳೆಗಳನ್ನು ರೈತ ಬೆಳೆಯುತ್ತಿದ್ದಾನೆ ಮತ್ತು ಬೆಳೆಯುವಾರು ಉತ್ಪಾದನಾ ವೆಚ್ಚವನ್ನು ಕೊಡುವುದರ ಜೊತೆಗೆ, ಪ್ರತಿ ಬೆಳೆಯಿಂದ ಬರುವ ಒಟ್ಟು ಆದಾಯವೆಷ್ಟು ಮತ್ತು ನಿವ್ವಳ ಆದಾಯವೆಷ್ಟೆಂಬುದನ್ನು ಕೊಟ್ಟು, ಅತಿ ಸಣ್ಣ ರೈತ, ಸಣ್ಣ ರೈತ, ಮಧ್ಯಮ ವರ್ಗದ ರೈತ ಮತ್ತು ದೊಡ್ಡ ಹಿಡುವಳಿದಾರರು ಇದರಿಂದ ತಮ್ಮ ಜೀವನವನ್ನು ಸಾಗಿಸುವುದಕ್ಕೆ ಸಾಧ್ಯತೆ ಇದೆಯೋ ಅಥವಾ ಇಲ್ಲವೇ ಎನ್ನುವುದನ್ನು ಅಂಕಿ–ಅಂಶಗಳ ಸಹಿತ ಎತ್ತಿತೋರಿಸಿದ್ದರೆ, ನಾನು ಈ ವರದಿಯನ್ನು ಮೆಚ್ಚುತ್ತಿದ್ದೆನು. ಅಲ್ಲದೆ, ಈ ಸದನದ ಎಲ್ಲ ಸದಸ್ಯರೂ ಸಹ ಇದನ್ನು ಮೆಚ್ಚುತ್ತಿದ್ದರೆನ್ನುವುದು ನನ್ನ ನಂಬಿಕೆ. ಆದರೆ ಮಾನ್ಯ ಸಚಿವರು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಲಿಲ್ಲ. ಇನ್ನು ಮುಂದಾದರೂ ಮಾನ್ಯ ಸಚಿವರು ಈ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

ಈ ದೇಶದ ಒಟ್ಟು ಪ್ರಜಾಸಂಖ್ಯೆಯ ಸುಮಾರು ಶೇಕಡ ೭೫ ರಷ್ಟು ಜನ ವ್ಯವಸಾಯವನ್ನೇ ನಂಬಿಕೊಂಡು, ಅದನ್ನು ಕಸಬನ್ನಾಗಿ ಮಾಡಿಕೊಂಡಿದ್ದಾರೆ. ಅದರಿಂದಲೇ ಅವರು ಜೀವನ ಸಾಗಿಸಬೇಕಾಗಿದೆ. ಈ ಕಸುಬು ಲಾಭದಾಯಕವಾಗಿದ್ದ ಪಕ್ಷದಲ್ಲಿ ಸರ್ಕಾರ ಅದನ್ನು ಜನತೆಗೆ ಎತ್ತಿ ತೋರಿಸಬೇಕಾಗಿತ್ತು. ಆದರೆ, ಇದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂದು ಸರ್ಕಾರದ ಮಟ್ಟದಲ್ಲಿ, ಅದರಲ್ಲೂ ವ್ಯವಸಾಯ ಖಾತೆಗೆ ಸಂಬಂಧಪಟ್ಟ ಹಾಗೆ ಒಂದು ದೊಡ್ಡ ಕೊರತೆ ಇದೆ ಎಂದು ನನಗನ್ನಿಸುತ್ತದೆ. ಮಾನ್ಯ ಸಚಿವ ಶ್ರೀ ರಂಗನಾಥ್ ಅವರ ವಿಷಯದಲ್ಲಿ ನನಗೆ ವೈಯಕ್ತಿಕವಾಗಿ ಅಪಾರ ಗೌರವ; ಅವರ ದಕ್ಷತೆ. ನಿಷ್ಠೆ ಮತ್ತು ಪ್ರಾಮಾಣಿಕತೆ ವಿಷಯದಲ್ಲಿ ಯಾರೂ ಕೂಡ ಪ್ರಶ್ನೆ ಮಾಡುವ ಸಂದರ್ಭವಿಲ್ಲ. ವೈಯಕ್ತಿಕವಾಗಿ ನಾನವರನ್ನು ಮೆಚ್ಚಿದ್ದೇನೆ. ಆದರೆ, ಶೇಕಡ ೭೫ ಜನರ ಭವಿಷ್ಯವನ್ನು ರೂಪಿಸುವ ಖಾತೆಯ ಜೊತೆಗೆ ಸಂಸದೀಯ ವ್ಯವಹಾರಗಳ ಖಾತೆಯನ್ನೂ ಸೇರಿಸಿರುವುದು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಇವೆರಡನ್ನೂ ನೋಡಿಕೊಳ್ಳುವುದಕ್ಕೆ ಮಾನ್ಯ ರಂಗನಾಥರಿಗೆ ದಕ್ಷತೆ ಇಲ್ಲವೆಂದಲ್ಲ, ವ್ಯವಸಾಯ ಇಲಾಖೆಗೆ ಸಾಕಷ್ಟು ಆದ್ಯಗಮನ ನೀಡಲು ಅವರಿಗೆ ಅವಕಾಶವಿಲ್ಲವಾಗಬಹುದು. ವ್ಯವಸಾಯ ಖಾತೆ ಕೆಲಸ ಮಾಡಬೇಕಾದರೆ, ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ ಸಾಮಾನ್ಯವಾಗಿ ಇತರ ಎಲ್ಲ ಖಾತೆಯ ಸಮನ್ವಯವನ್ನು ಗಳಿಸಿರಬೇಕಾಗುತ್ತದೆ. ಭಾರಿ ನೀರಾವರಿ, ಸಣ್ಣ ನೀರಾವರಿ, ಸಹಕಾರ, ತೋಟಗಾರಿಕೆ, ರೇಷ್ಮೆ ವ್ಯವಸಾಯ

ಮತ್ತು ಕೈಗಾರಿಕೆ ಮುಂತಾಗಿ ನಾನಾ ಇಲಾಖೆಗಳೊಂದಿಗೆ ವ್ಯವಸಾಯ ಇಲಾಖೆ ಸಮನ್ವಯವನ್ನು ಸಾಧಿಸಬೇಕಾಗುತ್ತದೆ. ಬೇಕಾದಷ್ಟು ಅಧಿಕಾರಿಗಳಿದ್ದಾರೆ. ಅವರು ಸಮನ್ವಯ ಸಾಧಿಸುತ್ತಾರೆಂದು ಹೇಳಬಹುದು. ಆದರೆ, ಜನತಾ ಪ್ರತಿನಿಧಿಯಾದ ನನಗೆ ಇದರಲ್ಲಿ ನಂಬಿಕೆ ಇಲ್ಲ. ಅಧಿಕಾರಿಗಳ ಮಟ್ಟದಲ್ಲಿ ಎಷ್ಟರ ಮಟ್ಟಿಗೆ ನಾವು ಸಹಕಾರ ಸಮನ್ವಯವನ್ನು ಗಳಿಸಬಲ್ಲೆವೆನ್ನುವುದನ್ನು ಕಳೆದ ಮೂವತ್ತು ವರ್ಷಗಳಿಂದಲೂ ನೋಡುತ್ತಾ ಬಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಇಲ್ಲಿ ಇದ್ದಿದ್ದರೆ ಚನ್ನಾಗಿರುತ್ತಿತ್ತು, ನಾನವರನ್ನು ಪ್ರಾರ್ಥನೆ ಮಾಡಿ, ವ್ಯವಸಾಯ ಖಾತೆಯನ್ನು ಪೂರ್ಣವಾಗಿ ಮಾನ್ಯ ರಂಗನಾಥ್ ಅವರಿಗೆ ವಹಿಸಲು ಮತ್ತು ಸಂಸದೀಯ ವ್ಯವಹಾರಗಳ ಖಾತೆಯನ್ನು ಇದರಿಂದ ಬೇರ್ಪಡಿಸಿ ಬೇರೆಯವರಿಗೆ ವಹಿಸಲು ಅಥವಾ ರಂಗನಾಥ್ ಅವರು ಬಯಸಿದ ಖಾತೆಯನ್ನು ಅವರಿಗೆ ಕೊಡಲು ಕೇಳಿಕೊಳ್ಳುತ್ತಿದ್ದೆ. ಈಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳ ಗೈರುಹಾಜರಿನಲ್ಲಿ ಮಾನ್ಯ ಸಭಾಧ್ಯಕ್ಷರ ಮೂಲಕ ಹೇಳುತ್ತೇನೆ: ಶೇಕಡ ೯೦ ಜನರ ಜೀವನವನ್ನು ನಿರ್ಧಾರ ಮಾಡುವ ಖಾತೆಗೆ ಸಾಕಷ್ಟು ಕೆಲಸವಿದೆ. ಇದರಲ್ಲಿ ಶೇಕಡ ೧೦ ಜನರ ಜೀವನವನ್ನು ಸುಧಾರಿಸುವುದಕ್ಕೆ ಇನ್ನೂ ಸಾಧ್ಯವಾಗಿಲ್ಲವಾದ್ದರಿಂದ ವ್ಯವಸಾಯ ಖಾತೆಯನ್ನು ಪೂರ್ಣ ಕಾಲದ ಖಾತೆಯನ್ನಾಗಿ ಮಾಡಿ, ಅದಕ್ಕೆ ಒಬ್ಬರೇ ಸಚಿವರು ಇರುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ ಮುಂದೆ ಇಟ್ಟಿರುವ ವರದಿಯಲ್ಲಿ ಐಟಂವಾರು ಕೆಲವು ವಿಚಾರಗಳನ್ನು ಹೇಳಲಾಗಿದೆ. ರೈತನು ತಾನು ಬೆಳೆಯುವ ಬೆಳೆಗಾಗಿ ಎಷ್ಟು ಖರ್ಚು ಮಾಡುತ್ತಾನೆ ಮತ್ತು ಅದರಿಂದ ಅವನು ಎಷ್ಟು ನಿವ್ವಳ ಆದಾಯವನ್ನು ಗಳಿಸುತ್ತಾನೆ ಮತ್ತು ಆ ಆದಾಯದಿಂದ ಅವನು ತನ್ನ ಸಂಸಾರವನ್ನು ಯಾವ ರೀತಿ ಸಾಕುತ್ತಿದ್ದಾನೆ ಎನ್ನುವುದನ್ನೆಲ್ಲ ಕೂಲಂಕುಷವಾಗಿ ಅಧ್ಯಯನ ಮಾಡಿ ಧಾನ್ಯದ ಬೆಲೆಯನ್ನು ನಿಗದಿ ಮಾಡಬೇಕಾಗಿದೆ. ಈಗ ರೈತರಿಗೆ ಕೊಡುತ್ತಿರುವ ಬೆಂಬಲ ಬೆಲೆ ಮತ್ತು ಕನಿಷ್ಠ ಬೆಲೆಯನ್ನು ಶಾಸ್ತ್ರೀಯವಾಗಿ ಮಾಡುವುದಕ್ಕೆ ನಮಗೂ ಸಾಧ್ಯವಾಗಿಲ್ಲ ಮತ್ತು ಕೇಂದ್ರ ಸರ್ಕಾರದವರಿಗೂ ಸಾಧ್ಯವಾಗಿಲ್ಲವೆಂದು ಮಾನ್ಯ ಸಚಿವರು, ಮಾನ್ಯ ಬಸಪ್ಪನವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಹೇಳಿದ್ದಾರೆ. ಇದು ದುರಾದೃಷ್ಟಕರವಾದ ಸಂಗತಿ. ನಮ್ಮ ಹಳ್ಳಿಯಲ್ಲಿ ರೈತ ಮತ್ತು ಅಧಿಕಾರಿಗಳ ಸಂಪರ್ಕ ಹಾಗೂ ಸಮನ್ವಯದಿಂದ ಸಿಗುವ ಅಂಕಿ-ಅಂಶಗಳು ಬಹುಶಃ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದವರಿಗೆ ದೊರಕುವುದು ದುರ್ಲಭವೇನೋ ? ಕೇಂದ್ರ ಸರ್ಕಾರಕ್ಕೆ ಸಲಹೆ ಕೊಡುವವರು ಸ್ಥಳೀಯ ಅಧಿಕಾರಿಗಳು ಮತ್ತು ರೈತರು. ಕೇಂದ್ರ ಸರ್ಕಾರ ನಮ್ಮ ಸಲಹೆಯಂತೆ ದರವನ್ನು ನಿರ್ಧಾರ ಮಾಡಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಮ್ಮ ರಾಜ್ಯ ಸರ್ಕಾರ ಪ್ರಯತ್ನ ಮಾಡಿರಬಹುದು, ಇಲ್ಲವೆಂದಲ್ಲ. ಆದರೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ವ್ಯವಸಾಯ ಕಸುಬಿನಲ್ಲಿ ಬಹು ಮುಖ್ಯವಾಗಿರುವ ಇನ್‌ಪುಟ್ಸ್‌ಗಳು—ನೀರು ಮತ್ತು ಗೊಬ್ಬರ. ಗೊಬ್ಬರದ ವಿಷಯದಲ್ಲಿ ಕೇಂದ್ರ ಸರ್ಕಾರ ಈ ವರ್ಷ ಸ್ವಲ್ಪ ಮಟ್ಟಿಗೆ ಬೆಲೆಯನ್ನು ಕಡಿಮೆ ಮಾಡಿದೆ. ಆದರೆ, ಅದು ಯಾವುದಕ್ಕೂ ಸಾಲದು. ಮಾನ್ಯ ಬಸಪ್ಪನವರು ಸಲಹೆ ಕೊಟ್ಟ ರೀತಿಯಲ್ಲಿ ರಾಜ್ಯ ಸರ್ಕಾರದವರು, ಅತಿ ಸಣ್ಣ ರೈತರು ಮತ್ತು ಸಣ್ಣ ರೈತರಿಗೆ ಸಬ್ಸಿಡೈಸ್ ಮಾಡುವ ವಿಚಾರದಲ್ಲಿ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಇದನ್ನೂ ಬೀಜಗಳ ಉತ್ಪಾದನೆಯಲ್ಲಿ ೩ ಲಕ್ಷ ಕ್ವಿಂಟಾಲ್ ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡಿದ್ದೇವೆಂದು ಹೇಳಿದ್ದೀರಿ. ಸರ್ಕಾರದ ವತಿಯಿಂದ ಹಂಚಿಕೆಕ್ಕ ವ್ಯವಸ್ಥೆಯಲ್ಲಿ ಬಹಳ ಲೋಪದೋಷ ಇದೆ. ನನ್ನ ವೈಯಕ್ತಿಕ ಅನುಭವ ಹೇಳುವುದಾದರೆ, ಜನವರಿ ೧೬ನೇ ತಾರೀಖು ಬೀಜ ಕೊಳ್ಳಲು ಬೀಜೋತ್ಪಾದನಾ ಕೇಂದ್ರಕ್ಕೆ ಹೋಗಿದ್ದೆ ಬೀಜವನ್ನು ಲಾರಿಗೆ ಲೋಡ್ ಮಾಡುತ್ತಿದ್ದರು, ಎಲ್ಲಿಗೆ ಲೋಡ್ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಪ್ರೊಸೆಸ್ ಯೂನಿಟ್‌ಗೆ ಕಳುಹಿಸುತ್ತಿದ್ದೇವೆಂದು ಹೇಳಿದರು. ಮತ್ತೆ ವಾಪಸ್ಸು ಬರುವುದಕ್ಕೆ ಕನಿಷ್ಠಪಕ್ಷ ೨೦ ದಿವಸವಾಗುತ್ತದೆಂದು ಹೇಳಿದರು. ನಾನು ೧೮ನೇ ತಾರೀಖು ಒಟ್ಟು ಬಿಡಬೇಕಾಗಿತ್ತು. ಕಾಲಕ್ಕೆ ಸರಿಯಾಗಿ ಬತ್ತದ ಬೀಜವನ್ನು ಒಟ್ಟು ಬಿಡದೇ ಹೋದರೆ ರೈತರಿಗೆ ತುಂಬ ತೊಂದರೆಯಾಗುತ್ತದೆ. ಕಾರಣ, ಫೆಬ್ರುವರಿಯಲ್ಲಿ ಒತ್ತುವನ್ನು ನಾಟಿ ಮಾಡಿದರೆ ಇಳುವರಿ ಕಡಿಮೆಯಾಗುತ್ತದೆ. ಬತ್ತ ೧೪೫ ದಿವಸ ಅಂದರೆ ಬೇಸಿಗೆ ಕಾಲದಲ್ಲಿ ಒಂದು ವಾರ ಮುಂದಕ್ಕೆ ಹೋಗುತ್ತದೆ. ಆದುದರಿಂದ ಜನವರಿಯಲ್ಲಿ ಒಟ್ಟು ಬಿಡಲೇ ಬೇಕು. ಹಂಚಿಕೆ ಮಾಡಿದ್ದೀರಿ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಕಾಲಕ್ಕೆ ಸರಿಯಾಗಿ ಹಾಗೂ ಸಾಕಷ್ಟು ಬೀಜವನ್ನು ರೈತನಿಗೆ ಕೊಡದೇ ಹೋದರೆ

ರೈತನಾದವನು ವ್ಯವಸಾಯ ಮಾಡುವುದಾದರೂ ಹೇಗೆ? ವೈಜ್ಞಾನಿಕವಾಗಿ ಬೇಸಾಯ ಮಾಡುವುದರಲ್ಲಿಯೂ ಕೂಡ ನಾವು ಹಿಂದೆ ಬಿದ್ದಿದ್ದೇವೆ. ಸಸ್ಯಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಕೂಡ ನಾವು ಹಿಂದೆ ಬಿದ್ದಿದ್ದೇವೆ. ಇತ್ತೀಚೆಗೆ ರೈತ ಕೊಳ್ಳತಕ್ಕ ಬೆಲೆ ಕಡಿಮೆಯಾಗುತ್ತಿದೆ. ಸ್ವಲ್ಪಮಟ್ಟಿಗೆ ರೈತ ಮುಂದೆ ಬರುತ್ತಿದ್ದಾನೆ. ಆದರೆ ರೈತನಾದವನಿಗೆ ಸಸ್ಯಗಳನ್ನು ಸಂರಕ್ಷಣೆ ಮಾಡುವುದಕ್ಕೆ ಬೇಕಾದಂಥ ಸಲಕರಣೆಗಳು ಕಾಲಕ್ಕೆ ಸಿಗುತ್ತಿಲ್ಲ. ಮಂಡ್ಯ ಜಿಲ್ಲೆ ವ್ಯವಸಾಯದಲ್ಲಿ ಮುಂದುವರಿದಂಥ ಜಿಲ್ಲೆ, ರೈತನಿಗೆ ಬೇಕಾದ ಸಾಮಗ್ರಿಗಳನ್ನು ಜಿಲ್ಲಾ ಕೇಂದ್ರದಲ್ಲಿಟ್ಟು ರೈತರು ಅಲ್ಲಿಗೆ ಬಂದು ತೆಗೆದುಕೊಂಡು ಹೋಗುವಂತ ವ್ಯವಸ್ಥೆ ಮಾಡಿರುವುದು ಸರಿಯೆ? ಈ ರೀತಿ ಮಾಡಿರುವುದರಿಂದ ಹಳ್ಳಿಗಾಡಿನ ರೈತರುಗಳಿಗೆ ತೊಂದರೆಯಾಗುವುದಿಲ್ಲವೆ? ಈ ವಿಷಯವನ್ನು ವ್ಯವಸಾಯ ಅಧಿಕಾರಿಗಳೇ ಹೇಳಿದ್ದಾರೆ. ಮೊದಲು ಇದ್ದ ಹಾಗೆ ಪ್ರತಿಯೊಬ್ಬ ರೈತನಿಗೆ ಅಲ್ಲಿಯ ಸನ್ನಿವೇಶ, ಪ್ರದೇಶದ ವಿಸ್ತೀರ್ಣ, ಅಲ್ಲಿರತಕ್ಕ ವ್ಯಾಪ್ತಿಯನ್ನು ನೋಡಿ ಗ್ರಾಮ ಸೇವಕರ ಜವಾಬ್ದಾರಿ ಮೇಲೆ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಗ್ರಾಮಸೇವಕರ ಜವಾಬ್ದಾರಿ ಮೇಲೆ ಕೊಟ್ಟರೆ ರಿಪೇರಿ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಹೇಳುತ್ತಾರೆ. ಸ್ವಾಮಿ, ಸರ್ಕಾರಿ ಕಛೇರಿಗಳಲ್ಲಿ ಒಂದು ಕಛೇರಿಯಿಂದ ಇನ್ನೊಂದು ಕಛೇರಿಗೆ ಫೈಲು ಹೋಗಬೇಕಾದರೆ ೨-೩ ತಿಂಗಳು ತೆಗೆದುಕೊಳ್ಳುತ್ತದೆ ವ್ಯವಸಾಯ ಹಾಗಲ್ಲ. ವ್ಯವಸಾಯದ ವಿಚಾರದಲ್ಲಿ ತೀವ್ರವಾಗಿ ಕೂಡಲೇ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ನಾಳೆ ಅಂದರೆ, ರೈತನಿಗೆ ಆಗತಕ್ಕ ನಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಒಂದು ಉದಾಹರಣೆಯನ್ನು ಇಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಸ್ವಂತ ಜಮೀನಿನಲ್ಲಿ ಬತ್ತದ ಪೈರಿಗೆ "ಕಂದು ಜಿಗ್ಗಿ" ಹುಳ, ಇದು ಒಂದು ತರದ ರೋಗ ಕಾಣಿಸಿತು. ೨೪ ಗಂಟೆಯೊಳಗೆ ಇದನ್ನು ನಿವಾರಣೆ ಮಾಡದೇ ಇದ್ದರೆ ರಿಂಗ್-ಫಾರ್ಮೇಷನ್‌ನಲ್ಲಿ ಇದು ೫-೬ ದಿವಸದಲ್ಲಿ ಇಡೀ ಬತ್ತದ ಪೈರು ಇರತಕ್ಕ ಪ್ರದೇಶವನ್ನು ಮೂಲೋತ್ಪಾಟನೆ ಮಾಡುತ್ತದೆ. ಇಂಥ ಸಂದರ್ಭದಲ್ಲಿ ರೈತನಿಗೆ ಬೇಕಾದಂಥ ಸಲಕರಣೆಗಳನ್ನು ಒದಗಿಸಿಕೊಡದೆ ಹೋದರೆ ರೈತ ಯಾವರೀತಿ ವ್ಯವಸಾಯ ಮಾಡಬೇಕು?

ಬೆಳೆಗಳಿಗೆ ಸಿಂಪಡಿಸುವ ಔಷಧಿಗಳ ಬೆಲೆಗಳು ಕೂಡ ವರ್ಷೇ ವರ್ಷೇ ಮೇಲಕ್ಕೇರುತ್ತಿವೆ. ೪ ವರ್ಷಗಳ ಹಿಂದೆ ಕಡಿಮೆ ದರದಲ್ಲಿ ಸಿಗುತ್ತಿದ್ದಂಥ ಔಷಧಿಗಳು ಇವತ್ತು ರೈತರು ಕೊಂಡುಕೊಳ್ಳದೇ ಇರತಕ್ಕ ಮಟ್ಟಕ್ಕೇರಿವೆ. ತಾವು ರೈತರಿಗೆ ಕೊಟ್ಟರತಕ್ಕ ಬೆಂಬಲದ ಬೆಲೆಗೂ ಮತ್ತು ರೈತ ಕೊಳ್ಳುವ ಔಷಧಿ ಸಾಮಗ್ರಿಗಳಿಗೂ ಹೋಲಿಕೆಯೇ ಇಲ್ಲದಂತಾಗಿದೆ. ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು ನೀರಿನ ತೆರಿಗೆಯನ್ನು ಜಾಸ್ತಿ ಮಾಡುತ್ತೇವೆಂದು ಬೇರೆ ಹೇಳಿದ್ದಾರೆ. ಇನ್‌ಪುಟ್ ಜಾಸ್ತಿಯಾಗಿರುವುದರಿಂದ ಇವತ್ತು ನಾವು ರೈತನ ಸ್ಥಿತಿ ಬಗ್ಗೆ ತೀವ್ರವಾಗಿ ಯೋಚನೆ ಮಾಡಬೇಕು. ರೈತನಿಗೆ ಅವಶ್ಯಕವಾದಂಥ ಸಾಧನ ಸಲಕರಣೆಗಳನ್ನು ದೊರಕಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ವಿ.ಎ.ಡಿ.ಪಿ.ಗೆ ಸಬ್ಸಿಡಿ ಕೊಡತಕ್ಕದ್ದನ್ನು ತಪ್ಪಿಸಬೇಕು, ಹಿಂದೆ ಬತ್ತಕ್ಕೆ ಕನಿಷ್ಟ ಬೆಲೆ ಗೊತ್ತು ಮಾಡಲಾಯಿತು. ಆದರೆ, ಇವತ್ತು ಪ್ರತಿಯೊಂದು ಬೆಲೆಗಳು ಜಾಸ್ತಿಯಾಗಿವೆ. ಈ ದಿಸೆಯಲ್ಲಿ ಸರ್ಕಾರ ವಿಚಾರ ಮಾಡಬೇಕೆಂದು ಹೇಳುತ್ತೇನೆ. ಪ್ಲಾಂಟೇಷನ್ ಪ್ರೊಡಕ್ಷನ್ ವಿಚಾರದಲ್ಲಿ ರೈತರಿಗೆ ಅಪ್ರತ್ಯಕ್ಷವಾಗಿ ಸಬ್ಸಿಡಿ ರೂಪದಲ್ಲಿ ಉತ್ತೇಜನ ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ. ಕೃಷಿ ವಿಶ್ವವಿದ್ಯಾನಿಲಯದ ವಿಷಯ ಮೊನ್ನೆ ಮೊನ್ನೆವರೆಗೂ ಆಸಕ್ತಿ ವಿಷಯವಾಗಿ ಹಬ್ಬಿತ್ತು. ಅಲ್ಲಿನ ಉಪಾನ್ಯಾಸಕರು ಮುಷ್ಕರ ಮತ್ತು ಅನ್ನ-ಸತ್ಯಾಗ್ರಹ ಹೂಡುತ್ತಾರೆಂಬ ವಿಚಾರವನ್ನು ಪತ್ರಿಕೆಗಳಲ್ಲಿ ಬಂದಿರುವುದನ್ನು ಕೂಡ ಓದಿದ್ದೇನೆ. ವಿಶ್ವವಿದ್ಯಾನಿಲಯಗಳಲ್ಲಿ ಈರೀತಿ ಆಗಬಾರದು, ಅಲ್ಲಿನ ನೈಜ ಪರಿಸ್ಥಿತಿ ಏನೆಂಬುದು ನನಗೆ ಗೊತ್ತಿಲ್ಲ. ಇದನ್ನು ಸರಿಪಡಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ಇದೆ ಎಂದು ಕೇಳಿದ್ದೇನೆ. ಸುಮಾರು ೨೫೦ ಮಂದಿ ಹೊಸದಾಗಿ ಡಾಕ್ಟರುಗಳು ಬೇಕಾಗಿದ್ದಾರೆಂದು ಹೇಳಿದ್ದೀರಿ, ಆದ್ದರಿಂದ ಹೆಚ್ಚು ಸಂಖ್ಯೆಯಲ್ಲಿ ಬಿ.ವಿ.ಎಸ್. ಮಾಡಬೇಕೆಂದು ಹೇಳುತ್ತೇನೆ. ೧೦೦ ಮಾಡಿದರೆ ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಆಸ್ಪತ್ರೆ ಅನುಕೂಲ ಬೇಕು, ಪ್ರಯೋಗಶಾಲೆಯ ಅನುಕೂಲಗಳು ಬೇಕು. ಆದ್ದರಿಂದ ಬಿ.ವಿ.ಎಸ್.ಗಳನ್ನು ಜಾಸ್ತಿ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಸಂಶೋಧನೆ ಮತ್ತು ವಿಸ್ತರಣಾ ಕಾರ್ಯದಲ್ಲಿ ವೈಡ್‌ಗ್ಯಾಪ್ ಇರುವುದರಿಂದ ತೊಂದರೆಯಾಗುತ್ತದೆ, ಇದನ್ನು ಸರಿದೂಗಿಸಬೇಕೆಂದು ಹೇಳುತ್ತೇನೆ.

ಸ್ವಾಮಿ, ನನಗೆ ಕಾಲಾವಕಾಶ ಇಲ್ಲದೇ ಇರುವುದರಿಂದ ತೋಟಗಾರಿಕೆ ಇಲಾಖೆಯ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಗೆ ಆದಷ್ಟು ಟೆಕ್ನಿಕಲ್ ಪೀಪಲ್‌ಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಇಲಾಖೆಯ ಸಿನಿಯಾರಿಟಿ ವಿಷಯದಲ್ಲಿ ನಾವು ಕೈಹಾಕುವುದಿಲ್ಲ. ಅದು ನಿಮಗೆ ಸೇರಿದ ವಿಚಾರ. ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂತೆ ತೋಟಗಾರಿಕೆ ಅಧಿಕಾರಿಗಳು ಇದ್ದಾರೆ. ಇವರ ವಿಷಯದಲ್ಲಿ ನಾನು ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿನ ಸಾರ್ವಜನಿಕರ ಪ್ರತಿಕ್ರಿಯೆ ಏನು ಅಂದರೆ ಈ ಅಧಿಕಾರಿಯವರು ಜನಗಳ ಸಂಪರ್ಕ ಸಹಿಸುವುದಿಲ್ಲ. ಜನಗಳ ಸಂಪರ್ಕ ಇವರಿಗೆ ಬೇಕಿಲ್ಲ ಎನ್ನುವುದು ಅಲ್ಲಿನ ಸ್ಥಳೀಯ ಜನಗಳ ಅಭಿಪ್ರಾಯವಾಗಿದೆ. ಈ ವಿಚಾರದಲ್ಲಿ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಕೊನೆಯದಾಗಿ, ಭೂಸಾರ ಸಂರಕ್ಷಣೆಗಾಗಿ ನಾವು ಖರ್ಚು ಮಾಡತಕ್ಕ ಹಣ ಪೂರ್ಣವಾಗಿ ಸದ್ವಿನಿಯೋಗವಾಗುತ್ತಿಲ್ಲ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣೆ ಕಾರ್ಯದಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಅದರಲ್ಲಿಯೂ ನನ್ನ ತಾಲ್ಲೂಕಿನಲ್ಲಿ ಏನೂ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನನ್ನ ತಾಲ್ಲೂಕಿನ ೨ ಹೋಬಳಿಗಳಲ್ಲಿ ಈ ಕಾರ್ಯ ಸಾಧಿಸಬೇಕಾಗಿದೆ. ಮಾನ್ಯ ಮಂತ್ರಿಗಳ ಇದರ ಕಡೆ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಇಲಾಖೆಗೆ ಮುಂದಿನ ವರ್ಷಗಳಲ್ಲಿ ಹೆಚ್ಚಿನ ರೀತಿಯಲ್ಲಿ ರೈತರ ಸೇವೆಯನ್ನು ಮಾಡತಕ್ಕ ಅವಕಾಶ ದೊರೆಯಲಿ ಎಂದು ಆಶಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಚೌಡಯ್ಯ (ಭರಮಸಾಗರ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಇವತ್ತಿನ ದಿವಸ ಮಾನ್ಯ ಕೃಷಿ ಸಚಿವರು ಹಾಗೂ ತೋಟಗಾರಿಕೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಹಲವಾರು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಅನೇಕ ಮಿತ್ರರು ರೈತರ ಏಳಿಗೆಯ ಬಗ್ಗೆ ಮತ್ತು ಕೃಷಿರಂಗದ ಬಗ್ಗೆ ಸಾಕಷ್ಟು ತಮ್ಮ ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ವಿರೋಧಿ ಪಕ್ಷದ ಮಿತ್ರರೂ ಕೂಡ ಕೃಷಿ ಇಲಾಖೆಯು ಏನು ಸಾಧನೆ ಮಾಡಿಲ್ಲವೆಂದು ಪ್ರಾರಂಭ ಮಾಡುತ್ತಾ ಅನೇಕ ನ್ಯೂನತೆಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಅದನ್ನು ಖಂಡಿಸುತ್ತಾ ಈ ಕೃಷಿ ಇಲಾಖೆ ೧೯೫೬-೫೭ನೇ ಸಾಲಿನಿಂದ ೧೯೭೮-೭೯ನೇ ಸಾಲಿನವರೆಗೆ ಹಂತ ಹಂತವಾಗಿ ಪ್ರಗತಿಯ ಹಾದಿಯಲ್ಲಿ ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ರೈತನ ಪರವಾಗಿ ಹಾಕಿಕೊಂಡು ಬಂದಿವೆ ಎಂದು ಹೇಳಬಯಸುತ್ತೇನೆ. ಕೃಷಿ ಇಲಾಖೆಯವರು ಆಧುನಿಕ ಕೃಷಿ ಪದ್ಧತಿಗಳ ಒಂದು ಆಚರಣೆಯನ್ನು ಜಾರಿಗೆ ತಂದು ಆಹಾರೋತ್ಪಾದನೆಯಲ್ಲಿ ಬಹಳ ದಕ್ಷತೆಯಿಂದ, ಮೆಚ್ಚುಗೆಗೆ ಪಾತ್ರರಾಗತಕ್ಕ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದ್ದಾರೆ. ಉದಾಹರಣೆಗೆ ಆಹಾರಧಾನ್ಯಗಳ ಬಗ್ಗೆ ಹೇಳಬೇಕು ಅಂದರೆ ೧೯೫೬-೫೭ರಲ್ಲಿ ೩೩.೩೩ ಲಕ್ಷ ಟನ್ ಇದ್ದಂತಹ ಉತ್ಪಾದನೆಯನ್ನು ೧೯೭೮-೭೯ನೇ ಸಾಲಿನಲ್ಲಿ ಅವರ ಟಾರ್ಜೆಟ್ ಪ್ರಕಾರ ಸುಮಾರು ೭೫ ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆಯಲಿಕ್ಕೆ ಪ್ರಯತ್ನ ಮಾಡಿರುವುದನ್ನು ನೋಡಿದರೆ ಎಲ್ಲಾ ತರಹದ ವಿವಿಧ ಧಾನ್ಯಗಳನ್ನು ಬೆಳೆಯುವದರಲ್ಲಿ ಅಂದರೆ ಭತ್ತ, ಜೋಳ, ರಾಗಿ, ಎಲ್ಲದರಲ್ಲೂ ಕೂಡ ಎರಡೂವರೆಯಷ್ಟು ಹೆಚ್ಚಿಗೆ ಉತ್ಪಾದನೆ ಮಾಡಿದ್ದಾರೆ. ಇದರಲ್ಲಿ ಒಂದು ಮೆಚ್ಚಿಕೊಳ್ಳತಕ್ಕದ್ದು ಇದೆ. ನಮ್ಮ ಇಡೀ ಭಾರತದಲ್ಲಿ ಮೆಕ್ಕೆ ಜೋಳದ ಉತ್ಪಾದನೆಯಲ್ಲಿ ಕಳೆದ ಸಾಲಿನಲ್ಲಿ ಮೊದಲನೇ ಸ್ಥಾನವನ್ನು ಆಕ್ರಮಿಸುವಷ್ಟು ಮಟ್ಟಿಗೆ ಪ್ರಗತಿ ಆಗಿದೆ. ೧೯೫೬-೫೭ರಲ್ಲಿ ಕೇವಲ ೮ ಸಾವಿರ ಟನ್‌ಗಳಷ್ಟು ಇದ್ದ ಉತ್ಪಾದನೆ ೫.೪೨ ಲಕ್ಷ ಟನ್‌ಗಳಷ್ಟು ಹೆಚ್ಚಿರತಕ್ಕದ್ದು ನೋಡಿದರೆ ಸಾಕಷ್ಟು ಕಾರ್ಯಸಾಧನೆಯಾಗಿದೆ ಎಂದು ಹೇಳಬಹುದು. ಆದರೆ ರೈತನ ಒಂದು ಹಿತ ದೃಷ್ಟಿಯಿಂದ, ರೈತನ ಒಂದು ಆರ್ಥಿಕ ಪರಿಸ್ಥಿತಿ ಏನಾಗಿದೆ ಎಂದು ವಿಚಾರ ಮಾಡಿದಾಗ ನೇರವಾಗಿ ರೈತನಿಗೆ ಎಷ್ಟು ಲಾಭದಾಯಕವಾಗಿದೆ ಎಂದು ವಿಚಾರ ಮಾಡಿದರೆ ಉತ್ಪಾದನೆ ಸಾಕಷ್ಟು ಆದರೂ ಅವನ ಖರ್ಚು ವೆಚ್ಚ ಸಮತೋಲನವಾಗ ತಕ್ಕ ರೀತಿಯಲ್ಲಿ ಲಾಭದಾಯಕವಾಗಿಲ್ಲ ಎನ್ನುವುದನ್ನು ನಾವು ಗ್ರಾಮಾಂತರ ಪ್ರದೇಶದಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಕಾರಣ ದರಗಳ ಏರಿಕೆ ಜಾಸ್ತಿಯಾಗದೇ ಇರುವುದು ಮುಖ್ಯವಾದ ಕಾರಣ. ರೈತ ತಾನು ಹುಟ್ಟುವಾಗಲೇ ಸಾಲದ ಹೊರೆಯನ್ನು ಹೊತ್ತುಕೊಂಡು ಹುಟ್ಟುತ್ತಾನೆ. ಒಮ್ಮೆ ರೈತ ಸಾಲ ಮಾಡಿದ ಮೇಲೆ ಆತನು ಅದನ್ನು ತೀರಿಸಲಾರದೆ ಹಾಗೆ ಜೀವನ ಸಾಗಿಸುತ್ತಾ ಆ ಸಾಲವನ್ನು ಹಾಗೆ ಬಿಟ್ಟು ಸಾಯಬೇಕಾಗಿದೆ. ಈ ರೀತಿ ರೈತರ ವಂಶದಲ್ಲಿ ತಾನು ಮಾಡಿದಂತಹ ಸಾಲವನ್ನು ತನ್ನ ಮಕ್ಕಳಿಗೆ ಬಿಟ್ಟು ಹೋಗತಕ್ಕದನ್ನು ನಾನು ಕಂಡಿದ್ದೇನೆ. ಈ ವಿಚಾರದ ಹಿನ್ನೆಲೆಯಲ್ಲಿ ನನಗೆ ತೋಚಿದಂತಹ ಒಂದು ಸಲಹೆಯನ್ನು ಹೇಳಬೇಕು ಅಂದರೆ ಮಾನ್ಯ ಸದಸ್ಯರಾದ

ಹೆಚ್. ಡಿ. ಚೌಡಯ್ಯನವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು, ಅದನ್ನು ನಾನೂ ಕೂಡ ನೋಟ್ ಮಾಡಿಕೊಂಡಿದ್ದೇನೆ. ವ್ಯವಸಾಯ ಇಲಾಖೆ ಎಷ್ಟು ಮುಖ್ಯವೋ ಅದೇರೀತಿ ತೋಟಗಾರಿಕೆ, ರೇಷ್ಮೆ ಇಲಾಖೆ, ಇತ್ಯಾದಿ ಇಲಾಖೆಗಳು ಕೂಡ ಅಷ್ಟೇ ಮುಖ್ಯ. ಈ ಇಲಾಖೆಗಳಿಂದ ರೈತನು ದವಸ ಧಾನ್ಯಗಳನ್ನು ಬೆಳೆಯಲಿಕ್ಕೆ ಅಷ್ಟೇ ಅಲ್ಲ, ಅವನ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೂ ಅನುಕೂಲ ಇದೆ. ಇನ್ನು ಕಮರ್ಷಿಯಲ್ ಕ್ರಾಪ್ ಸಿರಿಕಲ್ಚರ್ ಅದೂ ಕೂಡ ಒಂದು ಇಲಾಖೆಯಾಗಿದೆ ಇವೊತ್ತು, ವ್ಯವಸಾಯ ಇಲಾಖೆ, ತೋಟಗಾರಿಕೆ ಇಲಾಖೆ, ಸಿರಿಕಲ್ಚರ್ ಇಲಾಖೆ, ಇವೆಲ್ಲಾ ಇಲಾಖೆಗಳಿಂದ ರೈತನಿಗೆ ಅನುಕೂಲವಾಗುವಂತೆ ಇರಬೇಕು. ಇನ್ನು ಕೋ ಆಪರೇಟೀವ್ ಡಿಪಾರ್ಟಮೆಂಟಿನಲ್ಲಿ ಹಲವಾರು ಸಂಘಗಳು ಮುಚ್ಚಿ ಹೋಗಿರುವುದಾಗಿ ತಿಳಿದಿದೆ. ಆದುದರಿಂದ ರಾಜ್ಯ ಮಟ್ಟದಲ್ಲಿ ರೈತರ ಏಳಿಗೆಗೆ ಸಂಬಂಧಪಟ್ಟ ಇಲಾಖೆಗಳು ಕೋ ಆರ್ಡಿನೇಷನ್ ಕಮಿಟಿ ರಚನೆಯಾಗಿ ಆ ಸಮಿತಿಗೆ ಕೃಷಿ ಸಚಿವರು ಅಧ್ಯಕ್ಷರಾಗಬೇಕು. ಮೂರು ನಾಲ್ಕು ತಿಂಗಳಿಗೊಂದು ಸಾರಿ ಇಡೀ ರಾಜ್ಯದ ಸಂಬಂಧಪಟ್ಟ ಇಲಾಖೆಗಳ ಯೋಜನೆಗಳೇನಿವೆ, ಆ ಯೋಜನೆಗಳಿಂದ ರೈತನಿಗೆ ಏನು ಅನುಕೂಲವಾಗುತ್ತದೆ' ಈ ಎಲ್ಲಾ ಇಲಾಖೆಗಳ ಪ್ರೋಗ್ರೆಸ್ ಯಾವರೀತಿ ಇದೆ ಅದನ್ನು ರೆವ್ಯೂ ಮಾಡತಕ್ಕದ್ದರಲ್ಲಿ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದಲ್ಲಿ ಒಂದು ಕೋ ಆರ್ಡಿನೇಷನ್ ಕಮಿಟಿ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ತರಹ ಒಂದು ದೊಡ್ಡ ಸಮಿತಿ ವ್ಯವಸ್ಥೆಯಾದರೆ, ಸಮಗ್ರ ಸಾಧನೆಗಳ ಬಗ್ಗೆ ವರದಿಯನ್ನು ಒಪ್ಪಿಸುವಾಗ ಮೂರುನಾಲ್ಕು ಇಲಾಖೆಗಳ ಪಕ್ಷಿನೋಟವನ್ನು ಒಪ್ಪಿಸಿದರೆ ಸಾಧನೆಗಳನ್ನು ಮೆಚ್ಚುವ ರೀತಿಯಲ್ಲಿ ಪ್ರಗತಿಯ ಅರಿವು ಕಾಣುತ್ತದೆ. ಇವೊತ್ತು ವ್ಯವಸಾಯ ಇಲಾಖೆಯೊಂದೇ ರೈತನಿಗೆ ಸಂಬಂಧ ಇಲ್ಲ ಇತರ ಅನೇಕ ಎಲ್ಲಾ ಇಲಾಖೆಗಳು ಸೇರಿ ರೈತನಿಗೆ ಅನುಕೂಲ ಒದಗಿಸಿಕೊಡಬೇಕಾಗಿದೆ. ಇವೊತ್ತು ಯಾವ ಯಾವ ಏರಿಯಾದಲ್ಲಿ ಯಾವ ಕ್ರಾಪ್ ಪ್ಯಾಟರನ್ ಮಾಡಬೇಕಾದರೂ ಅಲ್ಲಿರತಕ್ಕ ನ್ಯಾಚುರಲ್ ರಿಸೋರ್‌ಸಸ್ ಯಾವರೀತಿ ಇದೆ ಅದನ್ನು ಯಾವರೀತಿ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು ಎಂದು ಆಲೋಚನೆ ಮಾಡಲಿಕ್ಕೆ ಸಣ್ಣ ನೀರಾವರಿ, ದೊಡ್ಡ ನೀರಾವರಿ ಇಲಾಖೆಗಳು ಕೂಡ ರೈತನಿಗೆ ಸಹಾಯಕವಾದರೆ ರೈತನು ಪ್ರಗತಿ ಸಾಧಿಸಲಿಕ್ಕೆ ಅನುಕೂಲವಾಗುತ್ತದೆ. ಇವೊತ್ತು ಕೆಲವು ಕಡೆ ರೈತರಿಗೆ ಯಾವುದೋ ಕಾರಣದಿಂದ ಬೆಳೆ ನಷ್ಟವಾದರೆ, ಅವರನ್ನು ಹಾಗೆ ಸಂಪೂರ್ಣವಾಗಿ ಕೈಬಿಟ್ಟರೆ ತುಂಬಾ ಕಷ್ಟವಾಗುತ್ತದೆ. ಅವನು ಸಾಲ ತೀರಿಸಿಕೊಳ್ಳಲಿಕ್ಕೆ ಶಕ್ತಿ ಇಲ್ಲದಂತೆ ಆಗುತ್ತದೆ ಅವನು ಸಾವಿರಾರು ರೂಪಾಯಿ ಬಡ್ಡಿ ಕಟ್ಟಿ, ಸಾಲದ ಎರಡರಷ್ಟು ಬಡ್ಡಿ ಹಣ ಕಟ್ಟಿ ಅವನು ಪುನಃ ಮೇಲಕ್ಕೆ ಹೇಳದಂತಹ ಪರಿಸ್ಥಿತಿಗೆ ಬರುತ್ತಾನೆ. ಇವೊತ್ತು ನಮ್ಮ ದೇಶದಲ್ಲಿ ಮುಖ್ಯವಾಗಿರತಕ್ಕ ಮೂಲ ಸಂಪತ್ತು ಅಂದರೆ ನೀರು ಮತ್ತು ಮಣ್ಣು. ಆದ್ದರಿಂದ ನೀರಿನ ರಕ್ಷಣೆಯಾಗಬೇಕು, ಮತ್ತು ಮಣ್ಣಿನ ರಕ್ಷಣೆಯಾಗಬೇಕು. ಎಲ್ಲೆಲ್ಲಿ ನೀರಿನ ಸೌಕರ್ಯ ಇದೆ, ಅಲ್ಲಿ ನೀರು ಸರಿಯಾಗಿ ಉಪಯೋಗವಾಗುತ್ತಿದೆಯೋ ಅದರ ಬಗ್ಗೆ ರಿಪೋರ್ಟ್ ಕೊಡಬೇಕಾಗುತ್ತದೆ. ಇನ್ನು ಮಣ್ಣಿನ ರಕ್ಷಣೆ ಬಗೆ, ಅಂದರೆ ಸಾಯಿಲ್ ಕನ್‌ಸರ್‌ವೇಶನ್ ಬಗ್ಗೆ, ಮಣ್ಣಿನ ರಕ್ಷಣೆ ಮಾಡಬೇಕೆಂದು ಕಾರ್ಯಕ್ರಮ ಏನಿದೆ ಆ ಕಾರ್ಯಕ್ರಮದಲ್ಲಿ ಈಗಾಗಲೇ ಸಾಧಿಸಿರತಕ್ಕದ್ದನ್ನು ನೋಡಿದರೆ ಕೇವಲ ೨೪.೫ ಲಕ್ಷ ಹೆಕ್ಟೇರಷ್ಟು ಭೂಮಿ ಭಾಗದಷ್ಟು ಮಾತ್ರ ಸಾಧಿಸಿದ್ದಾರೆ. ಕಳೆದ ವರ್ಷದ ಪ್ರಗತಿಯನ್ನು ನೋಡಿದರೆ ಕೇವಲ ಇನ್‌ಕಂಪ್ಲೀಟ್ ವರ್ಕ್ಸನ್ನು ಇವರು ಪೂರೈಸಿರುವುದು ನೋಡಿದರೆ ೨.೪೩ ಲಕ್ಷ ಹೆಕ್ಟೇರ್ಸ್, ನ್ಯೂ ಬಂಡಿಂಗ್ ೦.೪೫ ಲಕ್ಷ ಹೆಕ್ಟೇರ್ಸ್.

೫.೨೦ ಪಿ.ಎಂ.

ಮೊನ್ನೆ ಈ ವಿಚಾರವನ್ನು ಇಂಡಿಯನ್ ಇನ್‌ಸ್ಟಿಟ್ಯೂಷನ್ ಆಫ್ ಮ್ಯಾನೆಜ್‌ಮೆಂಟ್‌ನ ಘಟಿಕೋತ್ಸವದಲ್ಲಿ ಕೇಂದ್ರ ಕೃಷಿ ಇಲಾಖೆಯ ಕಾರ್ಯದರ್ಶಿಯವರಾದ ಡಾ|| ಎಂ. ಎಸ್ ಸ್ವಾಮಿನಾಥನ್ ರವರು ಭಾಷಣ ಮಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ ಏನೆಂದರೆ, ನೀರು ಮತ್ತು ಮಣ್ಣು ಇವೆರಡೂ ರಾಷ್ಟ್ರದ ಮೂಲ ಸಂಪತ್ತುಗಳು ಇವುಗಳನ್ನು ಎಷ್ಟು ದಕ್ಷತೆಯಿಂದ ಬಳಸಿಕೊಳ್ಳುತ್ತಾರೋ ಅದರ ಮೇಲೆ ಆ ದೇಶದ ಅಥವಾ ಯಾವುದೇ ದೇಶದ ಆರ್ಥಿಕ ದೃಢತೆ ನೆಲಸಿದೆ ಎಂದು ಹೇಳುತ್ತಾ, ಕೆಲವು ಅಂಕಿಅಂಶಗಳನ್ನು ಹೇಳಿದ್ದಾರೆ. ದೇಶದ ಭೌಗೋಳಿಕದಲ್ಲಿ ೩೨೯ ದಶ ಲಕ್ಷ ಹೆಕ್ಟೇರು ಭೂಮಿಯಲ್ಲಿ ೮೦ ಲಕ್ಷ ದಶಲಕ್ಷ ಹೆಕ್ಟೇರುಗಳಷ್ಟು ಮಣ್ಣು ನೀರಿನಿಂದ ನಾಶವಾಗುತ್ತಿದೆ, ೫೦ ದಶಲಕ್ಷ ಹೆಕ್ಟೇರ್ರುಗಳಷ್ಟು ಭೂಮಿ ಗಾಳಿಯಿಂದ ಸವೆದು ನಾಶವಾಗುತ್ತಿದೆ. ತಜ್ಞರ ಅಭಿಪ್ರಾಯದಂತೆ ೬ ಸಾವಿರ ದಶಲಕ್ಷ

ಹೆಕ್ಟೇರುಗಳಷ್ಟು ಭೂಮಿ ಸಡಿಲವಾಗಿ ನಾನಾ ಕಾರಣಗಳಿಂದ ಸ್ಥಾನಪಲ್ಲಟವಾಗುತ್ತಿದೆ. ೭ ಲಕ್ಷ ಹೆಕ್ಟೇರುಗಳಷ್ಟು ಭೂಮಿ ಪ್ರವಾಹದಿಂದ ಕೊಚ್ಚಿ ಹೋಗುತ್ತಿದೆ. ೬ ದಶಲಕ್ಷ ಹೆಕ್ಟೇರುಗಳಷ್ಟು ಭೂಮಿ ನೀರು ಜೌಗಿನಿಂದ ನಾಶವಾಗುತ್ತಿದೆ. ಈ ಭೂಮಿಯನ್ನು ರಕ್ಷಣೆ ಮಾಡಬೇಕಾದರೆ ಕೃಷಿ ಸಚಿವರು ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡು ಸಾಯಿಲ್ ಕನ್ಸರ್ವೇಷನ್ ಕಾರ್ಯಕ್ರಮವನ್ನು ಇಟ್ಟುಕೊಂಡರೆ ಮಾತ್ರ ಈ ಭೂಮಿ ಉಳಿಯುತ್ತದೆ. ಈ ಭೂಮಿಯನ್ನು ರಕ್ಷಣೆ ಮಾಡಿಕೊಳ್ಳದೇ ಹೋದರೆ ಪ್ರತಿ ವರ್ಷ ಸಾವಿರಾರು ಹೆಕ್ಟೇರುಗಳಷ್ಟು ಭೂಮಿ ಸವೆಯುತ್ತಾ ಹೋಗಿ ಕೊನೆಗೆ ಭೂಮಿಯ ಸಾರವೆಲ್ಲಾ ಹೋಗಿಬಿಡುತ್ತದೆ. ನನ್ನ ಸ್ನೇಹಿತರೊಬ್ಬರು ಹೇಳಿದಂತೆ ಹಿಂದಿನ ಕಾಲದಲ್ಲಿ ಭೂಮಿ ಸಾರದಿಂದ ಕೂಡಿರುತ್ತಿತ್ತು ಜನಗಳು ಬಹಳ ರಸವತ್ತಾದ ಆಹಾರ ಪದಾರ್ಥವನ್ನು ಬೆಳೆಯುತ್ತಿದ್ದರು. ಆದರೆ ಇವತ್ತು ಭೂಮಿಯಲ್ಲಿ ಹಿಂದಿನ ಸಾರ ಇಲ್ಲವಾಗಿದೆ. ಈ ದಿಸೆಯಲ್ಲಿ ಒಂದು ದೊಡ್ಡ ಯೋಜನೆಯನ್ನು ಹಾಕಿಕೊಂಡು ಸವೆದು ಹೋಗುತ್ತಿರುವ ಲಕ್ಷಾಂತರ ಹೆಕ್ಟೇರುಗಳಷ್ಟು ಭೂಮಿಯನ್ನು ರಕ್ಷಣೆ ಮಾಡಿಕೊಳ್ಳುವುದು ನಮ್ಮ ಮುಖ್ಯ ಕರ್ತವ್ಯ. ತಜ್ಞರ ಅಭಿಪ್ರಾಯದ ಪ್ರಕಾರ ಒಂದು ಅಂಗುಲ ಮಣ್ಣನ್ನು ತಯಾರಿಸಬೇಕಾದರೆ ೧ ಸಾವಿರ ವರ್ಷಗಳು ಬೇಕಾಗುತ್ತದಂತೆ.

MADAM DEPUTY SPEAKER.—To-day we have to conclude the debate, and tomorrow the Hon. Minister will reply. There are 6 hon. Members who have yet to participate in the discussion. Please co-operate with the Chair.

ಶ್ರೀ ಟಿ. ಚೌಡಯ್ಯ.—ಮಾನ್ಯ ಉಪ ಸಭಾಧ್ಯಕ್ಷಿಣಿಯವರೆ, ಕೊನೆಯದಾಗಿ ಒಂದೇ ಒಂದು ಮಾತು ಹೇಳುವುದೇನೆಂದರೆ, ಕೃಷಿ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವಾಗ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ರೈತರ ಮಕ್ಕಳಿಗೆ ಶೇ ೮೦ ರಷ್ಟು ಸೀಟುಗಳನ್ನು ಕೊಡಬೇಕೆಂದು ಕೇಳಿಕೊಂಡು, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಗಂಗಾಧರನ್ (ಚಾಮರಾಜ).—ಮಾನ್ಯ ಅಧ್ಯಕ್ಷಿಣಿಯವರೆ, ಈ ಕರ್ನಾಟಕ ರಾಜ್ಯದಲ್ಲಿ ಎರಡೂವರೆ ಕೋಟಿ ಜನ ಜೀವನ ಮಾಡುವಂಥ ವ್ಯವಸಾಯ ಇಲಾಖೆಗೆ ೧೯.೫೬ ಕೋಟಿ ರೂಪಾಯಿಗಳನ್ನು ಮಂಜೂರು ಮಾಡುವ ಯೋಜನೆ ಇದೆ. ನಮ್ಮ ರಾಜ್ಯದ ಆದಾಯದಲ್ಲಿ ೮೦೯.೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಸಂದರ್ಭದಲ್ಲಿ ಈ ವ್ಯವಸಾಯ ಇಲಾಖೆಗೆ ಕೇವಲ ೧೯$\frac{1}{2}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದನ್ನು ನೋಡಿದರೆ ಪರ್ ಕ್ಯಾಪಿಟಾ ಎಕ್ಸ್‌ಪೆಂಡಿಚರ್ ಒಬ್ಬ ವ್ಯವಸಾಯಗಾರನ ತಲೆಯ ಮೇಲೆ ೮ ರೂಪಾಯಿಗಳು ಮಾತ್ರ ಎಂಬುದು ಬಹಳ ಶೋಚನೀಯ ಸಂಗತಿ. ಇಷ್ಟು ಹಣವನ್ನು ನಾವು ಖರ್ಚು ಮಾಡಿ ಎಷ್ಟು ಜನರ ಸಮಸ್ಯೆಯನ್ನು ಬಗೆಹರಿಸುತ್ತೇವೆಂಬುದನ್ನು ಯೋಚನೆ ಮಾಡಿ ನೋಡಿದರೆ ತಜ್ಞರ ಅಭಿಪ್ರಾಯದಂತೆ 67% of the work force is in agricultural activities. 60% of the State income is from agriculture. ಇದಕ್ಕಾಗಿ ಖರ್ಚು ಮಾಡುತ್ತಿರುವ ಹಣ ಕೇವಲ ೮ ಪರ್ಸೆಂಟ್ ಮಾತ್ರ ಎಂಬುದು ವಿಷಾದನೀಯವಾದುದು. ಈ ಬಾಬಿಗಾಗಿ ನಾವು ಅತ್ಯಂತ ಕಡಿಮೆ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟಾದರೂ ಸಹ ನಿಮ್ಮ ವರದಿಯಲ್ಲಿ ಬಹಳ ಅಭಿಮಾನದಿಂದ ಕೆಲವು ಮಾತನ್ನು ಏನು ಹೇಳಿದ್ದೀರಿ ಅದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ಮಾನ್ ಚೌಡಯ್ಯನವರು ಹೇಳಿದಂತೆ ೧೯೫೬–೫೭ರಲ್ಲಿ ೩೩.೫೭ ಲಕ್ಷ ಟನ್ ಆಹಾರವನ್ನು ಉತ್ಪನ್ನ ಮಾಡಿದ್ದೀರಿ. ೧೯೭೮–೭೯ರಲ್ಲಿ ೭೫.೬೮ ಲಕ್ಷ ಟನ್ ಆಹಾರವನ್ನು ಉತ್ಪನ್ನ ಮಾಡಿದ್ದೀರಿ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್‌ನವರು ಒಬ್ಬನಿಗೆ ಒಂದು ದಿವಸಕ್ಕೆ ಎಷ್ಟು ಆಹಾರಧಾನ್ಯ ಬೇಕೆಂದು ಲೆಕ್ಕ ಹಾಕಿ ನಿಗದಿ ಮಾಡಿದ್ದಾರೆ. ಇವರ ಲೆಕ್ಕಾಚಾರದ ಪ್ರಕಾರ ನಮ್ಮ ಕರ್ನಾಟಕ ಜನತೆಗೆ ಸರ್ವೇಸಾಮಾನ್ಯವಾಗಿ ಸಿಕ್ಕಬೇಕಾದ ಆಹಾರ ಸಿಕ್ಕಬೇಕಾದರೆ ೧.೯$\frac{1}{2}$ ಲಕ್ಷ ಟನ್ ಆಹಾರ ಉತ್ಪನ್ನವಾಗಬೇಕು. ಈ ರೀತಿ ಆಹಾರೋತ್ಪಾದನೆ ಮಾಡಿದರೆ ನಮ್ಮ ಜನರಿಗೆ ಭಾರತದಲ್ಲಿ ಇತರೆ ಭಾಗಗಳ ಜನರಿಗೆ ಸಿಕ್ಕುವಷ್ಟು ಆಹಾರ ನಮ್ಮ ಜನರಿಗೆ ಸಿಕ್ಕಿದಂತಾಗುತ್ತದೆ. ೧೯೭೮–೭೯ರಲ್ಲಿ ಆಹಾರೋತ್ಪಾದನೆಯಾಗಿರತಕ್ಕದ್ದು ೭೫.೬೮ ಲಕ್ಷ ಟನ್ ಅಂದರೆ ಈ ರಾಜ್ಯದಲ್ಲಿ ಇನ್ನೂ ೨೫ ಪರ್ಸೆಂಟ್ ಜನ ಉಪವಾಸ ಇದ್ದಾರೆ. ಅಂದರೆ ಇಂಡಿಯನ್ ಕೌನ್ಸಿಲ್ ಆಫ್

ಮೆಡಿಕಲ್ ರೀಸರ್ಚ್‌ನವರ ಆಧಾರದ ಪ್ರಕಾರ ತೆಗೆದುಕೊಂಡರೆ ಇನ್ನೂ ಸುಮಾರು ೬೦–೭೦ ಲಕ್ಷ ಜನರು ಉಪವಾಸ ಇದ್ದಂತಾಗುತ್ತದೆ. ಅಂದ ಮೇಲೆ ಆಹಾರೋತ್ಪಾದನೆ ಮಾಡುವ ದಿಸೆಯಲ್ಲಿ ನಾವು ಸಾಕಷ್ಟು ಸಾಧನೆಯನ್ನು ಮಾಡಿಲ್ಲ ಎಂದು ಹೇಳಬೇಕಾಗಿದೆ, ಒಬ್ಬ ಆರ್ಥಿಕ ತಜ್ಞರು ಹೇಳಿರುವ ವಿಚಾರವನ್ನು ಮಾನ್ಯ ಕೃಷಿ ಸಚಿವರು ೫ನೇ ಪುಟದಲ್ಲಿ ಈ ರೀತಿ ಹೇಳಿದ್ದಾರೆ. (Southern Economics May 1979)

"Thanks to the growth of population ; the per capita availability of foodgrains has not increase much over the decades and there is actually a sharp decline in the availability of pulses ; besides in terms of calorie intake, the per-capita food consumption in India has yet to reach an acceptable minimum levels"

ಈ ಒಂದು ಪರಿಸ್ಥಿತಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ಇದೆಯೆಂಬುದನ್ನು ವಿಧಿ ಇಲ್ಲದೆ ಹೇಳಬೇಕಾಗುತ್ತದೆ. ಇವತ್ತು ನಾವು ಖರ್ಚು ಮಾಡುತ್ತಿರುವ ಹಣ ವ್ಯವಸಾಯಗಾರನಿಗೆ ಸಿಕ್ಕಬೇಕು, ವ್ಯವಸಾಯ ಭೂಮಿಗೆ ಸಿಕ್ಕಬೇಕೆಂಬ ಸದುದ್ದೇಶದಿಂದ. ಆದರೆ ಇದು ಏನಾಗಿದೆ ಎಂದರೆ ವ್ಯವಸಾಯಗಾರನಿಗೆ ಹಣ ಸಿಕ್ಕುವ ಬದಲು ಕೃಷಿ ವ್ಯವಹಾರ ಮಾಡತಕ್ಕ ಅಧಿಕಾರಿಗಳಿಗೆ ಸಿಕ್ಕುತ್ತಿದೆ ಎಂಬ ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಮಾತನ್ನು ನಾವು ಬಾರಿ ಬಾರಿಗೂ ಹೇಳುತ್ತಲೇ ಇದ್ದೇವೆ. ನಮ್ಮಲ್ಲಿ ಒಂದು ಗಾದೆ ಇದೆ. ಏನೆಂದರೆ, "ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲ" ಎಂದು. ನಾನು ತಮಗೆ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ಅಪ್ರೋಪ್ರಿಯೇಷನ್ ಅಕೌಂಟ್ಸ್‌ನ್ನು ತೆಗೆದುಕೊಂಡು ನೋಡಿದರೆ ೧೯೭೭–೭೮ರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ವ್ಯವಸಾಯ ಇಲಾಖೆ ಅಧಿಕಾರಿಗಳ ಮುಖಾಂತರ ಖರ್ಚು ಮಾಡಿಸಿದ್ದೀರಿ. ಆದರೆ ರೈತನಿಗೆ ಎಷ್ಟು ಹಣವನ್ನು ಮುಟ್ಟಿಸಬೇಕಾಗಿತ್ತೋ ಅಷ್ಟನ್ನು ನೀವು ಮುಟ್ಟಿಸುವುದಕ್ಕಾಗಿಲ್ಲ. ನಿಮಗೆ ಗ್ರ್ಯಾಂಟ್ ಕೊಟ್ಟಿರುವುದು ೧೫,೬೦,೯೩,೦೦೦ ರೂಪಾಯಿಗಳು. ಆದರೆ ನೀವು ಖರ್ಚು ಮಾಡಿರುವುದು ೧೪,೪೫,೭೫,೭೬೫ ರೂಪಾಯಿಗಳು. ಅಂದರೆ ನಿಮಗೆ ಕೊಟ್ಟಿರುವ ಹಣವನ್ನು ಪೂರ್ತಿಯಾಗಿ ತಾವು ರೈತರಿಗೆ ಕೊಡದೆ ಅಸಮರ್ಥರಾಗಿ ಇನ್ನೂ ೧,೧೫,೨೫,೨೪೨ ರೂಪಾಯಿಗಳನ್ನು ಉಳಿಸಿ, ಇದನ್ನು ಸೇವ್ಡ್ ಮನಿ ಎಂದು ತೋರಿಸಿದ್ದೀರಿ. ತಾವು ಈ ಹಣವನ್ನು ಉಳಿಸಬೇಕಾದ ಪ್ರಮೇಯವಾದರೂ ಏನಿತ್ತು ? ಆಹಾರ ಉತ್ಪಾದನೆ ಆಗದಿರುವ ಈ ಕಾಲದಲ್ಲಿ, ಆಹಾರವೇ ಸಿಕ್ಕದಿರುವ ಈ ಕಾಲದಲ್ಲಿ ನೀವು ಹಣವನ್ನು ಏತಕ್ಕೆ ಉಳಿಸಿದಿರಿ ? ರೈತರಿಗೆ ಸಾಲ ಕೊಡುವ ಸಲುವಾಗಿ ೪೮೯ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದುದರ ಪೈಕಿ ನೀವು ೩೬೪.೪೭ ಲಕ್ಷ ರೂಪಾಯಿಗಳನ್ನು ಮಾತ್ರ ರೈತರಿಗೆ ಸಾಲ ಕೊಟ್ಟು ಇನ್ನೂ ೪೪.೫೨ ಲಕ್ಷ ರೂಪಾಯಿಗಳನ್ನು ಕೊಡದೇ ಉಳಿಸಿದ್ದೀರಿ ಶಾಸನ ಸಭೆಯಲ್ಲಿ ಸಾಕಷ್ಟು ಹಣವನ್ನು ಆಹಾರೋತ್ಪಾದನೆಗಾಗಿ ಮಂಜೂರು ಮಾಡಿದರೆ ಅದನ್ನು ಪೂರ್ಣವಾಗಿ ಸದ್ವಿನಿಯೋಗ ಮಾಡಲು ನಿಮ್ಮಿಂದ ಸಾಧ್ಯವಾಗುತ್ತಿಲ್ಲ ಎಂದು ಹೇಳ ಬೇಕಾಗಿದೆ. ಇಲ್ಲಿ ನಾವು ಎರಡು ಅಂಶಗಳನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ಮೊದಲನೆಯದು ದೇಶದ ವ್ಯವಸಾಯದ ಅಭಿವೃದ್ಧಿ. ಎರಡನೆಯದು ವ್ಯವಸಾಯಗಾರನ ಅಭಿವೃದ್ಧಿ. ಈಗಾಗಲೇ ದೇಶದ ವ್ಯವಸಾಯ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಹೇಳಿದ್ದೇನೆ. ಇನ್ನು ದೇಶದ ವ್ಯವಸಾಯಗಾರನ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ನನ್ನ ಮಾನ್ಯ ಮಿತ್ರರುಗಳು ಹೇಳಿದಂತೆ ರೈತರು ಬೆಳೆದ ಆಹಾರ ಪದಾರ್ಥಗಳಿಗೆ ಬೆಂಬಲ ಬೆಲೆ ಕೊಡುವುದು ಮತ್ತು ರೈತನ ಅಭಿವೃದ್ಧಿ ಸಾಧನೆ ವಿಷಯ. ಸ್ವಾಮಿ, ಫೆಬ್ರವರಿ ೨೪–೨೫ನೇ ತಾರೀಖಿನಂದು ನಡೆದಂಥ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಅದು ಏನೆಂದರೆ,

"It is imperative that the pricing of the agricultural products is done on the same lines as that of industry and that a programme be devised to provide cheaper inputs and impart stability to agriculture at remunerative prices.

The prices which the farmers have to pay for their inputs are rising contionously ; but the prices they got for their products are falling. This has hit the farmers very seriously. Under such a situation, inputs like credit, fertilisers agricultural implements and other essential requirements of the small and mariginal farmers should be given at substantially subsidised rates. Special emphasis should be placed on assured supply of cheap credit to millio s of small farmers'' ಎಂದು ಈ ರೀತಿ ಸಂದೇಶವನ್ನು ನಮ್ಮ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಕೊಟ್ಟರು. ಆ ವರದಿಯನ್ನು ಹುಡುಕಿ ನೋಡಿದರೂ ಆ ದಿಸೆಯಲ್ಲಿ ಪ್ರಯತ್ನ ಮಾಡಿರುವ ಒಂದು ಅಂಶವೂ ಕೂಡ ಕಾಣುತ್ತಾ ಇಲ್ಲ ಎನ್ನುವುದನ್ನು ವಿಷಾದದಿಂದ ಹೇಳಬೇಕಾಗಿದೆ.

ಶ್ರೀ ಕೆ.ಎಚ್. ರಂಗನಾಥ್.—ನಾವು ಮಾಡುತ್ತಿರುವುದು ೮ ಪರ್ಸೆಂಟ್ ಖರ್ಚು ಎಂದು ತಾವು ಹೇಳಿದಿರಿ. ಕೇಂದ್ರ ಸರ್ಕಾರದವರು ೧೨,೨೧೦.೬೩ ಕೋಟಿ ರೂಪಾಯಿಗಳನ್ನು ವ್ಯವಸಾಯಕ್ಕೆ ಆದೂ ಕೋ-ಅಪರೇಷನ್ ಇದನ್ನೆಲ್ಲ ಸೇರಿ ೧೮೧೧.೪೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರುವುದು ಎಂದರೆ ೧೮ ಪರ್ಸೆಂಟ್ ಆಯಿತು. ನಾವು ೭,೦೦ ಕೋಟಿ ರೂಪಾಯಿಗಳಲ್ಲಿ ವ್ಯವಸಾಯಕ್ಕೆ ಮಾಡಿರ ತಕ್ಕಂಥಾದ್ದು ೮ ಪರ್ಸೆಂಟ್ ಖರ್ಚು ಮಾಡಿದ್ದೇವೆಂದರೆ ಯಾವುದು ಸರಿ ಎಂದು ಕೇಳುತ್ತೇನೆ.

ಶ್ರೀ ಎಚ್. ಗಂಗಾಧರನ್.—ನೀವು ಏನು ತಪ್ಪು ಮಾಡಿದರೂ ಅವರು ತಪ್ಪು ಮಾಡಿದ್ದಾರೆಂದು ಹೇಳುವುದು ಬೇಡ. ನೀವು ಇನ್ನೊಬ್ಬರ ಕಡೆ ಬೆರಳು ತೋರಿಸುವುದು ಬೇಡ, ಕರ್ನಾಟಕ ರಾಜ್ಯದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಸಾಲದು, ಇನ್ನೂ ಹೆಚ್ಚಿನ ಉತ್ಪಾದನೆಯನ್ನು ಮಾಡಬೇಕಾಗಿತ್ತು ಎಂದು ಹೇಳುತ್ತೇನೆ.

ಶ್ರೀ ಕೆ ಎಚ್. ರಂಗನಾಥ್.—ಹೋದ ವರ್ಷ ಶ್ರೀ ಎಚ್. ಎಂ. ಪಟೇಲರವರು ಬಂದಾಗ ೪೮ ಪರ್ಸೆಂಟ್ ವ್ಯವಸಾಯಕ್ಕಾಗಿ ಹಣ ಕೊಟ್ಟಿದ್ದೇವೆಂದು ಮಾತನಾಡಿದರು. ನಾನು ಆಗ ನಮ್ಮ ಅಧಿಕಾರಿ ವರ್ಗದವರ ಜೊತೆಯಲ್ಲಿ ಮಾತನಾಡುತ್ತಾ ೪೮ ಪರ್ಸೆಂಟ್ ವ್ಯವಸಾಯಕ್ಕಾಗಿ ಕೊಟ್ಟಿರುತ್ತೇವೆಂದು ಹೇಳುತ್ತಾರೆ ೪೮ ಪರ್ಸೆಂಟ್ ಬಡ್ಜೆಟ್ ಎಂದರೆ ಕಡಿಮೇ ಏನು ಅಲ್ಲ. ಲೆಕ್ಕ ಹಾಕಿನೋಡೋಣ ವೆಂದು ಹೇಳಿದೆ. ಆದರೆ ನಮಗೆ ದೊರೆತದ್ದು............ . ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ನಾವು ಸಾಕಾದಷ್ಟು ಖರ್ಚು ಮಾಡುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಾ ಇಲ್ಲ. ಸಬ್‌ಸಿಡೈಸ್ ಮಾಡಬೇಕೆಂದು ಹೇಳಿ ಮುಖ್ಯಮಂತ್ರಿಗಳ ಭಾಷಣವನ್ನು ಉಲ್ಲೇಖ ಮಾಡಿ ಹೇಳಿದರಲ್ಲ, ಅದಕ್ಕೋಸ್ಕರ ವಾಗಿ ಹೇಳಿದೆ, ನಮ್ಮ ಮೇಲೆ ನೀವು ಹೇಳಿದಿರಿ, ನೀವು ಇನ್‌ಕಮ್ ಟ್ಯಾಕ್ಸ್ ಹಾಕಿರುತ್ತೀರಿ, ಎಕ್ಸಸ್ ಡ್ಯೂಟಿ ಹಾಕಿರುತ್ತೀರಿ, ಇವೆಲ್ಲ ರೆವಲ್ಯೂಷನ್ ಆಗಬೇಕು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೊಟ್ಟರೆ ಮಾತ್ರ ಪ್ಲಾನ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಾವು ಪ್ಲಾನಿಂಗ್ ಮಾಡುವಾಗ ಎಷ್ಟು ಕೊರತೆ ಮಾಡುತ್ತೀರಿ ಎನು ವುದನ್ನು ಗಮನದಲ್ಲಿಟ್ಟು ಕೊಳ್ಳಬೇಕು.

ಶ್ರೀ ವೈ. ರಾಮಕೃಷ್ಣ.—ಜನತಾ ಸರ್ಕಾರ ಬಂದಮೇಲೆ ಏನೂ ಕೊಟ್ಟಿಲ್ಲ ಎಂದು ಹೇಳುವವರು ತಮ್ಮ ಪಕ್ಷದ ನಾಯಕಿ ಶ್ರೀಮತಿ ಇಂಧಿರಾ ಗಾಂಧಿಯವರು ಅಧಿಕಾರದಲ್ಲಿದ್ದಾಗ ತಾವು ಎಲ್ಲಿದ್ದಿರಿ· ಅವರು ಇಷ್ಟು ಹಣವನ್ನೇನಾದರು ಕೊಟ್ಟಿದ್ದರೆ, ಅಥವಾ ಇದಕ್ಕಿಂತ ಹೆಚ್ಚಿನ ಹಣವನ್ನು ಕೊಟ್ಟಿದ್ದರು ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಶ್ರೀಮತಿ ಇಂದಿರಾ ಗಾಂಧಿಯವರು ಪ್ರೈಂ ಮಿನಿಸ್ಟರ್ ಆಗಿದ್ದಾಗ ತಾವು ಎಲ್ಲಿದ್ದಿರಿ ಎಂದರೆ, ನಾವು ಅಲ್ಲಿದ್ದೆವು. ನೀವು ಇಲ್ಲಿದ್ದಿರಿ. ಈಗ ನೀವು ಅಲ್ಲಿಗೆ ಹೋಗಿದ್ದೀರಿ. ನಾವು ಇಲ್ಲಿಗೆ ಬಂದಿದ್ದೇವೆ ಅಷ್ಟೆ. ತಾವು ಅಲ್ಲಿಗೆ ಹೋಗಿ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದ್ದೀರಿ.

ಶ್ರೀ ಎಚ್. ಗಂಗಾಧರನ್.—ನಾನು ಏನು ಹೇಳುತ್ತಿದ್ದೇನೆ ಎಂದರೆ ನಿಮ್ಮ ಅಂಕಿಅಂಶಗಳ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗಲಿಲ್ಲ. ಆಹಾರ ಧಾನ್ಯಗಳನ್ನು ಬೆಳೆಯುವುದರ ಬಗ್ಗೆ ಹೇಳುತ್ತಾ ಇದ್ದೇನೆ. ಆಹಾರ ನಮ್ಮಲ್ಲಿ ಕೇವಲ ಹೇಗೆ ಲೆಕ್ಕ ಹಾಕಿದರೂ ಕೂಡ ಒಂದೂವರೆ ಲಕ್ಷ ಟನ್ ಆಗಬೇಕಾಗಿತ್ತೆಂದು ಹೇಳುತ್ತಾ ಇದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಮೊಟ್ಟೆ, ಮಾಂಸ ಎಲ್ಲ ಬಿಟ್ಟು ಹೇಳುತ್ತಿದ್ದೀರಾ ಅಥವಾ ಅದೆಲ್ಲವನ್ನು ಸೇರಿಸಿ ಹೇಳುತ್ತಿದ್ದೀರಾ ಎಂದು ಕೇಳುತ್ತೇನೆ. ಇಲ್ಲ ಬರೆ ಧಾನ್ಯಗಳು ಮಾತ್ರವೆಂದು ಹೇಳುತ್ತೀರಾ ?

ಶ್ರೀ ಎಚ್. ಗಂಗಾಧರನ್.—ಎಲ್ಲ ಸೇರಿ ಎಂದು ಹೇಳುತ್ತೇನೆ. ತಾವು ಒಂದು ಪ್ರಶ್ನೆ ಎತ್ತಿದಿರಿ, ಕೇಂದ್ರ ಸರ್ಕಾರದವರು ೪೦ ಪರ್ಸೆಂಟ್ ಕೊಟ್ಟಿದ್ದಾರೆಂದು.

ಶ್ರೀ ಕೆ. ಎಚ್. ರಂಗನಾಥ್.—ಇನ್ನು ಕೊಟ್ಟಿಲ್ಲ. ಕೊಡುತ್ತಾರೆಂದು ಹೇಳಿದೆ.

ಶ್ರೀ ಎಚ್. ಗಂಗಾಧರನ್.—ತಾವು ಹೇಳುತ್ತಾ ಇದ್ದೀರಿ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದರೂ ಗ್ರಾಮಗಳಿಗೆ ಒಟ್ಟು ಉತ್ಪನ್ನದಲ್ಲಿ ಕೇವಲ ೧೯ ಪರ್ಸೆಂಟ್ ಖರ್ಚು ಮಾಡುತ್ತಿದ್ದೇವೆಂದು. ಈಗ ಜನತಾ ಸರ್ಕಾರ ತನ್ನ ಪಾಲಿಸಿ ಪ್ರಕಾರ ೪೦ ಪರ್ಸೆಂಟ್ ಗ್ರಾಮಗಳ ಅಭ್ಯುದಯಕ್ಕಾಗಿ ಖರ್ಚು ಮಾಡುತ್ತಿದ್ದಾರೆಂದು ಹೇಳಿದರೆ ಅದು ಬರೆ ವ್ಯವಸಾಯಕ್ಕೆ ಮಾತ್ರವಲ್ಲ ಅಗ್ರಿಕಲ್ಚರ್, ರೂರಲ್ ಡೆವಲಪ್‌ಮೆಂಟ್ ಎಲ್ಲವನ್ನೂ ಸೇರಿ ಎಂದು ತಾವು ತಿಳಿದುಕೊಳ್ಳಬೇಕು.

ಶ್ರೀ ಕೆ. ಎಚ್ ರಂಗನಾಥ್.—ಮಾಡಿಫೈ ಮಾಡಿದ್ದಾರೆಯೇ ? ಮಾನ್ಯ ಬಸಪ್ಪನವರು ಪ್ರಸ್ತಾಪ ಮಾಡುತ್ತಿರಬೇಕಾದರೆ ವಾಸ್ತವಾಂಶವನ್ನು ಹೇಳಿದರು. ತಾವು ಏತಕ್ಕೆ ಹಿಂದೆ ಮುಂದೆ ಮಾಡುತ್ತೀರಿ ?

ಶ್ರೀ ಎಚ್. ಗಂಗಾಧರನ್.—ನಿಮಗೆ ಬೇಕಾದರೆ ಅಂಕಿಅಂಶಗಳನ್ನು ಕೊಡುತ್ತೇನೆ. ಅಗ್ರಿಕಲ್ಚರ್ ಮಾತ್ರವೇ ಅಲ್ಲ ರೂರಲ್ ಡೆವಲಪ್‌ಮೆಂಟಿಗೂ ೪೦ ಪರ್ಸೆಂಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಅದರ ಜೊತೆಗೆ ಆಹಾರ ಧಾನ್ಯಗಳಿಗೆ ಒಂದು ಸಪೋರ್ಟಿಂಗ್ ಪ್ರೈಸನ್ನೂ ಕೂಡ ಕೊಡಬೇಕೆಂದು ಕೇಂದ್ರ ಸರ್ಕಾರ ಅದನ್ನು ಕೂಡ ಇದರಲ್ಲಿ ಅಳವಡಿಸಬೇಕೆಂದು ಹೇಳಿದ್ದಾರೆ. ಶಾಸನ ಸಭೆಯ ಸದಸ್ಯನಾಗಿ ಒಂದು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾವು ವ್ಯವಸಾಯ ಮಾಡುವ ರೀತಿ, ಬೆಳೆ ಬೆಳೆಯುವುದನ್ನು ಉದಾಹರಣೆಗೆ ಹೇಳುವುದಾದರೆ ಹೈಬ್ರಿಡ್ ಜವಾರ್ ಬೆಳೆಯಲ್ಲಿ ಜೋಳವನ್ನು ಮಾತ್ರ ಲೆಕ್ಕ ಹಾಕುವುದಿಲ್ಲ. ಹೈಬ್ರಿಡ್ ಜೋಳದ ಕಡ್ಡಿಯನ್ನು ಸಿಗರೇಟ್ ಕಾಗದ ಮಾಡುವುದಕ್ಕೆ ಬಳಸಬೇಕು ಎಂದು ಮೈಸೂರು ಜಿಲ್ಲೆಯಲ್ಲಿ ಕಾರ್ಖಾನೆಯನ್ನೂ ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಲಾಗಿತ್ತು. ಅಲ್ಲಿ ಹೈಬ್ರಿಡ್ ಜೋಳವನ್ನು ಜಾಸ್ತಿ ಬೆಳೆಯುವುದರಿಂದ ಅಲ್ಲಿ ಒಂದು ಕಾರ್ಖಾನೆಯನ್ನು ಮಾಡಿ ಅದರ ಬಳಕೆಯನ್ನು ಹೆಚ್ಚಾಗಿ ಮಾಡಬೇಕು ಎಂದು ಯೋಚಿಸಲಾಗಿತ್ತು. ಹೈಬ್ರಿಡ್ ಜೋಳದ ಕಡ್ಡಿ, ಬೇರು, ನಾರು ಕೂಡ ಬೇಕಾಗುವಂಥದ್ದು. ಆದ್ದರಿಂದ ಈ ಬೆಳೆಗಾರರಿಗೆ ಒಂದು ಸರಿಯಾದ ಬೆಲೆ ಸಿಗುವಂತೆ ವ್ಯವಸ್ಥೆ ಮಾಡಬೇಕಾದ್ದು ಕೃಷಿ ಇಲಾಖೆಯ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಈಗ ರಾಗಿಗೆ ನಾವು ಅದನ್ನು ತಿನ್ನುವುದರಿಂದ ಹೆಚ್ಚು ಬೆಲೆ ಬರಲಿಲ್ಲ. ನಾವು ರಾಗಿ ಮಾಲ್ಟ್ ಮಾಡಿ ಅದನ್ನು ವಿದೇಶಕ್ಕೆ ಕಳಿಸಿದಾಗ ಅದರಿಂದ ಹೆಚ್ಚು ಆದಾಯ ಬಂತು. ಅದೇ ರೀತಿ ಜೋಳವನ್ನೂ ಬಳಕೆ ಮಾಡಿ ಜೋಳಕ್ಕೂ ಉತ್ತಮ ಬೆಲೆ ಬರುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ನೀಡುತ್ತೇನೆ. ಇವತ್ತು ರಾಜಸ್ಥಾನದಲ್ಲಿ ರಾಜಸ್ಥಾನ ಸರ್ಕಾರದವರು ಕ್ರಾಪ್ ಇನ್‌ಷೂರೆನ್ಸ್ ಇಂಟ್ರಡ್ಯೂಸ್ ಮಾಡಿದ್ದಾರೆ. ರಾಜಸ್ಥಾನದ ಹಣಕಾಸಿನ ಮಂತ್ರಿಗಳ ಬಜೆಟ್ ಭಾಷಣದಲ್ಲಿ ಅವರು ಈ ವಿಷಯವನ್ನು ಹೇಳಿದ್ದಾರೆ.

ಒಬ್ಬ ಸದಸ್ಯರು.—ಅಲ್ಲಿ ಯಾವ ಪಕ್ಷ ಇದೆ ?

ಎಚ್. ಗಂಗಾಧರನ್.—ಪಕ್ಷಕ್ಕಿಂತ ಹೊಟ್ಟೆ ಸಮಸ್ಯೆ ಮುಖ್ಯ. ನಮ್ಮಲ್ಲಿಯೂ ಕೂಡ ರೈತರು ವ್ಯವಸಾಯ ಕ್ಷೇತ್ರದಲ್ಲಿ ತೊಂದರೆಗೆ ಈಡಾಗಿರುವುದರಿಂದ ಇಲ್ಲಿಯೂ ಅದೇ ರೀತಿ ಕ್ರಾಪ್ ಇನ್‌ಷೂರೆನ್ಸನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಖ್ಯವಾದ ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಸರ್ಕಾರದವರು ಶ್ವೇತ ಪತ್ರವನ್ನು ಕೊಟ್ಟಿದ್ದಾರೆ. ಅಲ್ಲಿ ನಷ್ಟ ಆಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಅದರ ತಮ್ಮನ್ನು ಅಧಿಕಾರಿಗಳು ಹೇಗೆ ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂಬುದನ್ನು ತಾವು ಗಮನಿಸಬೇಕು. ತಮ್ಮ ಶ್ವೇತ ಪತ್ರದಲ್ಲಿ ಹೇಳಿದ್ದೀರಿ, ೧೯೭೦-೭೧ರಲ್ಲಿ ೨.೨೪ ಲಕ್ಷ ರೂಪಾಯಿ ನಷ್ಟ ಆಗಿದೆ, ೧೯೭೧-೭೨ರಲ್ಲಿ ೨.೭೩ ಲಕ್ಷ ರೂಪಾಯಿ, ೧೯೭೨-೭೩ರಲ್ಲಿ ೫.೯೧ ಲಕ್ಷ ರೂಪಾಯಿ ನಷ್ಟ

ವಾಗಿದೆ ಎಂದು ವರದಿಯಲ್ಲಿ ಕೊಟ್ಟಿದ್ದೀರಿ. ವಾಸ್ತವವಾಗಿ ೧೯೭೧–೭೨ರಲ್ಲಿ ೪,೫೨,೫೯೦ ರೂಪಾಯಿ ಲಾಭ ಬಂದಿದೆ. ೧೯೭೨–೭೩ರಲ್ಲಿ ೧,೫೭,೫೩೭ ರೂಪಾಯಿ ಲಾಭ ಬಂದಿದೆ. ಇಷ್ಟು ಲಾಭ ಬಂದಿದ್ದರೂ ಕೂಡ ಶ್ವೇತ ಪತ್ರದಲ್ಲಿ ನಷ್ಟ ಆಗಿದೆ ಎಂದು ತೋರಿಸಿದ್ದೀರಿ. ನಿಜವಾಗಿಯೂ ಇದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್.––ಮಾನ್ಯ ಸದಸ್ಯರು ತಮ್ಮ ಬಳಿ ಇರುವ ವಿವರಗಳನ್ನು ದಯವಿಟ್ಟು ನನಗೆ ಕಳಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಗಂಗಾಧರನ್.––ಕಳಿಸಿಕೊಡುತ್ತೇನೆ. ಇದರ ಬಗ್ಗೆ ಇನ್ನೊಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಹೇಗೆ ನಷ್ಟವಾಗಿದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ ಅಲ್ಲಿ ಯಾವ ರೀತಿ ವ್ಯವಹಾರ ಮಾಡಿದ್ದಾರೆಂದರೆ ೧೯೭೨–೭೩ರಿಂದ ೧೯೭೬–೭೭ರವರೆಗೆ ತಮಗೆ ಮೆಷೀನರೀಸ್ ಪರ್ಚೇಸ್ ಮಾಡಿದ್ದಾರಲ್ಲ ಅದರಲ್ಲಿ ೧,೨೪,೯೪,೭೬೪ ರೂಪಾಯಿನ ಅನಾವಶ್ಯಕವಾಗಿರತಕ್ಕದ್ದನ್ನು ಕೊಂಡುಕೊಂಡಿದ್ದಾರೆ. ಆದರೆ ಅವನ್ನು ಯಾತಕ್ಕೆ ಕೊಂಡುಕೊಂಡರು ಎಂಬುದನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುವುದಿಲ್ಲ. ಇದನ್ನು ತಾವೇ ಗಮನಿಸಿ ಅಲ್ಲಿ ಏನು ಅನ್ಯಾಯ ನಡೆದಿದೆ ಎಂಬುದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೀಜದ ವ್ಯವಹಾರದಲ್ಲಿ ಕೂಡ ೨೪,೯೨,೦೫೪ ರೂಪಾಯಿಗಳ ದುರ್ವಿನಿಯೋಗ ಆಗಿದೆ. ಅದೂ ಕೂಡ ಲೆಕ್ಕದಲ್ಲಿ ಇದೆ. ಇದನ್ನೂ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಸಣ್ಣಪುಟ್ಟ, ಕೆಲಸಕ್ಕೆ ಬಾರದ ವಿಚಾರಗಳನ್ನು ನಾನು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮುಖ್ಯವಾದ ವಿಚಾರವನ್ನು ಮಾತ್ರ ನಾನು ಇಲ್ಲಿ ಪ್ರಸ್ತಾಪ ಹೊಡುತ್ತಿದ್ದೇನೆ. ಎರಡೂವರೆ ಲಕ್ಷ ರೂಪಾಯಿ ಬೆಲೆ ಬಾಳತಕ್ಕ ಜಿಂಕ್‌ಶೀಟ್ ತಗಡುಗಳನ್ನು ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಕೊಟ್ಟಿದ್ದಾರೆ. ಆದರೆ ಅದರ ಹಣ ಇನ್ನೂ ವಸೂಲಾಗಿಲ್ಲ. ಪ್ರತಿ ತಿಂಗಳು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಅಧ್ಯಕ್ಷರು ಸಾವಿರ ರೂಪಾಯಿಯನ್ನು extra expenditure ಎಂದು ಖರ್ಚು ಮಾಡುತ್ತಿದ್ದಾರೆ. ಅದಕ್ಕೂ ಕೂಡ ಬಿಲ್ ಇದೆ.

ಶ್ರೀ ಕೆ. ಹೆಚ್. ರಂಗನಾಥ್.––ದಯಮಾಡಿ ಮಾನ್ಯ ಸದಸ್ಯರು ನಾನು ಹೇಳುವುದನ್ನು ಕೇಳಬೇಕು. ಕಂಪನಿಗಳಲ್ಲಿ ಖರ್ಚು ಮಾಡುವುದಕ್ಕೆ ಅವಕಾಶ ಇದೆ. ಆದರೆ ಪ್ರತಿ ತಿಂಗಳೂ ೧೦೦೦ ರೂಪಾಯಿ ಖರ್ಚು ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ಆ ರೀತಿ ತಮಗೆ ಯಾರಾದರೂ ಇನ್‌ಫರ್ಮೇಷನ್ ಕೊಟ್ಟಿದ್ದರೆ ಅದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ನಿಮ್ಮ ಹತ್ತಿರ ಬಿಲ್ ಇರಬಹುದು. ಹಿಂದೆ ಮೇಲ್ಮನೆಯಲ್ಲಿ ಭಾಷಣ ಮಾಡುವಾಗಲೂ ಮಾನ್ಯ ರಘುಪತಿಯವರು ಒಂದು ಬಿಲ್ಲನ್ನು ಕೊಟ್ಟಿದ್ದರು, ಅದೇ ರೀತಿ ನಿಮ್ಮ ಹತ್ತಿರವೂ ಇರಬಹುದು, ಒಪ್ಪಿಕೊಳ್ಳುತ್ತೇನೆ. ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ವಿಚಾರವಲ್ಲಿ ಮುಚ್ಚುಮರೆ ಮಾಡುವಂಥ ಪ್ರಶ್ನೆಯೇ ಇಲ್ಲ. ನಾನೂ ಕೂಡ ಒಂದು ಅಭಿಪ್ರಾಯಕ್ಕೆ ಬಂದಿದ್ದೇನೆ. ಅದು ಏನು ಎಂಬುದನ್ನು ನಾಳೆ ನಾನು ಉತ್ತರ ಕೊಡುವಾಗ ಹೇಳುತ್ತೇನೆ. ಆದರೆ ಪ್ರತಿ ತಿಂಗಳೂ ಆ ಅಧ್ಯಕ್ಷರು ಅಷ್ಟು ಹಣ ಖರ್ಚು ಮಾಡುತ್ತಿದ್ದಾರೆಂದು ಯಾರಾದರು ವಿಷಯ ತಿಳಿಸಿದ್ದರೆ ಅದು ನನಗೆ ಗೊತ್ತಿದ್ದ ಹಾಗೆ ಸರಿಯಲ್ಲ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಮ್ಮ ಹತ್ತಿರ ಏನಾದರೂ ವಿವರಗಳಿದ್ದರೆ ಅದನ್ನು ನನಗೆ ಒದಗಿಸಿದರೆ ಬಹಳ ಸಂತೋಷ. ನಾನೂ ಕೂಡ ಹೆಚ್ಚುವರಿ ಖರ್ಚು ಮಾಡುವುದನ್ನು ಒಪ್ಪುವುದಿಲ್ಲ. ಈ ಸದನವೂ ಒಪ್ಪುವುದಿಲ್ಲ. ಪ್ರತಿ ತಿಂಗಳೂ ಅಷ್ಟು ಹಣ ಅವರು ಖರ್ಚು ಮಾಡುತ್ತಿದ್ದಾರೆ ಎಂದು ಹೇಳುವುದು ಅಷ್ಟು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರೀ ಹೆಚ್. ಗಂಗಾಧರನ್.––ಒಟ್ಟಿನಲ್ಲಿ ಸಾಕಷ್ಟು ಹಣ ದುರ್ವಿನಿಯೋಗವಾಗಿದೆ ಎಂಬುದನ್ನು ತಾವೂ ಒಪ್ಪುತ್ತೀರಿ. ಈಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅಧೀನದಲ್ಲಿ ನಾಲ್ಕೈದು ಕಾರ್ಪೊರೇಷನ್‌ಗಳಿವೆ ಕಾರ್ಪೊರೇಷನ್‌ಗಳು ಎಷ್ಟೇ ಇರಲಿ ಬಜೆಟ್ ಅಧಿವೇಶನದ ಹೊತ್ತಿಗೆ ಎಲ್ಲಾ ಕಾರ್ಪೊರೇಷನ್ನಿನವರೂ ತಮ್ಮ ಆಡಿಟ್ ಮಾಡಿಸಿರುವ ಲೆಕ್ಕಪತ್ರಗಳನ್ನು ಸಭೆಗೆ ಕೊಡುವಂತೆ ಏರ್ಪಾಡು ಮಾಡಿದರೆ ಅವರ ಬಂಡವಾಳ ಏನು ಎಂಬುದು ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಕಾರ್ಪೊರೇಷನ್‌ಗಳಿಗೆ ಸಂಬಂಧಪಟ್ಟ ಕಂಪನಿ ಆಕ್ಟ್‌ನಲ್ಲಿ ಬದಲಾವಣೆ ಮಾಡಿ ಕಾಲಕ್ಕೆ ಸರಿಯಾಗಿ ಆಡಿಟ್ ಮಾಡಿಸಿರುವ ಲೆಕ್ಕಪತ್ರದ ವರದಿಯನ್ನು ಮಾಡಿ ಕಳಿಸದೇ ಹೋದರೆ ಕಂಪನಿ ಆಕ್ಟ್ ಪ್ರಕಾರ ಅಧಿಕಾರಿಗಳು ಶಿಕ್ಷಾರ್ಹರಾಗುತ್ತಾರೆ ಎಂದು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಅಧ್ಯಕ್ಷರು.---ನೀವು ನಿಮ್ಮ ಭಾಷಣವನ್ನು ಮುಗಿಸಿ. ಇಲ್ಲದಿದ್ದರೆ ನಾನು ಬೇರೆಯವರ ಹೆಸರನ್ನು ಕರೆಯಬೇಕಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.--ಇನ್ನು ತೋಟಗಾರಿಕೆ ಬಗ್ಗೆ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಇಲ್ಲಿ ಜಮ್ಮು ಮತ್ತು ಕಾಶ್ಮೀರದ ಮಂತ್ರಿಗಳ ಭಾಷಣ ಇದೆ. ಇದರಲ್ಲಿ ಅವರು ಒಂದು ಮಾತು ಹೇಳಿದ್ದಾರೆ, ಹಣ್ಣುಗಳ ರಫ್ತಿನಿಂದ ವರ್ಷಕ್ಕೆ ೨ ಕೋಟಿ ರೂಪಾಯಿ ಸಂಪಾದನೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಿ ಬೆಳೆಯತಕ್ಕ ಎಲ್ಲಾ ಹಣ್ಣುಗಳನ್ನು ನಾವೂ ಬೆಳೆಯುತ್ತೇವೆ. ಅವರೆ ಅದೇ ರೀತಿ ನಾವೂ ಯಾತಕ್ಕೆ ರಫ್ತು ಮಾಡಿ ಹಣ ಸಂಪಾದನೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬಾರದು ? ಅವರು ವಿಶ್ವಬ್ಯಾಂಕಿನ ನೆರವಿನಿಂದ ಹಾರ್ಟಿಕಲ್ಚರಲ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಅದೇ ರೀತಿ ನಮ್ಮಲ್ಲೂ ಮಾಡಿ ನಾವೂ ಸಾಕಷ್ಟು ಹಣ್ಣುಗಳನ್ನು ಬೆಳೆಯುತ್ತಿರುವುದರಿಂದ ಇದನ್ನು ಹೊರದೇಶಕ್ಕೆ ಕಳಿಸಿ ಹೆಚ್ಚು ಆದಾಯವನ್ನು ಸಂಪಾದನೆ ಮಾಡುವುದಕ್ಕೆ ವಿಶ್ವ ಬ್ಯಾಂಕ್ ನೆರವಿನಿಂದ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರು ಗಂಟೆ ಬಾರಿಸಿ ಭಾಷಣವನ್ನು ನಿಲ್ಲಿಸಬೇಕೆಂದು ಸೂಚಿಸಿದರು)

ಶ್ರೀ ಹೆಚ್. ಗಂಗಾಧರನ್.--ನಮಗೆ ಬಾರಿಸುವ ಗಂಟೆಯನ್ನು ಬೇರೆಯವರಿಗೆ ಯಾತಕ್ಕೆ ಬಾರಿಸಂವುದಿಲ್ಲ. ನಾನೂ ಬೇರೆಯವರಂತೆಯೇ ಸದಸ್ಯನಾಗಿದ್ದೇನೆ. ಬೇರೆಯವರಿಗೆ ಎಷ್ಟು ಅವಕಾಶವನ್ನು ಕೊಡುತ್ತೀರೋ ಅಷ್ಟೇ ಅವಕಾಶವನ್ನು ನನಗೂ ಕೊಡಬೇಕು You cannot disc iminate in the allotmen of time. Time must be allotted e qually among all the members who want to speak. The speaker is bound by rules and th rules do not say that members must be discriminated against in th allotment of tim. Otherwise, w y should I come here ?

MR. SPEAKER.--You have been allotted time just like any other member. I have been cautioning you twice or thrice.

SRI H. GANGADHARAN. Why should I be given less time ?

MR. SPEAKER.—You have taken more than the time allotted to you.

SRI H. GANGADHARAN.—Distribute t e available time equally among the members. We do not bother whether it is five or ten minutes, and we will express our views within that time. I have read the procedure in this House and in Parliament and they do not speak of any such discrimina ion.

ಅಧ್ಯಕ್ಷರು.--ಹೋಗಲಿ ಬೇಗ ಮುಗಿಸಿ.

ಶ್ರೀಹೆಚ್. ಗಂಗಾಧರನ್.--ನಾವೂ ಕೂಡ ಹಲವಾರು ವಿಷಯಗಳನ್ನು ಅಧ್ಯಯನ ಮಾಡಿಕೊಂಡು ಮಾತನಾಡಬೇಕೆಂದು ಬಂದಿರುತ್ತೇವೆ. ಇಲ್ಲಿ ಸದಸ್ಯರು ಮಾತನಾಡುವುದಕ್ಕೆ ಸರಿಯಾಗಿ ಎಲ್ಲರಿಗೂ ಅವಕಾಶವನ್ನು ಕೊಡಬೇಕು. ಎಲ್ಲ ಸದಸ್ಯರಿಗೂ ಒಂದೇ ರೀತಿ ಸಮಯವನ್ನು ನಿಗದಿ ಮಾಡಿ ಈ ಬಗ್ಗೆ ಒಂದು ನಿಯಮವನ್ನು ಅಳವಡಿಸಿ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೬.೦೦ ಪಿ.ಎಂ.

† ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಸಭಾ ಅಧ್ಯಕ್ಷರೇ, ಮಾನ್ಯ ಒಕ್ಕಲುತನ ಸಚಿವರು ಮಂಡಿಸಿದ ಬೇಡಿಕೆಯನ್ನು ಹಾಗೂ ಮಾನ್ಯ ತೋಟಗಾರಿಕೆ ಇಲಾಖೆಯ ಸಚಿವರು ಮಂಡಿಸಿರ ಇನ್ನೊಂದು ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಕ್ಕಲುತನಕ್ಕೆ ಸಂಬಂಧಪಟ್ಟಂತೆ ಎರಡು

ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಆಹಾರ ಸ್ವಾವಲಂಬನೆಯ ವಿಚಾರದಲ್ಲಿ ನಮ್ಮ ಸರ್ಕಾರದ ಅಂಕಿ ಅಂಶಗಳನ್ನು ನೋಡಿದಾಗ ಇದರ ಬಗ್ಗೆ ನಾವು ಹೆಚ್ಚು ಗಮನ ಹರಿಸಿದ್ದೇವೆ, ಪ್ರಗತಿದಾಯಕ ಮಟ್ಟದಲ್ಲಿದ್ದೇವೆಂಬುದು ಅರ್ಥವಾಗುತ್ತದೆ. ಕ್ರಾಪ್ ಪ್ರೊಡಕ್ಷನ್ ಆಗಲಿ, ಮತ್ತ್ಯಾವುದೇ ವಿಚಾರದಲ್ಲಿ ಕಳೆದ ಕೆಲವು ವರ್ಷಗಳಿಂದ ನಾವು ಸ್ವಾವಲಂಬಿಯಾಗಿದ್ದೇವೆ ಎನ್ನುವ ಮಾತನ್ನು ಬಹಳ ಧೈರ್ಯದಿಂದ ಹೇಳಬೇಕಾಗಿದೆ. ಈ ವಿಚಾರವನ್ನು ಹೇಳುತ್ತಿರುವಾಗ ಜನ ಜೀವನದ ಮಟ್ಟದ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದು ಕೊಳ್ಳಬೇಕಾಗಿದೆ. ಚೀನಾ ದೇಶದ ಪರಿಸ್ಥಿತಿಯನ್ನೂ ಕೂಡ ನಾನು ಗಮನಕ್ಕೆ ತೆಗೆದು ಕೊಳ್ಳಬೇಕಾಗಿದೆ. ಚೀನಾ ದೇಶದಲ್ಲಿಯೂ ಕೂಡ ಇಂತಹ ಆಹಾರ ಸಮಸ್ಯೆ ಬಹಳ ಗಂಭೀರವಾಗಿ ಇರತಕ್ಕಂತಹ ಸನ್ನಿವೇಶದಲ್ಲಿ ಅಲ್ಲಿನ ಮಾವೋತ್ಸೆ ತುಂಗ್‌ರವರು ೮ ಪಾಯಿಂಟ್ ಪ್ರೋಗ್ರಾಂ ಹಾಕಿಕೊಂಡು ಚೀನಾದಲ್ಲಿನ ಆಹಾರದ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಕೂಡ ವಿಲೇಜ್ ಪ್ರೊಡಕ್ಷನ್ ಪ್ಲಾಂಟ್ ನೋನ್ ಹ್ಯಾಸ್ ವಿಲೇಜ್ ಪ್ಯಾಕೇಜ್ ಪ್ರೋಗ್ರಾಂ ಎಂಬ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ದೇಶದಲ್ಲಿ ಒಕ್ಕಲುತನದಲ್ಲಿ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಿದ್ದೇವೆ ಎಂಬ ಮಾತನ್ನು ಹೇಳಬೇಕಾಗಿದೆ. ಈ ದೇಶದಲ್ಲಿ ನಮ್ಮ ಸರ್ಕಾರ ಕೂಡ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಆಹಾರದಲ್ಲಿ ಒಂದು ಉತ್ತಮವಾದ ಸಾಧನೆಯನ್ನು ನಾವು ಮಾಡಿದ್ದೇವೆ. ಅದೇ ಒಂದು ಕಾರ್ಯಕ್ರಮಗಳನ್ನು ನೋಡುತ್ತಿರುವಾಗ ಇನ್‌ಟೆನ್ಸೀವ್ ಅಗ್ರಿಕಲ್‌ಚರಲ್ ಏರಿಯಾ, ಫಾರ್ಮರ್ಸ್ ಇನ್‌ಫರ್ಮೇಷನ್ ಪ್ರೋಗ್ರಾಂ, ಇಂತಹ ಅನೇಕ ಯೋಜನೆಯನ್ನು ನಮ್ಮ ಒಕ್ಕಲುತನದಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಹಾಕಿಕೊಂಡು ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸದೆ ಹೋದರೆ ತಪ್ಪಾದೀತು; ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಪ್ರೋಗ್ರಾಂನ್ನೂ ಕೂಡ ಹಾಕಿಕೊಂಡು ಗ್ರಾಮದಲ್ಲಿರುವ ರೈತರ ಏಳಿಗೆಯ ಬಗ್ಗೆ ಹೆಚ್ಚಿನ ರೀತಿಯಲ್ಲಿ ನೋಡಿಕೊಳ್ಳುವ ದೃಷ್ಟಿಯಿಂದ ಈ ಒಂದು ಯೋಜನೆಯನ್ನೂ ಕೂಡ ಹಾಕಿಕೊಂಡಿದ್ದೀರಿ. ಇದನ್ನು ನೋಡಿದರೆ ಇದು ಒಂದು ಸ್ವಾಗತಾರ್ಹವಾದ ವಿಚಾರ. ಎಜುಕೇಷನ್ ಪ್ರಶ್ನೆಯಲ್ಲೂ ಒಕ್ಕಲುತನದ ಪ್ರಚಾರವನ್ನು ಸಹಿತ ಹೆಚ್ಚಿಗೆ ಹಾಕಿಕೊಂಡು ಕೆಲಸ ಮಾಡುತ್ತಿದ್ದೀರಿ. ಈ ವಿಚಾರಗಳನ್ನು ಹೇಳುತ್ತಿರುವಾಗ ನನ್ನ ತಾಲ್ಲೂಕಿನ ಸಮಸ್ಯೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ಒಂದು ಬಾದಾಮಿ ತಾಲ್ಲೂಕು ಬರಗಾಲದ ಬವಣೆಗೆ ತುತ್ತಾಗಿ ಸಂಕಟ ಪಡುತ್ತಿರತಕ್ಕಂತಹ ಒಂದು ಪ್ರದೇಶ. ಬರಗಾಲಕ್ಕೆ ತುತ್ತಾಗಿರುವಂತಹ ಪ್ರದೇಶ ಒಂದು ಕಡೆಯಾದರೆ, ಹೆಚ್ಚಿಗೆ ಮಳೆಯಾಗಿ ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿರತಕ್ಕಂತಹ ಪ್ರದೇಶ ಒಂದು ಕಡೆ. ನಮ್ಮ ತಾಲ್ಲೂಕಿನಲ್ಲಿ ಸೌಳು ಹತ್ತಿದ ಭೂಮಿ ಸುಮಾರು ಒಂದು ಸಾವಿರ ಎಕರೆ ಜಮೀನು ಇದೆ. ಇದು ಸುಮಾರು ೨೦ ವರ್ಷಗಳಿಂದಲೂ ಇದೆ. ಇದಕ್ಕಾಗಿ ನಾವು ಪ್ರತಿ ವರ್ಷಕ್ಕೂ ೨೦೦ ರೂಪಾಯಿಗಳನ್ನು ಒಂದು ಎಕರೆಗೆ ಖರ್ಚು ಮಾಡಿ ಆ ಸೌಳನ್ನು ತೆಗೆಸಬೇಕಾಗಿದೆ. ಕಳೆದ ೨೦ ವರ್ಷಗಳಿಂದಲೂ ಇರುವುದರಿಂದ ನಾವು ಸರ್ವೇ ಸಾಮಾನ್ಯವಾಗಿ ೨೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಸಮಸ್ಯೆಯನ್ನು ಅಂದರೆ ಸೌಳು ಹತ್ತಿದ ಜಮೀನನ್ನು ನಿವಾರಣೆ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಬಿನ್ನವಿಸಿಕೊಳ್ಳುತ್ತೇನೆ. ಈ ಸಮಸ್ಯೆ ಒಂದು ಕಡೆಯಾದರೆ, ಬಾದಾಮಿ ತಾಲ್ಲೂಕಿನಲ್ಲಿ ಸಾಕಷ್ಟು ಮಳೆಯಾಗಿ ರೈತನು ಆನಂದದಿಂದ ತಾನು ಬೆಳೆದ ಬೆಳೆಯನ್ನು ನೋಡುತ್ತಿರುವಾಗ ಆ ಬೆಳೆ ಅನೇಕ ರೋಗಗಳಿಗೆ ತುತ್ತಾಗಿ ಇಡೀ ಬೆಳೆಯೆಲ್ಲಾ ನಾಶವಾಗುತ್ತಿವೆ. ಇದು ಒಂದು ಸಾರಿಯಲ್ಲ ಪ್ರತಿ ವರ್ಷ ಕೂಡ ಈ ರೋಗ ತಪ್ಪಿದ್ದಲ್ಲ. ಇದೂ ಅಲ್ಲದೆ ಪ್ರವಾಹ ಪೀಡಿತದಿಂದಾಗಿ ಬಾದಾಮಿ ತಾಲ್ಲೂಕಿನ ಅನೇಕ ಹಳ್ಳಿಗಳು ಹಾಳಾಗಿವೆ. ಮಲಪ್ರಭಾ ಯೋಜನೆಯಲ್ಲಿ ನವಿಲು ತೀರ್ಥ ಎಂಬಲ್ಲಿರತಕ್ಕಂತಹ ನೀರಾವರಿ ಇಲಾಖೆಯವರು ಅವರ ಮನಸ್ಸಿಗೆ ಯಾವಾಗ ನೀರು ಬಿಡಬೇಕೆಂದು ಮನಸ್ಸು ಬರುತ್ತದೋ ಆವಾಗ ಕಾಲುವೆಯಲ್ಲಿ ಹೆಚ್ಚಿಗೆ ನೀರನ್ನು ಬಿಟ್ಟುಬಿಡುತ್ತಾರೆ. ಈ ರೀತಿ ಹೆಚ್ಚಿಗೆ ನೀರನ್ನು ಬಿಟ್ಟುಬಿಡುವುದರಿಂದ ಪಕ್ಕದಲ್ಲಿರುವ ಜಮೀನು ಹಾಳಾಗುತ್ತವೆ. ಇದರಿಂದ ಅಲ್ಲಿರತಕ್ಕಂತಹ ಸುಮಾರು ೧೦-೧೨ ಹಳ್ಳಿಗಳಲ್ಲಿರತಕ್ಕಂತಹ ಜನಗಳಿಗೆ ತಮ್ಮ ಜೀವನ ಹೇಗೆ ಮಾಡಬೇಕೆಂಬ ಭಯದ ವಾತಾವರಣದಲ್ಲಿದ್ದಾರೆ. ನಮ್ಮ ಬಾದಾಮಿ ತಾಲ್ಲೂಕಿನಲ್ಲಿ ಎದುರಿಸತಕ್ಕಂತಹ ಎಲ್ಲಾ ಹಾನಿಗಳ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಗಮನಹರಿಸಿ ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಬಾದಾಮಿ ತಾಲ್ಲೂಕಿನಲ್ಲಿ ಒಂದು ಬೆಳೆಯನ್ನು ಮಾತ್ರ ತೆಗೆದು ಕೊಳ್ಳುತ್ತೇವೆ. ಇದರಲ್ಲೂ ಕೂಡ ಬೆಳೆಗೆ ಬರತಕ್ಕಂತಹ ರೋಗವನ್ನು ನಿವಾರಣೆ ಮಾಡುವುದಕ್ಕಾಗಿ ಯಾವ ರೀತಿಯ ಪರಿಹಾರವನ್ನು ಕಂಡು ಹಿಡಿಯುತ್ತಾರೆಂಬ ಬಗ್ಗೆ ಸರ್ಕಾರದಿಂದ ನಾನು ತಿಳಿದು

ಕೊಳ್ಳಬೇಕಾಗಿದೆ. ಮತ್ತೆ ಸಾಗುವಳಿ ಹಿಡಿದಿರತಕ್ಕಂತಹ ಒಂದು ಸಾವಿರ ಎಕರೆಯನ್ನು ಕಾಲುವೆ ಮುಖಾಂತರ ಅದನ್ನು ಒಳ್ಳೆಯ ಭೂಮಿಯಿಂದ ಬಿಡಿಸಿ ಆದಷ್ಟು ಬೇಗ ಪರಿಹಾರವನ್ನು ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಬಲವಾಗಿ ನಂಬಿದ್ದೇನೆ. ರೈತನ ಬೆಳೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ರೈತನಿಗೆ ಯೋಗ್ಯ ಬೆಲೆ ಸಿಗುತ್ತಿಲ್ಲ. ರೈತನಿಗೆ ಯಾವ ರೀತಿ ಹಾನಿಯಾಗುತ್ತದೆ ಎನ್ನತಕ್ಕಂತಹ ಅಂಕಿ ಸಂಖ್ಯೆಗಳನ್ನು ನೋಡುವುದಾದರೆ, ನಮ್ಮ ಬಾದಾಮಿ ತಾಲ್ಲೂಕಿನಲ್ಲಿ ಮುಂಗಾರು ಜೋಳವನ್ನು ಹೆಚ್ಚಿಗೆ ಬೆಳೆಯುತ್ತೇವೆ. ಒಂದು ಎಕರೆಗೆ ೧೦ ಗಾಡಿ ಸಗಣಿ ಗೊಬ್ಬರ ಹಾಕುತ್ತಾನೆ. ಅದರ ಬೆಲೆ ೨೦೦ ರೂಪಾಯಿಗಳು ಆಗುತ್ತವೆ. ಮತ್ತೆ ೬೦ ರೂಪಾಯಿಯ ರಾಸಾಯನಿಕ ಗೊಬ್ಬರವನ್ನು ಒಂದು ಎಕರೆಗೆ ಹಾಕಬೇಕಾಗುತ್ತದೆ. ಮತ್ತೆ ಬಿತ್ತನೆ, ಮಟ್ಟಾ ಮಾಡುವುದು, ಕಳೆ ಕೀಳುವುದು ಎಲ್ಲ ಖರ್ಚು ಸೇರಿ ೨೦೦ ರೂಪಾಯಿಗಳಾಗುತ್ತವೆ. ಒಟ್ಟು ಖರ್ಚು ೪೬೦ ರೂಪಾಯಿಗಳಾಗುತ್ತವೆ. ಈ ರೀತಿ ೪೬೦ ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದು ಎಕರೆಯಲ್ಲಿ ಮುಂಗಾರು ಜೋಳವನ್ನು ಹಾಕಿದರೆ ಸರ್ವೇ ಸಾಧಾರಣ ೬ ಚೀಲ ಜೋಳವನ್ನು ಬೆಳೆಯಬಹುದು. ಈಗಿನ ಬೆಲೆಯ ಪ್ರಕಾರ ಒಂದು ಚೀಲಕ್ಕೆ ೬೦ ರೂಪಾಯಿಯಂತೆ ೬ ಚೀಲಕ್ಕೆ ೩೬೦ ರೂಪಾಯಿ ಆಗುತ್ತವೆ. ರೈತ ಖರ್ಚು ಮಾಡಿರುವುದು ೪೬೦ ರೂಪಾಯಿಗಳು. ಅದರಿಂದ ಬರತಕ್ಕಂತಹ ಉತ್ಪನ್ನ ೩೬೦ ರೂಪಾಯಿಗಳು. ರೈತನಿಗೆ ಇದರಿಂದ ೧೦೦ ರೂಪಾಯಿ ನಷ್ಟವಾಗುತ್ತದೆ ಮತ್ತೆ ಸೇಂಗಾ ವಿಚಾರದಲ್ಲಿ ಹೇಳುವುದಾದರೆ, ಒಂದು ಎಕರೆಗೆ ೪೯ ಕೆ.ಜಿ. ಕಡಲೆಕಾಯಿಯ ಬೀಜವನ್ನು ಹಾಕಬೇಕಾಗುತ್ತದೆ. ಬೀಜದ ಬೆಲೆ ೧೨೫ ರೂಪಾಯಿ ಮತ್ತೆ ರಾಸಾಯನಿಕ ಗೊಬ್ಬರಕ್ಕೆ ೧೦೦ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಮತ್ತೆ ಮಟ್ಟಾ ಮಾಡುವುದಕ್ಕೆ, ಬಿತ್ತನೆ ಮಾಡುವುದಕ್ಕೆ ಹಾಗೂ ಕಳೆ ಕೀಳುವುದಕ್ಕೆ ಒಟ್ಟು ೨೦೦ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಒಟ್ಟು ೪೨೫ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಎಕರೆಯಲ್ಲಿ ಸರ್ವೇ ಸಾಧಾರಣವಾಗಿ ೧೫ ಚೀಲ ಸೇಂಗಾವನ್ನು ಬೆಳೆಯುತ್ತಾರೆ. ಇದು ಸಾಧಾರಣ ೬ ಕ್ವಿಂಟಾಲ್ ಆಗುತ್ತದೆ. ಈಗಿನ ಧಾರಣೆಯ ಪ್ರಕಾರ ಒಂದು ಚೀಲಕ್ಕೆ ೧೫೦–೨೦೦ ರೂಪಾಯಿ ಬೆಲೆ ಇದೆ. ಒಂದು ಕ್ವಿಂಟಾಲ್‌ಗೆ ೧೫೦ ರೂಪಾಯಿಯಂತೆ ಲೆಕ್ಕ ಹಾಕಿದರೆ ೯೦೦ ರೂಪಾಯಿಗಳು ಬರುತ್ತವೆ. ಆತನು ಖರ್ಚು ಮಾಡಿರುವುದು ೪೨೫ ರೂಪಾಯಿ ಉತ್ಪನ್ನ ೯೦೦ ರೂಪಾಯಿಗಳು ಆತನಿಗೆ ೪೭೫ ರೂಪಾಯಿಗಳು ಲಾಭ ಬರುತ್ತದೆ. ಮತ್ತೆ ಕಬ್ಬಿನ ಬೆಳೆಯ ಬಗ್ಗೆಯೂ ಕೂಡ ಲೆಕ್ಕ ಹಾಕಿದಾಗ ರೈತನು ಜೀವನ ಸಾಗಿಸುವುದು ಬಹಳ ಕಷ್ಟವಾಗಿದೆ. ತನ್ನ ಕಷ್ಟದ ದಿವಸವನ್ನು ಮುಂದೆ ನೋಡುತ್ತಿದ್ದಾನೆ. ರೈತ ಇವತ್ತು ಭಯಾನಕ ಪರಿಸ್ಥಿತಿಯಲ್ಲಿ ಇದ್ದಾನೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತ ಪರಿಹಾರವನ್ನು ಕಂಡು ಕೊಳ್ಳಬೇಕು. ಮುಖ್ಯವಾಗಿ ರೈತನು ಅನೇಕ ಕಷ್ಟಗಳನ್ನು ಹಾಗೂ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾನೆ.

ಎ.ಪಿ.ಎಂ.ಸಿ. ಹಾಗೂ ಪಿ.ಎಲ್.ಡಿ ಬ್ಯಾಂಕುಗಳ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನವರು ಸಾಲಗಳನ್ನು ಕೊಟ್ಟಿದ್ದಾರೆ. ರೈತನು ಬೆಳೆದಂತಹ ಮಾಲಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಎ.ಪಿ.ಎಂ.ಸಿ. ರೈತನ ಏಳಿಗೆಗೋಸ್ಕರ, ಅಭಿವೃದ್ಧಿಗಾಗಿ ಮೀಸಲಾಗಿರುವಂತಹ ಒಂದು ಸಂಸ್ಥೆ. ಆದರೆ ಎ. ಪಿ. ಎಂ. ಸಿ. ರೈತನ ಏಳಿಗೆಗೋಸ್ಕರ ಕೆಲಸ ಮಾಡುತ್ತಿಲ್ಲ ಎಂಬುದಾಗಿ ಹೇಳಿದರೆ ಅತಿಶಯೋಕ್ತಿಯಾಗಲಾರದು. ರೈತನು ಮಾಲನ್ನು ತೆಗೆದುಕೊಂಡು ಬಜಾರಿಗೆ ಬಂದರೆ, ಅದನ್ನು ಮಾರಿ ತನ್ನ ಮನೆಗೆ ವಾಪಸ್ಸು ಬರುವ ಕಾಲಕ್ಕೆ ಆತನಲ್ಲಿ ಬರೀ ಆತನ ರಕ್ತ ಮತ್ತು ಮಾಂಸ ಮಾತ್ರ ಇರುತ್ತದೆ. ರೈತನು ತಂದ ಮಾಲನ್ನು ಅಲ್ಲಿರತಕ್ಕಂತಹ ಅಂಗಡಿಯವರಿಗೆ ಕೊಟ್ಟರೆ ಅವರು ಹೇಳಿದ ಬೆಲೆಗೆ ಕೊಡಬೇಕಾಗಿರುವಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ಎ. ಪಿ. ಎಂ. ಸಿ. ಸರಿಯಾಗಿ ಕಾಳಜಿ ವಹಿಸುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಜಾಗ್ರತೆ ವಹಿಸಿ ರೈತನಿಗೆ ಒಳ್ಳೆಯದು ಆಗುವ ಹಾಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).— ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಾನು ವಿನಂತಿ **ಮಾಡಿ**ಕೊಳ್ಳುವುದೇನೆಂದರೆ ತಾವು ಭಾಷಣ ಮಾಡಲಿಕ್ಕೆ ಟೈಂ ಕೊಡುತ್ತಾ ಇರುವುದನ್ನು ನೋಡಿದರೆ ಒಬ್ಬೊಬ್ಬರಿಗೆ ಒಂದೊಂದು ತರಹ ಟೈಂ ಕೊಡುತ್ತಾ ಇದ್ದೀರಿ. ಇದರಿಂದ ಬಹಳ ಅನ್ಯಾಯವಾಗುತ್ತಾ ಇದೆ. ಮೊಟ್ಟಮೊದಲು ಮಾತನಾಡುವವರಿಗೆ ಒಂದೊಂದು ಗಂಟೆ ಟೈಂ ಕೊಡುತ್ತೀರಿ ನಂತರ ಕೆಲವರಿಗೆ ೧೫

ನಿಮಿಷ. ಇನ್ನು ಕೆಲವರಿಗೆ ೧೦ ಮತ್ತೆ ಕೆಲವರಿಗೆ ೫ ನಿಮಿಷ ಕೊಡುತ್ತಾ ಇದ್ದೀರಿ, ಮಧ್ಯೆ ನಾವು ಮಾತನಾಡುವಾಗ ನಮ್ಮ ಒಪಿನಿಯನ್ ಅನ್ನು ಎಕ್ಸ್‌ಪ್ರೆಸ್ ಮಾಡುವಾಗ ಮಧ್ಯದಲ್ಲಿ ತಾವು ಗಂಟೆ ಬಾರಿಸಿ ಬಿಡುವುದರಿಂದ ನಮಗೆ ಮುಂದೆ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲಾ, ಆದುದರಿಂದ ನಮ್ಮ ಒಪಿನಿಯನ್ ಅನ್ನು ಸರಿಯಾಗಿ ಹೇಳುವುದಕ್ಕಾಗುವುದಿಲ್ಲಾ. ಆದುದರಿಂದ ತಾವು ಸದಸ್ಯರಿಗೆ ಮಾತನಾಡಲಿಕ್ಕೆ ಟೈಂ ಅನ್ನು ಸರಿಯಾಗಿ ಡಿಸ್ಟ್ರಿಬ್ಯೂಟ್ ಮಾಡಬೇಕು ಎಂದು ಹೇಳುತ್ತೇನೆ. ಈಗ ಅನ್ಯಾಯವಾಗುತ್ತಾ ಇದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ನಾನು ಒಬ್ಬನೇ ಇರುವುದರಿಂದ ನಾನು ಒಬ್ಬನೇ ಮಾತನಾಡಬೇಕಾಗಿದೆ. ಆದುದರಿಂದ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಇಂತಿಷ್ಟು ಟೈಂ ಅಂದರೆ ೧೫ ನಿಮಿಷವೋ, ೧೦ ನಿಮಿಷವೋ ಅಥವಾ ೫ ನಿಮಿಷವೋ ಇಷ್ಟು ಟೈಂ ಅಂತ ಮೊದಲೇ ಹೇಳಿಬಿಟ್ಟರೆ ಮಾತನಾಡಲು ಅನುಕೂಲವಾಗುತ್ತದೆ. ನನಗೆ ಯುಕ್ತವಾದ ಟೈಂ ಅನ್ನು ಕೊಡಬೇಕು ಎಂದು ಕೇಳುತ್ತೇನೆ.

MR. SPEAKER.—Hon. member Sri Gangadharan also said about this. I would like to read Rule 296 of the Rules of Procedure for the benefit of the hon. members. It says:

> "The Speaker may, in cases not specifically provided for in the rules and having regarded to the state of business before the Assembly and the nature of the motion, prescribe a time limit for speeches on the motion."

ಲೋಕಸಭೆಯಲ್ಲಾಗಲಿ, ರಾಜ್ಯ ಸಭೆಯಲ್ಲಾಗಲಿ ಪಕ್ಷಗಳ ಬಲಾಬಲ ಏನು ಇದೆ ಅದರ ಮೇಲೆ ಸದಸ್ಯರು ಮಾತನಾಡುವುದಕ್ಕೆ ಟೈಂ ಫಿಕ್ಸ್ ಮಾಡುತ್ತಾರೆ. ಹಾಗಾದರೆ ಲೋಕಸಭೆಯಲ್ಲಿರುವ ಹಾಗೆ ಸ್ಟ್ರಿಕ್ಟ್ ಮಾಡೋಣ ಎಂದರೆ ಮಾಡೋಣ ತಾವುಮಾತನಾಡಿ.

ಶ್ರೀ ಭೀಮಣ್ಣ ಖಂಡ್ರೆ.—ತಮ್ಮ ಮೇಲೆ ನಾನು ಏನೂ ಅಪಾದನೆ ಮಾಡುತ್ತಾ ಇಲ್ಲಾ. ಮಾನ್ಯ ಅಧ್ಯಕ್ಷರ ಮಾತಿನಂತೆ ಅವರ ಲಕ್ಷ್ಯ ತೆಗೆದುಕೊಂಡು ನನ್ನ ಭಾಷಣವನ್ನು ಪ್ರಾರಂಭ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈವೊತ್ತು ಈ ಅಗ್ರಿಕಲ್‌ಚರಲ್ ಸಂಬಂಧಪಟ್ಟ ಬೇಡಿಕೆ ಹಾಗೂ ಲೆಜಿಸ್ಲೇಚರ್‌ಗೆ ಸಂಬಂಧಪಟ್ಟ ಬೇಡಿಕೆ ಏನು ಇದೆ ಇದರ ಬಗ್ಗೆ ಅನೇಕ ಸದಸ್ಯರು ಮಾತನಾಡಿದ್ದಾರೆ. ಆದುದರಿಂದ ನಾನು ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲಾ. ನಾನು ಈ ಲೆಜಿಸ್ಲೇಚರ್‌ಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಹೇಳುವುದಾದರೆ ನಮ್ಮ ಲೆಜಿಸ್ಲೇಚರ್‌ನಲ್ಲಿ ಈ ಅಸೆಂಬ್ಲಿ ಏನು ಇದೆ ಇದರ ಒಂದು ಕಾರ್ಯಕಲಾಪಗಳನ್ನು ನಾನು ೩೦ ವರ್ಷಗಳಿಂದಲೂ ನೋಡುತ್ತಾ ಇದ್ದೇನೆ. ಎಷ್ಟೋ ಜನ ಎಂ. ಎಲ್. ಎ. ಬಂದರು, ಹೋದರು ಆದರೆ ಅದರಿಂದ ರೈತರಿಗೆ ಏನೂ ಪ್ರಯೋಜನವಾಗಲಿಲ್ಲಾ. ಅವರೆಲ್ಲಾ ರೈತರ ಪರವಾಗಿ ಓಟು ತೆಗೆದುಕೊಂಡು ಬಂದಿದ್ದರೂ ಕೂಡ ಆ ರೈತರ ಒಂದು ಬೆಳವಣಿಗೆಗೆ ಏನು ಮಾಡಿದ್ದಾರೆ ಎನ್ನುವುದನ್ನು ನೋಡಿದರೆ ನಾನು ಆ ಬಗ್ಗೆ ಬಹಳ ವಿಷಾದದಿಂದ ಮಾತನಾಡಬೇಕಾಗಿದೆ. ಯಾರೂ ಅವರ ಕಡೆ ಬಗ್ಗೆ ಮಾತನಾಡುವುದಿಲ್ಲಾ. ಅವರ ಬಗ್ಗೆ ಅಷ್ಟು ಇಂಟರೆಸ್ಟ್ ತೆಗೆದುಕೊಳ್ಳುವುದಿಲ್ಲಾ. ಈವೊತ್ತು ಈ ಹೌಸ್‌ನಲ್ಲಿ ನೋಡಿದರೆ ಈ ಸಭೆಯಲ್ಲಿ ಎಷ್ಟು ಜನ ರೈತರ ಪರವಾಗಿ ಒಂದು ಇಂಟರೆಸ್ಟ್ ತೆಗೆದುಕೊಂಡು ಮಾತನಾಡಿದ್ದಾರೆ ಎನ್ನುವುದನ್ನು ವಿಷಾದದಿಂದ ಹೇಳಬೇಕಾಗಿದೆ. ಇದಲ್ಲದೆ ಸರ್ಕಾರದ ಮಟ್ಟಿಗೆ ಹೇಳಬೇಕಾದರೆ ಸರ್ಕಾರದವರು ಈ ಅಗ್ರಿಕಲ್‌ಚರಲ್ ಬಗ್ಗೆ ಸರಿಯಾಗಿ ಏನೂ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತೇನೆ. ಇದಕ್ಕೆ ನನ್ನ ವಿರೋಧ ಇದೆ. ನೀವು ಪ್ರತಿಯೊಂದು ಇಲಾಖೆಯಲ್ಲೂ ನೋಡಿ, ಪ್ರತಿಯೊಂದು ವಿಷಯದಲ್ಲಿಯೂ ನೋಡಿ ಯಾರು ಯಾವ ಮಾತಿನ ಬಗ್ಗೆ ಆಡಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅವರು ಅದಕ್ಕೆ ಪರಸ್ಪರ ವಿರುದ್ಧವಾಗಿ, ಕಾನೂನಿಗೆ ವಿರುದ್ಧವಾಗಿ, ನೈತಿಕತೆಗೆ ವಿರುದ್ಧವಾಗಿ, ಸಂವಿಧಾನಕ್ಕೆ ವಿರುದ್ಧವಾಗಿ ಮಾತನಾಡುತ್ತಾ ಇರುವುದನ್ನು ನಾವು ನೋಡುತ್ತಾ ಇದ್ದೇವೆ. ೩೦ ವರ್ಷಗಳಿಂದಲೂ ಕೂಡ ಇವರ ಒಂದು ಇತಿಹಾಸವನ್ನು ತೆಗೆದು ನೋಡಿದರೆ ಎಷ್ಟು ಜನ ರೈತರ ಪರವಾಗಿ ಓಟು ತೆಗೆದುಕೊಂಡು ಬಂದಿದ್ದಾರೆ, ಅವರೆಲ್ಲಾ ಶಾಸಕರಾಗಿದ್ದಾರೆ, ಮಂತ್ರಿಗಳಾಗಿದ್ದಾರೆ, ಮುಖ್ಯ ಮಂತ್ರಿಗಳೂ ಸಹ ಆಗಿದ್ದಾರೆ. ಅವರೆಲ್ಲರ ಬಗ್ಗೆ ಒಂದು ಎನ್‌ಕ್ವೈರಿ ಮಾಡು

ವುದಾದರೆ ಅವರೆಲ್ಲಾ ಜೈಲಿನಲ್ಲಿರಬೇಕಾಗುತ್ತದೆ. ಈಗ ಸ್ಪೆಷಲ್ ಕೋರ್ಟ್ ಬಂದಿದೆ. ಇವರನ್ನೆಲ್ಲಾ ವಿಚಾರ ಮಾಡಿದರೆ ೮೦ ಪರ್ಸೆಂಟ್ ಅಷ್ಟು ಜನ ಜೈಲಿಗೆ ಹೋಗುತ್ತಾರೆ, ಅವರಿಗೆ ಸಜಾ ಆಗುತ್ತದೆ. ಯಾರಾರು ಎಷ್ಟೆಷ್ಟು ಹಣವನ್ನು ಗಳಿಸಿದ್ದಾರೆ, ಅನ್ನುವುದು ಗೊತ್ತಾಗುತ್ತದೆ ಇವರೆಲ್ಲಾ ರೈತರ ಒಂದು ಹಿತವನ್ನು ಕಾಪಾಡುವುದಕ್ಕೆ ಬಂದಿಲ್ಲಾ. ಅವರೆಲ್ಲಾ ತಮ್ಮ ಸ್ವಾರ್ಥಕ್ಕಾಗಿ, ತಮ್ಮ ಒಂದು ಹಿತಕ್ಕಾಗಿ ಬಂದಿದ್ದಾರೇ ವಿನಾ ಇನ್ನಾವುದಕ್ಕೂ ಬಂದಿಲ್ಲಾ. ತಮಗೆ ಹೇಳಬೇಕಾದರೆ ಅವರುಗಳು ೫೦೦ ರೂಪಾಯಿ ಸಂಬಳ ಇದ್ದುದನ್ನು ಒಂದು ಸಾವಿರ ಮಾಡಿಕೊಂಡರು, ಆಮೇಲೆ ದಿನಭತ್ಯ ೩೧ ರೂಪಾಯಿ ಇದ್ದುದನ್ನು ೫೧ ರೂಪಾಯಿ ಮಾಡಿಕೊಂಡರು, ಆಮೇಲೆ ತಮಗೆಲ್ಲಾ ಪೆನ್‌ಷನ್ ಬರುವ ಹಾಗೆ ಮಾಡಿಕೊಂಡರು. ಇದು ಸರ್ಕಾರದ ಒಂದು ಸಮಾಜವಾದ ಅಲ್ಲವೇ. ಈ ಒಂದು ಸಮಾಜ ತತ್ವ ಪಾರ್ಲಿಮೆಂಟಿನಲ್ಲೇ ಇರಲಿ, ಶಾಸನಸಭೆಯಲ್ಲೇ ಇರಲಿ ಈ ರೀತಿ ಮಾಡುವುದು ಸರಿಯೆ? ಇವರ ಒಂದು ಸಮಾಜವಾದಿ ತತ್ವ ಹೇಗಾಗಿದೆ ಎಂದರೆ ಲಗ್ನವಾದ ಕಡೆಗಳಲ್ಲಿ ಸಾರ್ವಜನಿಕರು ಊಟ ಮಾಡಿದ ಎಲೆಗಳಲ್ಲಿ ಬಡಿಸಿರತಕ್ಕಂಥಾ ಅನ್ನವನ್ನು ತಿಂದು ಬಿಟ್ಟು ಅದರ ಅಗಳನ್ನು ಹೊರಗಡೆ ಬೀಸಾಕಿದಾಗ ನಾಯಿಯೋ ಅಥವಾ ಬೆಕ್ಕೋ ಯಾವ ರೀತಿ ಅದನ್ನು ತಿನ್ನುವುದಕ್ಕೆ ಬರುತ್ತದೋ, ಆ ಅಗಳನ್ನು ಯಾವ ರೀತಿ ಆರಿಸುತ್ತದೋ ಆ ರೀತಿಯಾಗಿ ಸರ್ಕಾರದವರು ನಮಗೆ ಅಂಕಿ ಅಂಶಗಳನ್ನು ನಮ್ಮ ಮುಂದೆ ತರುತ್ತಾರೆ. ಇವರು ಈ ರೀತಿಯಾಗಿ ಸಂಬಳವನ್ನು ಏರಿಸಿಕೊಂಡಿರುವುದು, ದಿನಭತ್ಯವನ್ನು ಏರಿಸಿಕೊಂಡಿರುವುದು ಮತ್ತು ಪೆನ್‌ಷನ್ ಸೌಲಭ್ಯವನ್ನು ಮಾಡಿಕೊಂಡಿರುವುದು ಇವೆಲ್ಲಾ ಯಾರ ಒಂದು ಕಾಸ್ಟ್‌ನಲ್ಲಿ ಮಾಡಿಕೊಂಡಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ. ನಮ್ಮ ದೇಶದಲ್ಲಿ ರೈತರು ಏನು ಇದ್ದಾರೆ, ಶೇಕಡ ೭೦ ಪರ್ಸೆಂಟ್ ಅಷ್ಟು ರೈತ ನಮ್ಮ ದೇಶದಲ್ಲಿ ಏನು ಇದ್ದಾರೆ ಅಂಥಾವರಿಗೆಲ್ಲಾ ಇದರಿಂದ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ. ಇಷ್ಟೇ ಅಲ್ಲ ಅವರ ರಕ್ತ ಹೀರಿ ಅವರ ಹಣವನ್ನು ಲೂಟಿ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ತಮ್ಮ ಹಿತವನ್ನು ನೋಡಿಕೊಳ್ಳುತ್ತಿದ್ದಾರೇ ವಿನಾ ರೈತರ ಹಿತವನ್ನು ನೋಡಿಕೊಳ್ಳುತ್ತಾ ಇಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಈ ದೃಷ್ಟಿಯಿಂದ ನಾನು ಹೇಳುವುದಾದರೆ ಭೂತಲಿಂಗಂ ಕಮಿಟಿಯವರು ಈ ಬಗ್ಗೆ ಏನು ಒಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅವರ ಒಂದು ಅಂಕಿ ಅಂಶದ ಪ್ರಕಾರ ನಮ್ಮ ದೇಶದಲ್ಲಿ ಈ ೨೭ ವರ್ಷದಲ್ಲಿ ಮಾಡತಕ್ಕಂಥಾ ಪ್ರೊಡಕ್ಷನ್ ಮೊದಲಿಗಿಂತ ದ್ವಿಗುಣಗೊಂಡಿದ್ದರೂ ಕೂಡ ಇದರ ಒಂದು ಲಾಭ ಯಾವನು ಅದನ್ನು ಉತ್ಪತ್ತಿ ಮಾಡುತ್ತಾನೋ ಅಂಥಾವನಿಗೆ ಅದರ ಲಾಭ ಹೋಗುವುದಿಲ್ಲಾ, ಬೇರೆ ಒಬ್ಬ ವ್ಯಾಪಾರಿಗೋ ಅಥವಾ ಒಂದು ಕೋ ಆಪರೇಟೀವ್ ಸೊಸೈಟಿಗೋ ಅದರ ಲಾಭ ಹೋಗುತ್ತದೆ. ಇದುವರೆಗೂ ಕೂಡ ಇದನ್ನು ಉತ್ಪತ್ತಿ ಮಾಡುವವನಿಗೆ ಲಾಭವಾಗಿಲ್ಲಾ ಎನ್ನುವುದು ಈ ಒಂದು ಕಮಿಟಿ ರಿಪೋರ್ಟ್‌ನಲ್ಲಿ ತೋರಿಸುತ್ತದೆ. ಇನ್ನು ಪರ್ ಕ್ಯಾಪಿಟಾ ಇನ್‌ಕಂ ಯಾವ ರೀತಿ ಇದೆ ಟ್ಯಾಕ್ಸ್ ಇವುಗಳ ಬಗ್ಗೆ ಅನ್ನುವುದರ ಬಗ್ಗೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಈಗ ಸ್ವಲ್ಪ ದಿವಸದ ಹಿಂದೆ ಕೊಟ್ಟಿತ್ತು. ಆ ಪ್ರಕಾರವಾಗಿ ಪರ್ ಕ್ಯಾಪಿಟಾ ಇನ್‌ಕಂ ಮೊದಲು ೩೫ ರೂಪಾಯಿ ಇದ್ದದ್ದು ೧೯೭೮-೭೯ರಲ್ಲಿ ೧೧೦ ರೂಪಾಯಿ ಆಗಿದೆ. ಅಂದರೆ ಮೊದಲಿಗಿಂತ ೪ ಪಟ್ಟು ಜಾಸ್ತಿಯಾಗಿದೆ. ಇನ್ನು ಭೂತಲಿಂಗಂ ಕಮಿಟಿಯ ಒಂದು ಅಗ್ರಿಕಲ್ಚರಲ್ ರಿಪೋರ್ಟ್ ನೋಡಿದರೆ ಗೊತ್ತಾಗುತ್ತದೆ. ಇದರ ಒಂದು ಪಾಪ್ಯುಲೇಷನ್ ೧೯೬೦-೬೧ರಲ್ಲಿ ಅಗ್ರಿಕಲ್ಚರಲ್ ಪಾಪ್ಯುಲೇಷನ್ ೨೧೨.೨ ಇತ್ತು. ನಾನ್ ಅಗ್ರಿಕಲ್ಚರಲ್ ಪಾಪ್ಯುಲೇಷನ್ ೫೪೫.೨ ಇತ್ತು. ಅದು ೩೮.೯ ಆಗುತ್ತದೆ. ಅದೇ ರೀತಿ ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೯೭೬-೭೭ರಲ್ಲಿ ಪರ್ ಕ್ಯಾಪಿಟಾ ಇನ್‌ಕಂ ೫೭೪.೭ ಇತ್ತು. ನಾನ್ ಅಗ್ರಿಕಲ್ಚರಲ್ ಪಾಪ್ಯುಲೇಷನ್ ೨೨೬೩.೭ ಆಗಿತ್ತು. ಅಲ್ಲಿಗೆ ಅದು ೨೫.೪ ಪರ್ಸೆಂಟ್ ಆಗುತ್ತದೆ.

೧೯೬೦-೬೧ ರಲ್ಲಿ ನಾನ್ ಆಗ್ರಿಕಲ್ಚರಲ್ ಪಾಪ್ಯುಲೇಷನ್‌ಗೂ ಆಗ್ರಿಕಲ್ಚರಲ್ ಪಾಪ್ಯುಲೇಷನ್‌ಗೂ ೧:೨೮ ಅಂತರ ಇತ್ತು. ಈಗ ೧:೪೮ ಅಂತರ ಇದೆ. ಇದರಿಂದ ನಾವು ಎಲ್ಲಿಗೆ ಹೋಗುತ್ತಿದ್ದೇವೆಂದರೆ, ಶೇಕಡ ೮೦ ಪರ್ಸೆಂಟ್ ಜನ ರೈತರು ಯಾರಿದ್ದಾರೆ ಅವರು ಕೆಳಗೆ ಹೋಗುತ್ತಿದ್ದಾರೆ. ಶೇಕಡ ೨೦ ಪರ್ಸೆಂಟ್ ಜನ ಯಾರಿದ್ದಾರೆ ಅವರು ಮೇಲೆ ಹೋಗುತ್ತಿದ್ದಾರೆ, ಈ ೨೦ ಪರ್ಸೆಂಟ್‌ನಲ್ಲಿ ಮಂತ್ರಿಗಳು, ಅಧಿಕಾರಿಗಳು ಬರುತ್ತಾರೆ. ರೈತರ ಬಗ್ಗೆ ಯಾರಿಗೂ ಕಳಕಳಿ ಇಲ್ಲ. ಇದರಿಂದ ನಮ್ಮ ರಾಜ್ಯದಲ್ಲಿ ಅದರಲ್ಲಿಯೂ ಈ ಸರ್ಕಾರದಲ್ಲಿ ರೈತರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲವೆನ್ನುವುದು ಸಿದ್ಧವಾಗಿದೆ. ಇದರ ಜೊತೆಗೆ ಭೂತಲಿಂಗಂ ಕಮಿಟಿಯ ವರದಿಯ ಪುಟ ೩ರಲ್ಲಿ ಹೇಳಿರುವುದನ್ನು ನಾನು ಮಾನ್ಯ ಸಭೆಯ

ಗಮನಕ್ಕೆ ತರುತ್ತೇನೆ. ಇಲ್ಲಿ ಇಂಡಸ್ಟ್ರಿಯಲ್ ವೇಜಸ್ ಯಾವ ಪ್ರಕಾರ ಕೊಡಬೇಕು ಎನ್ನುವುದರ ಬಗ್ಗೆ ಹೇಳಲಾಗಿದೆ. ಇದು ಬಾಂಬೆ, ಬೆಂಗಳೂರು, ಕಲ್ಕತ್ತ ಮತ್ತು ಇತರೆ ಸ್ಥಳಗಳಿಗೆ ಅನ್ವಯವಾಗುತ್ತದೆ. ದೊಡ್ಡ ದೊಡ್ಡ ಎಲ್ಲಾ ಇಂಡಸ್ಟ್ರಿಗಳಲ್ಲಿ ಆವ್ರೇಜ್ ವೇಜಸ್ ೧೩.೩೩ ಇದ್ದದ್ದು ೨೪.೧೦ ರವರೆಗೆ ವೇಜಸ್ ಕೊಡಬೇಕು. ೨೭ ವರ್ಷಗಳ ನಂತರವೂ ನಾವು ನಮ್ಮ ಲೇಬರರ್ಸ್‌ಗೆ ೫.೭೨ ವೇಜಸ್ ಕೊಡು ತ್ತಿದ್ದೇವೆ. ಇಷ್ಟೊಂದು ವ್ಯತ್ಯಾಸವನ್ನು ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ನಮ್ಮ ಸರ್ಕಾರದ ಸಿಬ್ಬಂದಿಯವರಿಗೆ ಸರ್ಕಾರದವರು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡು ತ್ತಿದ್ದಾರೆ. ಆದರೆ ೮೦ ಪರ್ಸೆಂಟ್ ಜನ ರೈತರು ಹಳ್ಳಿಗಳಲ್ಲಿ ಹಗಲು ರಾತ್ರಿ ಯಾರು ಕೆಲಸ ಮಾಡುತ್ತಿ ದ್ದಾರೋ ಅಂಥವರಿಗೆ ನಾವು ಏನು ಕೆಲಸ ಮಾಡುತ್ತಿದ್ದೇವೆ, ಅವರಿಗೆ ಯಾವ ರೀತಿಯ ಅನುಕಂಪವನ್ನು ನಾವು ತೋರಿಸುತ್ತಿದ್ದೇವೆ, ಅವರ ಇನಕಂ ಯಾವ ರೀತಿ ಇದೆ, ಅವರ ಪರ್‌ಕ್ಯಾಪಿಟಾ ಇನಕಂ ...ಗಳ ಎನ್ನುವುದನ್ನು ನಾವು ಯೋಚನೆ ಕೂಡ ಮಾಡಿಲ್ಲ. ಇದರ ಜೊತೆಗೆ ಅವರಿಗೆ ಸಿಗುತ್ತಿರುವ ... ರೇಟನ್ನು ನೋಡಿದರೆ ಅದರಲ್ಲಿಯೂ ಅವರಿಗೆ ನ್ಯಾಯವಾದ ಬೆಲೆ ಸಿಕ್ಕುತ್ತಿಲ್ಲ. ರಾಗಿ, ಜೋ...ದೆ ಮತ್ತು ಬತ್ತ ಇವುಗಳ ಬೆಲೆ ೧೯೭೦-೭೧ರಲ್ಲಿ ಯಾವ ರೀತಿ ಇತ್ತೋ ಅಷ್ಟೇ ಹೆಚ್ಚು ಕಡಿಮೆ ಇವೊತ್ತು ...ದೆ. ಬೇರೆ ಪದಾರ್ಥಗಳ ಬೆಲೆಗಳ ಹೆಚ್ಚಿನ ಮಟ್ಟದಲ್ಲಿ ಜಾಸ್ತಿಯಾಗಿದ್ದು, ರೈತ ಬೆಳೆದ ಬೆಲೆಗಳು ...ತ್ರ ಹಾಗೆಯೇ ಇವೆ ಆದರೆ ರೈತ ಕೊಳ್ಳತಕ್ಕ ಫರ್ಟಿಲೈಸರ್ಸ್, ಡಿಸಲ್, ಇತ್ಯಾದಿಗಳ ಬೆಲೆಗಳು ...ತ್ರ ಎರಡರಿಂದ ನಾಲ್ಕುಪಟ್ಟು ಮೇಲೆ ಹೋಗಿವೆ. ಆದ್ದರಿಂದ ರೈತ ಹೇಗೆ ಬದುಕಬೇಕು, ...ಗೆ ಅವನು ಜೀವನ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಮಾನ್ಯ ಸದಸ್ಯರಾದ ಬಸಪ್ಪ ನವರು ಶುಗರ್‌ಕೇನ್ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಂಥ ರೇಟುಗಳು ...ಂದ ಬಂತು ಎಂದು ಪ್ರಶ್ನೆ ಮಾಡಿದ್ದಕ್ಕೆ, ಅದು ಅಗ್ರಿಕಲ್ಚರಲ್ ಯೂನಿವರ್ಸಿಟಿಯಿಂದ ಬಂದಿದೆ ...ಎಂದು ಹೇಳಿದರು. ಇದನ್ನು ಹೇಳುವಾಗ ಕಾಸ್ಟ್ ಆಫ್ ಪ್ರೊಡಕ್ಷನ್ ಏನು, ಎಷ್ಟು ರೀತಿಯಲ್ಲಿ ...ತನಿಗೆ ತೊಂದರೆ ಇದೆ ಅದನ್ನೆಲ್ಲಾ ಕೂಲಂಕೂಷವಾಗಿ ತಿಳಿದುಕೊಂಡು ಬೆಲೆಗಳನ್ನು ನಿಗಧಿಮಾಡ...ಕು. ಇದಲ್ಲದೆ, ರೈತ, ಬ್ಯಾಂಕಿನ ಸಾಲ, ತಕಾವಿ ಸಾಲ, ಅದರ ಇಂಟರೆಸ್ಟ್, ೧೫ ಪರ್ಸೆಂಟ್ ...ಪರ್ಸೆಂಟ್, ಮತ್ತೆ ಪೀನಲ್ ಇಂಟ ರೆಸ್ಟ್ ೨೦ ಪರ್ಸೆಂಟ್, ವಸೂಲಿ ಮಾಡುವುದಕ್ಕೆ ಹೋಗಿ ...ಖರ್ಚು, ಇವೆಲ್ಲಾ ನೋಡಿದಾಗ ಅಸ ಲಿನ ನಾಲ್ಕರಷ್ಟು ಅಧಿಕಾರಿಗಳು ರೈತರಿಂದ ವಸೂಲು ಮಾಡುತ್ತಾರೆ ನಮ್ಮ ಭಾಗದಲ್ಲಿ ಇಂಥ ಸಾಲ ಗಳನ್ನು ತೆಗೆದುಕೊಂಡ ರೈತರು ತಮ್ಮ ಪಂಪುಸೆಟ್ಟುಗಳನ್ನು ಸಾಲಕ್ಕೆ ಅಟ್ಯಾಚ್ ಮಾಡಿ, ಪಂಪುಸೆಟ್ಟು ಗಳನ್ನೇ ತೆಗೆದುಕೊಂಡು ಹೋಗಿದ್ದಾರೆ. ಇದು ನ್ಯಾಷನಲ್ ಕ್ರೈಮ್ ಅಲ್ಲವೇ ? ನಮ್ಮ ಸರ್ಕಾರದಲ್ಲಿ ಎಷ್ಟೋ ಹಣವನ್ನು ಕ್ರಿಮಿನಲ್ ಆಗಿ ವೇಸ್ಟ್ ಮಾಡುತ್ತಿದ್ದಾರೆ. ಕ್ರಿಮಿನಲ್ ಆಕ್ಟಿವಿಟೀಸ್ ಎಷ್ಟೋ ನಡೆಯುತ್ತಿವೆ ಎನ್ನುವುದನ್ನು ನಾನು ಹೇಳುತ್ತೇನೆ. ಯಾವ ರೀತಿ ನಮ್ಮ ಭಾಗದಲ್ಲಿ ಅಧಿಕಾರಿಗಳು ಸರ್ಕಾರದ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದರೆ, ಮನೆಯಲ್ಲಿರುವ ಎಲ್ಲಾ ಸಾಮಾನುಗಳನ್ನು ಹರಾಜು ಮಾಡಿ ರೈತನ ಹೆಂಡತಿಯ ಮಂಗಳಸೂತ್ರವನ್ನು ಹರಾಜು ಮಾಡಿ ಹೆಂಡರನ್ನು ಎಳೆದುಕೊಂಡು ಹೋಗುವಂಥ ಮಟ್ಟಕ್ಕೆ ಹೋಗಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಅಟ್ಯಾಚ್‌ಮೆಂಟ್ ತೆಗೆದುಕೊಂಡು ಬರಬಾರದು ಎಂದು ಸರ್ಕಾರಿ ಆಜ್ಞೆಯೇ ಇದೆ. ಯಾರಾದರೂ ಒಬ್ಬ ಅಧಿಕಾರಿ ಈ ರೀತಿಯ ಅಪರಾಧ ಮಾಡಿದ್ದರೆ ಅದನ್ನು ಮಾನ್ಯ ಸದಸ್ಯರು ಸರ್ಕಾರಕ್ಕೆ ತಿಳಿಸಿದರೆ, ನಾವು ಕೂಡಲೇ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಪಂಪು ಸೆಟ್ಟುಗಳು, ವೈಗೈರೆ ಅಟ್ಯಾಚ್ ಮಾಡಬಾರದು ಎಂದು ನಮ್ಮ ಹುಕುಂ ಕೊಟ್ಟಿದ್ದೇವೆ. ಇದನ್ನು ಯಾರು ಮಾಡಿದರೂ ತಪ್ಪು. ಆದ್ದರಿಂದ ಮಾನ್ಯ ಸದಸ್ಯರು ಏನು ಈ ಒಂದು ಆಪಾದನೆ ಮಾಡುತ್ತಿ ದ್ದಾರೆ ಅದು ಸರಿಯಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಮಂತ್ರಿಗಳು ಏನು ಸರ್ಕಾರಿ ಆಜ್ಞೆಯ ಬಗ್ಗೆ ಹೇಳಿದರು, ಅದು ಎಕ್ಸಿಕ್ಯೂಟ್ ಆಗುತ್ತಿಲ್ಲ. ನಮ್ಮ ಭಾಗದಲ್ಲಿ ನೂರಾರು ಪಂಪುಸೆಟ್ಟುಗಳನ್ನು, ಎತ್ತುಗಳನ್ನು, ಹರಾಜು ಮಾಡಿದ್ದಾರೆ, ಇನ್ನು ಹೆಂಡರನ್ನು ಎಳೆದುಕೊಂಡು ಹೋಗುವುದು ಬಾಕಿ ಉಳಿದಿದೆ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯಸದಸ್ಯರಾದ ಭೀಮಣ್ಣನವರು ಮೊದಲು ಚೆನ್ನಾಗಿಯೇ ಇದ್ದರು, ಈ ಸಲ ಎಲೆಕ್ಷನ್‌ನಲ್ಲಿ ಬಂದಮೇಲೆ ಏನೋ ಒಂದು ತರಹ ಆಗಿದ್ದಾರೆ. ಬೆಂಗಳೂರಿನಲ್ಲಿ ಮೊದಲು ರೂಟ್ ನಂಬರ್ ೪ ಎಂದು ಇತ್ತು, ಅಲ್ಲಿಗೇನಾದರೂ ಇವರನ್ನು ಕಳುಹಿಸಬೇಕೋ ನನಗರ್ಥ

ವಾಗುತ್ತಿಲ್ಲ. ವರ್ಷದಿಂದ ವರ್ಷಕ್ಕೆ ಇವರಿಗೆ ಕೋಪ ಜಾಸ್ತಿಯಾಗುತ್ತಿದೆ. ಅದೇನೋ ವಯಸ್ಸಾದ ಹಾಗೆ ಕೋಪ ಜಾಸ್ತಿಯಾಗುತ್ತಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ಆಸನಗಳನ್ನು ಮಾಡುತ್ತಿದ್ದರು.

ಶ್ರೀ ಭೀಮಣ್ಣ ಖಂಡ್ರೆ.—ಇಷ್ಟೊಂದು ವ್ಯತ್ಯಾಸ ನಾನ್ ಅಗ್ರಿಕಲ್ಚರಿಸ್ಟ್‌ಗೂ ಅಗ್ರಿಕಲ್ಚರಿಸ್ಟ್‌ಗೂ ಇರುವಾಗ, ಒಕ್ಕಲಿಗನ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಮ್ಮ ಬೀದರ್ ಜಿಲ್ಲೆಯಲ್ಲಿ ಸುಮಾರು ನಲವತ್ತು ಸಾವಿರ ರೈತರು ಅಲ್ಲಿ ಜಿಲ್ಲಾಧಿಕಾರಿಗಳಿಗೆ ಒಂದು ಮೆಮೊರಾಂಡಮ್ ಕೊಟ್ಟಿದ್ದಾರೆ. ಅದರಲ್ಲಿ ಅವರು ಸರ್ಕಾರದವರು ರೈತರಿಂದ ಕೊಳ್ಳತಕ್ಕ ಬೆಲೆಗಳು ಬಹಳ ಇಳಿದು ಹೋಗಿವೆ, ನಾವು ಬಹಳ ತೊಂದರೆಯಲ್ಲಿದ್ದೇವೆ, ನಮಗೆ ಯಾವರೀತಿಯಿಂದಲಾದರೂ ಕ್ಷೇತ್ರಾದ ಕೊಡಬೇಕು ಎಂದು ಕೇಳಿಕೊಂಡಿದ್ದಾರೆ. ಈ ಮೆಮೊರ್ಯಾಂಡಮ್ನು ೨೭ನೇ ಫೆಬ್ರವರಿಗೆ ಇವರಿಗೆ ಕೊಟ್ಟಿದ್ದೇವೆ. ಇದನ್ನು ಮುಖ್ಯಮಂತ್ರಿಗಳಿಗೂ ಕೊಟ್ಟಿದ್ದೇವೆ ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಉತ್ತರ ಕೊಡುವಷ್ಟೂ ಸೌಜನ್ಯತೆ ಇಲ್ಲ. ಇದರ ಬಗ್ಗೆ ವಿಚಾರ ಮಾಡುತ್ತೇವೆಂದು ಒಂದು ಉತ್ತರ ಕೂಡ ಅವರಿಂದ ಬರಲಿಲ್ಲ. ಮಹಾರಾಷ್ಟ್ರ, ತಮಿಳುನಾಡು, ರಾಜ್ಯಗಳಲ್ಲಿ ಅಲ್ಲಿ ಸರ್ಕಾರದವರು ರೈತರ ಈ ಸಾಲಗಳನ್ನು ಮಾಫಿ ಮಾಡಿದ್ದಾರೆ. ಇಲ್ಲಿಯೂ ನಮ್ಮ ಸರ್ಕಾರದವರು ೫-೧೦ ಎಕರೆಯೊಳಗೆ ಇರುವಂಥ ರೈತರ ಸಾಲಗಳೇನಾದರೂ ಇದ್ದರೆ ಅಂಥವುಗಳನ್ನು ತಾವು ಮಾಫಿ ಮಾಡುವುದಕ್ಕೆ ಆಜ್ಞೆಯನ್ನು ಹೊರಡಿಸಬೇಕು ಎಂದು ನಾನು ಹೇಳುತ್ತೇನೆ.

ಅಗ್ರಿಕಲ್ಚರ್‌ಗೆ, ಎಲೆಕ್ಟ್ರಿಕಲ್ ಚಾರ್ಜಸ್ ಮೊದಲು ೨೯ ಪೈಸೆ ಪರ್ ಯುನಿಟ್ ಇದ್ದುದ್ದನ್ನು ೧೯ ಪೈಸೆ ಮಾಡಿದ್ದಾರೆ. ಇದರ ನಂತರ ರೈತರು ಮತ್ತೆ ರೆಪ್ರಸೆಂಟ್ ಮಾಡಿದರು. ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಇದರ ಬಗ್ಗೆ ಯಾವ ರೀತಿ ಮಾಡಿದ್ದಾರೆನ್ನುವ ಡೇಟಾ ತೆಗೆದುನೋಡಿದರೆ ನಮಗೆ ಅರ್ಥವಾಗುತ್ತದೆ. ಅದರಂತೆ ತಾವು ಏಕೆ ಮಾಡಬಾರದು ? ಅದು ರೈತರ ಸರ್ಕಾರ ಇದೆಯೋ? ಇಲ್ಲಿಯೂ ಶೇಕಡ ೮೦ ರಷ್ಟು ಜನ ರೈತರಿಂದ ವೋಟನ್ನು ತೆಗೆದುಕೊಂಡಂಥ ಸರ್ಕಾರ ಅಧಿಕಾರದಲ್ಲಿದ್ದು ಅವರಿಗೆ ನ್ಯಾಯ ಮಾಡುವ ಯೋಚನೆ ಕೂಡ ಮಾಡುತ್ತಿಲ್ಲ. ಇದರ ಬಗ್ಗೆ ಯಾರೂ ವಿಚಾರ ಮಾಡುತ್ತಿಲ್ಲ.

ಇಲ್ಲಿಯವರೆಗೆ ಹೆಲ್ತ್ ಟ್ಯಾಕ್ಸ್ ೧೨ ಪೈಸೆ ಇದ್ದುದನ್ನು ೫೦ ಪೈಸೆ ಮಾಡಿದರು, ಎಜುಕೇಷನ್ ಸೆಸ್ ೧೨ ಪೈಸೆ ಇದ್ದುದನ್ನು ೫೦ ಪೈಸೆ ಮಾಡಿದರು, ಆದರೆ ನಿಮ್ಮ ಸೈಂಟಿಸ್ಟ್ ಮಾತ್ರ ಇದರ ಮೇಲೆ ಬೀಳ ಲಿಲ್ಲ. ಸೇಲ್ಸ್ ಟ್ಯಾಕ್ಸನ್ನು ನಾಲ್ಕು ಪರ್ಸೆಂಟ್ ಹೆಚ್ಚು ಮಾಡಿದರು. ಅದಕ್ಕೋಸ್ಕರ ನಮ್ಮ ಬೆಳಗಾಂ ಮತ್ತು ಬೀದರ್ ಬಜಾರ್‌ಗಳು ತಮ್ಮ ವ್ಯಾಪಾರವನ್ನು ಕ್ಲೋಸ್ ಮಾಡಿದ್ದಾರೆ. ಮೊದಲಿದ್ದ ಇನಕಂ ಈಗ ಕಾಲು ಭಾಗವೂ ಇಲ್ಲ. ನಾನು ಮಾರ್ಕೆಟ್ ಕಮಿಟಿಗಳ ವರದಿಯನ್ನು ತಂದು ಮಾನ್ಯ ಮಂತ್ರಿಗಳಿಗೆ ಕೊಡುತ್ತೇನೆ, ಅವರೂ ನೋಡಬಹುದು. ಸರ್ಕಾರಕ್ಕೆ ಬರತಕ್ಕ ಆದಾಯದಲ್ಲಿ ಸುಮಾರು ೮೦ರಿಂದ ೧೦ ಲಕ್ಷ ರೂಪಾಯಿಗಳವರೆಗೂ ಖೋತಾ ಆಗಿದೆ. ಇವತ್ತು ಅರ್ಧದಷ್ಟೂ ಅಲ್ಲಿ ವ್ಯಾಪಾರ ನಡೆಯುತ್ತಿಲ್ಲ. ಏಕೆಂದರೆ, ನಮ್ಮ ಸರ್ಕಾರದವರು ನಾಲ್ಕು ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿರುವುದರಿಂದ, ವ್ಯಾಪಾರಗಾರರು ತಮ್ಮ ಮಾಲನ್ನು ಮಹಾರಾಷ್ಟ್ರಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಈ ಪ್ರಕಾರ ಅನ್ಯಾಯವಾಗುತ್ತಾ ಇರುವುದರಿಂದ ಮಾನ್ಯ ಮಂತ್ರಿಗಳು ಈ ವಿಷಯದ ಕಡೆ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ತಾವು ಸಂಪೂರ್ಣ ರಿಕಾರ್ಡು ಈ ಮಾರ್ಕೆಟ್ ಕಮಿಟಿಗಳ ಬಗ್ಗೆ ಇಟ್ಟು ನೋಡಬಹುದು. ತಮ್ಮ ಈ ನೀತಿಯಿಂದ ರೈತರು ಯಾವ ರೀತಿಯಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಕಲ್ಪನೆಯನ್ನೂ ಕೂಡ ತಾವು ಇಟ್ಟುಕೊಂಡಿಲ್ಲ.

ಇನ್ನು ಸಪೋರ್ಟಿಂಗ್ ಪ್ರೈಸ್ ಬಗ್ಗೆ ತಮಗೆ ನಾನು ಆಗಲೇ ಉಲ್ಲೇಖ ಮಾಡಿಕೊಂಡಿದ್ದೆ. ಭೂತಲಿಂಗಂ ಕಮಿಟಿಯ ವರದಿಯಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಇದನ್ನು ತಾವೂ ಸ್ವಲ್ಪ ವಿಚಾರ ಮಾಡಬೇಕು. ೧೯೭೮–೭೯ರಲ್ಲಿ ಯಾವ ಪ್ರಕಾರ ರೈತ ಕೊಳ್ಳತಕ್ಕ ಸಾಮಾನುಗಳ ಬೆಲೆ ಜಾಸ್ತಿಯಾಯಿತು ಎನ್ನುವುದನ್ನು ನಾವು ೧೯೭೦–೭೧ನೇ ಇಸವಿಯಲ್ಲಿದ್ದಂಥ ಬೆಲೆಗಳಿಗೆ ಹೋಲಿಸಿ ನೋಡಿದರೆ, ರಾಸಾಯನಿಕ ಗೊಬ್ಬರದ ಬೆಲೆ, ಐರನ್, ಆಗಲೀ, ಸೀಮೆಎಣ್ಣೆಯಾಗಲೀ, ಸಿಮೆಂಟ್ ಆಗಲೀ ಬ್ರಿಕ್ ಆಗಲೀ, ಬೆಲೆಗಳು ಜಾಸ್ತಿಯಾಗಿದೆ ಎನ್ನುವುದು ಗೊತ್ತಾಗುತ್ತದೆ.

ಇಲ್ಲಿ ೮೫ ಪರ್ಸೆಂಟಿಗಿಂತ ಕಡಿಮೆಯಾದರೆ ಸರ್ಕಾರವೇ ಖರೀದಿ ಮಾಡಬೇಕೆಂದು ಹೇಳಿದೆ. ಇಲ್ಲಿ ಕನ್‌ಸ್ಯೂಮರ್ ಬಗ್ಗೆ ಈ ರೀತಿ ಹೇಳಿದೆ :—

"the consumer will be assured of the supplies at less than the "intervention" price which will not exceed 115 per cent of the "parity" price ;"

೬-೩೦ ಪಿ.ಎಂ

ಇದೇ ರೀತಿಯಲ್ಲಿ ಟ್ರೇಡರ್ಸ್ ಬಗ್ಗೆ ಸಹ ಈ ರೀತಿ ಹೇಳಿದೆ :—

"the traders and the cooperatives will be assured of the opportunity to purse their trade, if they accept the discipline of operating between 85 per cent and 115 per cent of the parity price ;"

ಅನಂತರ ಸಣ್ಣ ರೈತರ ಬಗ್ಗೆ ಈ ರೀತಿ ಹೇಳಿದೆ :—

"the small farmer, who cannot retain his produce will be assured of better prices later in the season, by delivering his produce at the ware-houses ; and the Government will be assured of the facility to locate and procure foodgrains stocks, in case prices rose beyond the 'intervention' price."

ಆದ್ದರಿಂದ ನಾನು ಇಷ್ಟು ಮಾತ್ರ ಹೇಳುತ್ತೇನೆ, ಏನೆಂದರೆ, ಇಲ್ಲಿ ಹೇಳಿರುವ ಪ್ರಕಾರ ಸರ್ಕಾರ ನಡೆದುಕೊಂಡರೆ ರೈತರಿಗೆ ಒಳ್ಳೆಯದಾಗುತ್ತದೆ ಎಂದು ;

ಇನ್ನು ಪ್ಯಾರಿಟಿ ಪ್ರೈಸ್ ಬಗ್ಗೆ ಇಲ್ಲಿ ವಿವರವಾಗಿ ಹೇಳಿದ್ದಾರೆ. ಎಲ್ಲವನ್ನೂ ಹೇಳಲು ನನಗೆ ಸಾಕಷ್ಟು ಸಮಯವಿಲ್ಲ ; ಇದರ ಬಗ್ಗೆ ನಾನು ಮುಖ್ಯವಾಗಿ ಹೇಳುವುದಿಷ್ಟೆ, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಸಹಾಯವನ್ನು ಸರಿಯಾಗಿ ತಾವು ಉಪಯೋಗಿಸಿಕೊಂಡಿಲ್ಲವೆಂದು ; ಅಲ್ಲಿ ಅಷ್ಟು ನಷ್ಟವಾಯಿತು ಇಲ್ಲಿ ಇಷ್ಟು ನಷ್ಟವಾಯಿತು ಎಂದು ಹೇಳುತ್ತೀರಿ ; ಆದರೆ ಕೇಂದ್ರದಿಂದ ಬರತಕ್ಕಂಥ ಸಹಾಯವನ್ನು ಪಡೆದುಕೊಳ್ಳಲು ನಿಮಗೆ ಶಕ್ತಿ ಇಲ್ಲವೇ ಎಂದು ಕೇಳುತ್ತೇನೆ ?

ಇನ್ನು ಕುಡಿಯುವ ನೀರಿನ ಬಗ್ಗೆ ಕೇಂದ್ರದ ಮಂತ್ರಿಗಳಾದ ಶ್ರೀ ಭಾನುಪ್ರತಾಪ್‌ಸಿಂಗ್ ಅವರು ಏನು ಹೇಳಿದ್ದಾರೆಂದರೆ, ಒಂದು ಲಕ್ಷದ ೧೬ ಸಾವಿರ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲದಿರುವಾಗ ಅಲ್ಲಿಗೆ ಪ್ರಥಮ ಪ್ರಾಶಸ್ತ್ಯ ಕೊಡದೆ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಹೆಚ್ಚಿನ ಗಮನ ಕೊಡುತ್ತಿರುವುದು ಸರಿಯಲ್ಲವೆಂದು ಹೇಳಿದ್ದಾರೆ. ಮತ್ತು ಈ ರೀತಿಯ ನಿರ್ಲಕ್ಷ್ಯ ಸಲ್ಲದು ಎಂದು ಹೇಳಿದ್ದಾರೆ. ಈಗ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ೮೫ ಪರ್ಸೆಂಟ್ ಹಣ ಖರ್ಚು ಮಾಡಿ ಉಳಿದ ೧೫ ಪರ್ಸೆಂಟ್ ಹಣವನ್ನು ಹಳ್ಳಿಗಳಿಗೆ ಖರ್ಚು ಮಾಡುತ್ತಿರುವುದು ಸಲ್ಲದು ಎಂದು ಕೇಂದ್ರದ ಮಂತ್ರಿಗಳು ಹೇಳಿದ್ದಾರೆ ಆದಕಾರಣ ಇನ್ನು ಮುಂದೆಯಾದರೂ ಸಹ ರೈತರಿಗೆ ಸಹಾಯವಾಗುವಂತಹ ಕೆಲಸಗಳನ್ನು ಮಾಡಿ ಎಂದು ಹೇಳುತ್ತೇನೆ. ರೈತರು ಬೆಳೆದ ಬೆಳೆಗೆ ಒಳ್ಳೆಯ ಧಾರಣೆ ಸಿಗುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಈಗ ಜಪಾನ್ ದೇಶವನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ, ಅಲ್ಲಿ ಒಂದು ಕೆ.ಜಿ. ನೈಟ್ರೋಜನ್ ಬೆಲೆ ೫.೯೪ ರೂಪಾಯಿ ಇದೆ. ಅಲ್ಲಿ ಒಂದು ಕೆ.ಜಿ. ಭತ್ತದ ಬೆಲೆ ೭.೮೨ ರೂ.ಗಳಿದೆ. ಇದರಿಂದಾಗಿ ರೈತರು ೦.೭೬ ಕೆ.ಜಿ.ಯಷ್ಟು ಭತ್ತ ಮಾರಾಟ ಮಾಡಿದರೆ ಒಂದು ಕೆ.ಜಿ. ನೈಟ್ರೋಜನ್ ಗೊಬ್ಬರ ಸಿಗುತ್ತದೆ ಆದೇ ನಮ್ಮಲ್ಲಿ ಒಂದು ಕೆ.ಜಿ. ಭತ್ತದ ಬೆಲೆ ೮೫ ಪೈಸೆ ಇದ್ದರೆ, ನೈಟ್ರೋಜನ್ ಬೆಲೆ ಕೆ.ಜಿಗೆ ೩ ರೂ.೯೦ ಪೈಸೆ ಇದೆ. ಈ ಕಾರಣದಿಂದ ಇಲ್ಲಿ ರೈತರು ೪.೧೨ ಕೆ.ಜಿ, ಭತ್ತ ಮಾರಾಟ ಮಾಡಿದರೆ ಒಂದು ಕೆ.ಜಿ. ನೈಟ್ರೋಜನ್ ಗೊಬ್ಬರ ಸಿಗಬಹುದು. ಒಟ್ಟಿನಲ್ಲಿ ನಮ್ಮ ದೇಶದಲ್ಲಿ ರೈತರಿಗೆ ಸರಿಯಾದ ಧಾರಣೆ ಸಿಗುತ್ತಿಲ್ಲವೆಂದು ಹೇಳಬಹುದು. ಇಲ್ಲಿ ರೈತರು ಮಾಡತಕ್ಕಂಥ ಖರ್ಚಿಗೆ ಸರಿಯಾದ ಪ್ರತಿಫಲ ಸಿಗುತ್ತಿಲ್ಲ, ಇದನ್ನು ತಾವು ವಿಚಾರ ಮಾಡಿ ನೋಡುತ್ತಿಲ್ಲ ;

ಶ್ರೀ ಕೆ. ಎಚ್. ರಂಗನಾಥ್.—ತಮ್ಮನ್ನು ಪಾರ್ಲಿಮೆಂಟಿಗೆ ಕಳುಹಿಸುವುದು ಒಳ್ಳೆಯದೆಂದು ಕಾಣುತ್ತದೆ. ಏಕೆಂದರೆ, ತಮಗೆ ಹಿಂದಿ, ಉರ್ದು, ಇಂಗ್ಲೀಷ್ ಭಾಷೆಗಳೆಲ್ಲಾ ಬರುತ್ತವೆ. ಅಲ್ಲಿ ತಾವು ಈ ವಿಚಾರವನ್ನೆಲ್ಲಾ ಹೇಳಿದರೆ, ಅದರಿಂದ ನಮ್ಮ ರಾಜ್ಯಕ್ಕೂ ಅನುಕೂಲವಾಗುತ್ತದೆ. ತಾವು ಜಪಾನ್ ದೇಶದ ಉದಾಹರಣೆಯನ್ನು ಇಲ್ಲಿ ಕೊಟ್ಟರೆ ಹೇಗೆ ? ಅದನ್ನು ಪಾರ್ಲಿಮೆಂಟಿನಲ್ಲಿ ಕೊಡಬೇಕು. ಪೆಟ್ರೋಲ್ ಬೆಲೆ ಎಷ್ಟೇ ಜಾಸ್ತಿಯಾಗಲಿ, ಅದನ್ನು ಕೊಂಡುಕೊಳ್ಳತಕ್ಕಂಥ ಶಕ್ತಿ ಜಪಾನ್ ದೇಶದವರಿಗೆ ಇದೆ. ಆದರೆ ಈ ದೇಶದಲ್ಲಿ ಪೆಟ್ರೋಲ್ ಬೆಲೆ ಈಗಾಗಲೇ ಬಹಳ ಜಾಸ್ತಿಯಾಯಿತೆಂದು ಜನರು ಅಳುತ್ತಿದ್ದಾರೆ. ಮಧ್ಯಕಾಲಿನ ಚುನಾವಣೆ ಏನಾದರು ನಡೆದರೆ, ನಾವೆಲ್ಲರೂ ಸೇರಿ ತಮ್ಮನ್ನು ಪಾರ್ಲಿಮೆಂಟಿಗೆ ಚುನಾವಣೆಯಲ್ಲಿ ಗೆಲ್ಲಿಸುತ್ತೇವೆ. ಅಲ್ಲಿ ತಾವು ಇದನ್ನೆಲ್ಲಾ ಹೇಳಿ.

ಶ್ರೀ ಭೀಮಣ್ಣ ಖಂಡ್ರೆ.—ಒಳ್ಳೆಯ ವಿಚಾರಗಳನ್ನು ನಾವು ಹೇಳಿದಾಗ ಅದನ್ನು ತಾವು ಪರಿಶೀಲಿಸಿ ನೋಡಬೇಕು. ಮತ್ತು ಈಗ ಆಗಿರುವಂತಹ ತಪ್ಪುಗಳನ್ನು ಒಪ್ಪಿಕೊಂಡು ಸರಿಪಡಿಸಲು ಪ್ರಯತ್ನ ಮಾಡಬೇಕು, ಆದರೆ ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲಾರದೆ. ನಮ್ಮನ್ನು ಪಾರ್ಲಿಮೆಂಟಿಗೆ ಹೋಗಿರಿ, ಜಪಾನ್ ದೇಶಕ್ಕೆ ಹೋಗಿರಿ ಎಂದು ಹೇಳುವುದು ಸರಿಯಾದ ಕ್ರಮವಲ್ಲ. ಇಲ್ಲಿ ರೈತರ ಅನುಕೂಲಕ್ಕಾಗಿ ಯಾವ ಕ್ರಮವನ್ನೂ ತಾವು ತೆಗೆದುಕೊಳ್ಳುತ್ತಿಲ್ಲ ಆದರೆ ಜಾತಿಯ ಬಗ್ಗೆ ಕ್ರಮ ತೆಗೆದುಕೊಳ್ಳಲು ಒಂದು ಆಯೋಗ ರಚನೆ ಮಾಡಿದಿರಿ. ಆಯೋಗದ ವರದಿಯನ್ನು ಜಾರಿಗೆ ಕೊಟ್ಟಿರುವುದು ಸರಿಯಲ್ಲವೆಂದು ಹೈಕೋರ್ಟಿನವರು ತೀರ್ಮಾನ ಕೊಟ್ಟರು. ಅನಂತರವೂ ಸಹ ಆ ವರದಿಯನ್ನು ತಮ್ಮದೇ ಆದ ರೀತಿಯಲ್ಲಿ ಜಾರಿಗೆ ತರಲು ಹೊರಟ್ಟಿದ್ದೀರಿ. ಇದು ಸರಿಯೇ ? ಇಲ್ಲಿ ಮುಖ್ಯ ಮಂತ್ರಿಗಳು, ಮಂತ್ರಿಗಳು ತಮಗೆ ಬೇಕಾದವರಿಗೆ, ತಮ್ಮ ಮಕ್ಕಳಿಗೆ ತಮ್ಮ ಅಳಿಯಂದಿರಿಗೆ, ತಮ್ಮ ಸಂಬದೀಕರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆಯೇ ಹೊರತು. ರೈತರಿಗೆ ಅನುಕೂಲವಾಗುವಂತಹ ಯಾವ ಕೆಲಸಗಳನ್ನೂ ಮಾಡುತ್ತಿಲ್ಲ ?

ನಾನು ಹೇಳುತ್ತೇನೆ, ಇವೊತ್ತು ನಮ್ಮ ರಾಜ್ಯದಲ್ಲಿ ೩½ ಕೋಟಿ ಜನ ಇದ್ದಾರೆ. ಈ ಜನಗಳನ್ನು ಉದ್ಧಾರ ಮಾಡುವ ಬಗ್ಗೆ ಈಗಾಗಲೇ ಕಾಂಗ್ರೆಸ್‌ನವರು ಸುಮಾರು ೩೦ ವರ್ಷಗಳ ಸಮಯವನ್ನು ತೆಗೆದುಕೊಂಡಿದ್ದಾರೆ. ಆದರೆ ಜನತೆ ನಿರೀಕ್ಷಿಸಿದಷ್ಟು ಉದ್ಧಾರ ಇನ್ನೂ ಆಗಿಲ್ಲ. ಈಗಾಗಲೇ ೬ ತಿಂಗಳಿಂದ ರೈತರು ಸಂಘಟನೆಯಾಗಿದ್ದಾರೆ. ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಸತ್ಯಾಗ್ರಹ ಮಾಡುವುದಕ್ಕೆ ತಯಾರಾಗಿದ್ದಾರೆ. ಇದರ ಕಡೆ ಸರ್ಕಾರದವರು ತಮ್ಮ ಲಕ್ಷ್ಯವನ್ನು ಕೊಡಬೇಕು. ನಮ್ಮ ರಾಜ್ಯದಲ್ಲಿರತಕ್ಕ ೨ ಲಕ್ಷ ೬೭ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ಸರ್ಕಾರದವರು ಏನು ದರವನ್ನು ನಿಗದಿ ಮಾಡಿದ್ದಾರೆ ಅದು ನ್ಯಾಯವಾಗಿಲ್ಲ. ನಮ್ಮ ಪಕ್ಕದ ರಾಜ್ಯವಾದ ಮದ್ರಾಸಿನಲ್ಲಿ ಒಂದು ಯೂನಿಟ್ ವಿದ್ಯುಚ್ಛಕ್ತಿಗೆ ೬ ಪೈಸೆಯನ್ನು ಹೆಚ್ಚು ಮಾಡಿದಾಗ ಚಳುವಳಿ ಮಾಡಿ ೬ ಸಾವಿರ ಜನ ರೈತರು ಜೈಲಿಗೆ ಹೋದರು. ಹೀಗಿರುವಾಗ ಈಗ ನಮ್ಮ ರಾಜ್ಯದಲ್ಲಿ ಒಂದು ಯೂನಿಟ್ಟಿಗೆ ೨೭ ಪೈಸೆಯನ್ನು ನಿಗದಿ ಮಾಡಿರುವುದು ನ್ಯಾಯವಾದುದಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಯೋಚನೆ ಮಾಡಿ ಅವರಿಗೆ ಏನು ಸಹಾಯ ಮಾಡಬೇಕೋ ಅದನ್ನು ಕೂಡಲೇ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ರೈತರ ಬಗ್ಗೆ ಆದಷ್ಟು ಶೀಘ್ರವಾಗಿ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ ರಿಯಾಯಿತಿ ದರದಲ್ಲಿ ಒದಗಿಸುವುದಕ್ಕೆ ಏರ್ಪಾಡು ಮಾಡಬೇಕು. ಮತ್ತು ಅವರಿಗೆ ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಸಕಾಲಕ್ಕೆ ಸುಲಭ ಬೆಲೆಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದೇ ಹೋದರೆ ನಾನು ಛಾಲೇಂಜ್ ಮಾಡುತ್ತೇನೆ, ೩½ ಕೋಟಿ ಜನ ಏನಿದ್ದಾರೆ ಅವರು ಸುಮ್ಮನೆ ಕೂರುವುದಿಲ್ಲ. ಕಿಸಾನರು, ರೈತರು ಸರ್ಕಾರದವರು ತಳೆದಿರುವ ಧೋರಣೆಯನ್ನು ಟಾಲರೇಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಸರ್ಕಾರದವರು ರೈತರ ಉದ್ಧಾರದ ಬಗ್ಗೆ ತಮ್ಮ ಗಮನವನ್ನು ಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER:—Discussion on the demands is concluded and the Hon. Ministers will reply to morrow after the Question Hour. Now, the House stands adjourned to meet again at 12 Noon tomorrow.

The House adjourned at Forty Two Minutes past Six of the Clock to meet again at Twelve of the Clock on Tuesday, the 15th May 1979.